ಕರ್ನಾಟಕ ಸರ್ಕಾರ

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ

(ಕರ್ನಾಟಕ ಅಧಿನಿಯಮ ಸಂ. 21, 1966)

# ಕರ್ನಾಟಕ ಅಬ್ಕಾರಿ ಅಧಿನಿಯಮ, 1965

ಬೆಂಗಳೂರು:

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆ ಇಲಾಖೆಯ ನಿರ್ದೇಶಕರಿಂದ ಸರ್ಕಾರಿ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟಿದೆ

## ಕರ್ನಾಟಕ ಅಬ್ಕಾರಿ ಅಧಿನಿಯಮ 1965 (1966ರ 21)

### ಅಧ್ಯಾಯ – 1

### ಪ್ರಾರಂಭಿಕ


| | ಪ್ರಕರಣಗಳು: | ಪುಟಗಳು |
|---|---|---|
| 1. | ಸಂಕ್ಷಿಪ್ತ, ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ | 2 |
| 2. | ಪರಿಭಾಷೆಗಳು | 2 |


### ಅಧ್ಯಾಯ – 2

### ಸಿಬ್ಬಂದಿ ಮತ್ತು ನಿಯಂತ್ರಣ


| | | |
|---|---|---|
| 3. | ಅಬ್ಕಾರಿ ಕಮಿಶನರನ ನೇಮಕ | 5 |
| 4. | ಡೆಪ್ಯುಟಿ ಕಮಿಶನರು | 6 |
| 5. | ಅಬ್ಕಾರಿ ಸೂಪರಿಂಟೆಂಡೆಂಟರ ಮತ್ತು ಡೆಪ್ಯೂಟಿ ಸೂಪರಿಂಟೆಂಡೆಂಟರ ನೇಮಕ | 6 |
| 6. | ಅಬ್ಕಾರಿ ಇನ್ಸ್‌ಪೆಕ್ಟರುಗಳ ಮತ್ತು ಅಬ್ಕಾರಿ ಸಬ್ ಇನ್ಸ್‌ಪೆಕ್ಟರುಗಳ ಮತ್ತು ಇತರ ಅಧೀನ ಅಧಿಕಾರಿಗಳ ನೇಮಕ | 7 |
| 7. | ಶಕ್ತಿಗಳ ಪ್ರತ್ಯಾಯೋಜನೆ | 7 |


### ಅಧ್ಯಾಯ – 3

### ಆಮದು, ರಫ್ತು ಮತ್ತು ಸಾಗಾಣಿಕೆ


| | | |
|---|---|---|
| 8. | ಮಾದಕದ ಆಮದು | 7 |
| 9. | ಮಾದಕದ ರಫ್ತು | 8 |
| 10. | ಮಾದಕದ ಸಾಗಾಣಿಕೆಯ ನಿಷೇಧ | 8 |
| 11. | ಮಾದಕದ ಸಾಗಾಣಿಕೆ | 8 |
| 12. | ಸಾಗಾಣಿಕೆಗೆ ಅನುಮತಿ ಪತ್ರಗಳು | 8 |


### ಅಧ್ಯಾಯ – 4

### ತಯಾರಿಕೆ, ಸ್ವಾಧೀನ ಮತ್ತು ಮಾರಾಟ


| | | |
|---|---|---|
| 13. | ಲೈಸೆನ್ಸಿನ ಮೇರೆಗೆ ಹೊರತು ಅಬ್ಕಾರಿ ಶುಲ್ಕ ವಿಧಿಸಬಹುದಾದ ವಸ್ತುಗಳ ತಯಾರಿಕೆ ಇತ್ಯಾದಿಗಳ ನಿಷೇಧ | 9 |
| 14. | ನಿಯಮಿಸಿದುದಕ್ಕಿಂತ ಹೆಚ್ಚು ಪರಿಣಾಮದಲ್ಲಿ ಅಬ್ಕಾರಿ ಶುಲ್ಕ ವಿಧಿಸಬಹುದಾದ ವಸ್ತುಗಳ ಸ್ವಾಧೀನ | 9 |
| 15. | ಅಬ್ಕಾರಿ ಶುಲ್ಕ ವಿಧಿಸಬಹುದಾದ ವಸ್ತುಗಳನ್ನು ಲೈಸೆನ್ಸಿಲ್ಲದೆ ಮಾರಾಟಕ್ಕೆ ನಿಷೇಧ | 10 |
| 16. | ಬಟ್ಟಿ ಕಾರ್ಖಾನೆಗಳ ಮತ್ತು ಉಗ್ರಾಣಗಳ ಸ್ಥಾಪನೆ | 11 |
| 17. | ತಯಾರಿಕೆ ಇತ್ಯಾದಿಗಳ ಅಧಿಕಾರವನ್ನು ಗುತ್ತಿಗೆಗೆ ಕೊಡುವ ಶಕ್ತಿ | 11 |
| 18. | ಹೆಂಡ ತೆಗೆಯಲು ಗುತ್ತಿಗೆದಾರನ ಅನುಮತಿ | 12 |
| 19. | ಅಳತೆ ಮತ್ತು ಪರೀಕ್ಷೆಯ ಬಗ್ಗೆ ಲೈಸೆನ್ಸುದಾರರ ಕರ್ತವ್ಯಗಳು | 12 |

ಪುಟಗಳು

20. ಮಕ್ಕಳನ್ನು ಮತ್ತು ಹೆಂಗಸರನ್ನು ನಿಯೋಜಿಸುವುದಕ್ಕೆ ನಿಷೇಧ 13

21. ಸಾರ್ವಜನಿಕ ಶಾಂತಿಯ್ನು ಕಾಪಾಡಲು ಅಂಗಡಿಗಳನ್ನು ಮುಚ್ಚುವುದು 13

## ಅಧ್ಯಾಯ – 5

## ಅಬ್ಕಾರಿ ಶುಲ್ಕ ಮತ್ತು ಪ್ರತಿ ಶುಲ್ಕ

22. ಅಬ್ಕಾರಿ ಶುಲ್ಕ ವಿಧಿಸಬಹುದಾದ ವಸ್ತುಗಳ ಮೇಲೆ ಅಬ್ಕಾರಿ ಶುಲ್ಕ ಅಥವಾ ಪ್ರತಿಶುಲ್ಕ 13

23. ಅಂಥ ಶುಲ್ಕಗಳನ್ನು ವಿಧಿಸುವ ರೀತಿಗಳು 14

24. ಗುತ್ತಿಗೆಗೆ ಕೊಡುವ ಸಂಬಂಧದಲ್ಲಿ ಅಬ್ಕಾರಿ ಶುಲ್ಕ 14

25. ಮರಗಳಿಂದ ಹೆಂಡ ಇಳಿಸುವ ಬಗೆಗಿನ ಕರವನ್ನು ಯಾರಿಂದ ವಸೂಲು ಮಾಡಬೇಕು 15

## ಅಧ್ಯಾಯ – 6

## ಲೈಸೆನ್ಸುಗಳು ಮತ್ತು ಅನುಮತಿ ಪತ್ರಗಳು

26. ಲೈಸೆನ್ಸು ಇತ್ಯಾದಿಗಳ ನಮೂನೆ ಮತ್ತು ಷರತ್ತುಗಳು 15

27. ಜಾಮೀನು ಮತ್ತು ಎದುರೊಪ್ಪಂದವನ್ನು ತೆಗೆದುಕೊಳ್ಳಲು ಶಕ್ತಿ 15

28. ತಾಂತ್ರಿಕ ದೋಷಗಳು, ಅಕ್ರಮಗಳು ಮತ್ತು ಲೋಪಗಳು 15

29. ಲೈಸೆನ್ಸು ಇತ್ಯಾದಿಗಳನ್ನು ರದ್ದು ಮಾಡಲು ಅಥವಾ ನಿಲಂಬನ ಮಾಡಲು ಶಕ್ತಿ 16

30. ಲೈಸೆನ್ಸನ್ನು ಹಿಂತೆಗೆದುಕೊಳ್ಳಲು ಶಕ್ತಿ 16

31. ಲೈಸೆನ್ಸನ್ನು ಬಿಟ್ಟುಕೊಡುವುದು 17

## ಅಧ್ಯಾಯ – 7

## ಅಪರಾಧಗಳು ಮತ್ತು ದಂಡಗಳು

32. ವಿಧಿ ವಿರುದ್ಧ ಆಮದು ಇತ್ಯಾದಿಗಳ ಬಗ್ಗೆ ದಂಡ 17

33. ಗುಣಾಪಹೃತ ಮದ್ಯಸಾರವನ್ನು ಮನುಷ್ಯೋಪಯೋಗಕ್ಕೆ ತಕ್ಕುದುದನ್ನಾಗಿ ಮಾಡುವುದಕ್ಕೆ ದಂಡ 18

34. ವಿಧಿ ವಿರುದ್ಧ ಸ್ವಾಧೀನಕ್ಕೆ ದಂಡ 19

35. ಅನ್ಯಥಾ ಉಪಬಂಧಿಸಿದ ಅಪರಾಧಕ್ಕಾಗಿ ದಂಡ 19

36. ಲೈಸೆನ್ಸುದಾರ ಮೊದಲಾದವರ ದುರ್ವರ್ತನೆಗೆ ದಂಡ 19

37. ಲೈಸೆನ್ಸು ಪಡೆದ ಮಾರಾಟಗಾರ ಅಥವಾ ತಯಾರಿಕೆದಾರರಿಂದ ಕಲಬೆರಕೆ ಇತ್ಯಾದಿಗಳಿಗೆ ದಂಡ 20

38. ಔಷಧಿ ವಸ್ತು ಅಂಗಡಿ ಇತ್ಯಾದಿಗಳಲ್ಲಿ ಸೇವನೆಗಾಗಿ ದಂಡ 21

38.ಕ ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡುವ ಉದ್ದೇಶಕ್ಕೆ ಆವರಣ ಇತ್ಯಾದಿಗಳನ್ನು ಉಪಯೋಗಿಸಲು ಅವಕಾಶ ಕೊಡುವುದಕ್ಕೆ ದಂಡ 22

39. ಒಬ್ಬನ ಪರವಾಗಿ ಮತ್ತೊಬ್ಬನು ತಯಾರಿಸುವುದು, ಮಾರಾಟ ಮಾಡುವುದು ಅಥವಾ ಸ್ವಾಧೀನ ಹೊಂದಿರುವುದು 22

40. ಕೆಲವು ಸಂದರ್ಭದಲ್ಲಿ ಅಪರಾಧ ನಡೆದಿದೆಯೆಂಬ ಬಗ್ಗೆ ಪೂರ್ವಭಾವನೆ 22

ಪುಟಗಳು

41. ನೌಕರರ ಕೃತ್ಯಗಳಿಗಾಗಿ ಲೈಸೆನ್ಸುದಾರನ ಕ್ರಿಮಿನಲ್ ಹೊಣೆಗಾರಿಕೆ 22

42. ಹಿಂದೆ ಸಿದ್ಧಾಪರಾಧಿಯಾಗಿದ್ದರೆ ಹೆಚ್ಚಿನ ದಂಡನೆ 23

42.ಕ. ಕೆಲವು ಅಪರಾಧಗಳನ್ನು ಮಾಡದಿರುವ ಬಗ್ಗೆ ಜಾಮೀನು 23

43. ಕೆಲವು ವಸ್ತುಗಳು ಮುಟ್ಟುಗೋಲಿಗೆ ಗುರಿಯಾಗಿರುವುದು 23

44. ಮುಟ್ಟುಗೋಲಿನ ಆದೇಶ 24

45. ಪರಿಹಾರ ತೆತ್ತ ಅಪರಾಧಗಳ ಶಮನ 24

45.ಕ. ಅಬ್ಕಾರಿ ಅಧಿಕಾರಿಗಳು ದಂಡ ವಿಧಿಸುವುದು 25

46. ಉಪದ್ರವಕಾರಿ ಶೋಧನೆ, ಅಧಿಗ್ರಹಣ ತಡೆಹಿಡಿದಿರಿಸುವಿಕೆ ಅಥವಾ ದಸ್ತಗಿರಿ ಮಾಡುವ ಅಬ್ಕಾರಿ ಅಧಿಕಾರಿಗೆ ದಂಡ 25

47. ಕರ್ತವ್ಯ ಮಾಡಲು ನಿರಾಕರಿಸುವ ಅಬ್ಕಾರಿ ಅಧಿಕಾರಿಗೆ ದಂಡ 26

48. ಉಪದ್ರವಕಾರಿ ವಿಳಂಬಕ್ಕೆ ದಂಡ 26

49. ತಪ್ಪಿಸಿಕೊಂಡು ಹೋಗುವಂತೆ ದುಷ್ಪ್ರೇರಣೆ ಇತ್ಯಾದಿಗಳನ್ನು ಮಾಡುವುದಕ್ಕೆ ದಂಡ 26

## ಅಧ್ಯಾಯ – 8

## ಅಪರಾಧಗಳ ಪತ್ತೆ, ಅನ್ವೇಷಣೆ ಮತ್ತು ಆರೋಪ ವಿಚಾರಣೆ

50. ಭೂ ಹಿಡುವಳಿದಾರರು, ಅಧಿಕಾರಿಗಳು ಮತ್ತು ಇತರರು ಮಾಹಿತಿ ಕೊಡುವುದು 26

51. ತಯಾರಿಕೆ ಮತ್ತು ಮಾರಾಟದ ಸ್ಥಳಗಳನ್ನು ಪ್ರವೇಶಿಸಲು ಮತ್ತು ಪರಿಶೀಲಿಸಲು ಶಕ್ತಿ 27

52. ವಾರಂಟಿಲ್ಲದೆ ದಸ್ತಗಿರಿ ಮಾಡುವುದು, ಮುಟ್ಟುಗೋಲಿಗೆ ಗುರಿಯಾಗಬಹುದಾದ ವಸ್ತುಗಳನ್ನು ಅಧಿಗ್ರಹಣ ಮಾಡುವುದು ಮತ್ತು ಶೋಧ ಮಾಡುವುದು 27

53. ವಾರಂಟು ಹೊರಡಿಸಲು ಮ್ಯಾಜಿಸ್ಟ್ರೇಟನ ಶಕ್ತಿ 28

54. ವಾರಂಟಿಲ್ಲದೆ ಶೋಧ ಮಾಡುವ ಶಕ್ತಿ 28

55. ಅನ್ವೇಷಣೆಯ ವಿಷಯದಲ್ಲಿ ಅಬ್ಕಾರಿ ಅಧಿಕಾರಿಗಳ ಶಕ್ತಿ 28

56. ಅನ್ವೇಷಣಾಧಿಕಾರಿಯ ವರದಿ 29

57. ಅಬ್ಕಾರಿ ಅಧಿಕಾರಿಯ ವರದಿ 29

58. ದಸ್ತಗಿರಿ, ಶೋಧನೆ ಇತ್ಯಾದಿಗಳನ್ನು ಮಾಡುವ ಬಗೆ 29

59. ವಾರಂಟಿಲ್ಲದೆ ದಸ್ತಗಿರಿ ಮಾಡಿದ ಸಂದರ್ಭದಲ್ಲಿ ಹಾಜರಾಗುವ ಬಗ್ಗೆ ಜಾಮೀನು 29

59.ಕ. ಅಬ್ಕಾರಿ ಇನ್ಸ್‌ಪೆಕ್ಟರರ ಪ್ರಮಾಣ ಪತ್ರವು ಸಾಕ್ಷ್ಯವಾಗಿರುವುದು 30

60. ಪ್ರಾಸಿಕ್ಯೂಷನಿನ ಪ್ರಕ್ರಿಯೆ 30

60.ಕ. ಮ್ಯಾಜಿಸ್ಟ್ರೇಟನು ಅನುಸರಿಸಬೇಕಾದ ಪ್ರಕ್ರಿಯೆ 31

## ಅಧ್ಯಾಯ – 9

## ಅಪೀಲುಗಳು ಮತ್ತು ಪುನರೀಕ್ಷಣೆ

61. ಅಪೀಲುಗಳು 31

62. ಪುನರೀಕ್ಷಣೆ 31

## ಅಧ್ಯಾಯ – 10

### ಸಂಕೀರ್ಣ


| | | |
|---|---|---|
| 63. | ಸರಕಾರಕ್ಕೆ ಬರಬೇಕಾದ ಬಾಕಿಗಳ ವಸೂಲಿ | 32 |
| 64. | ತಪ್ಪಿದವರ ಸ್ವತ್ತಿನ ಮೇಲೆ ಸರಕಾರಕ್ಕೆ ಧಾರಣಾಧಿಕಾರ | 32 |
| 65. | 17ನೇ ಪ್ರಕರಣದ ಮೇರೆಗೆ ಗುತ್ತಿಗೆದಾರನು ಬಾಕಿಗಳನ್ನು ವಸೂಲು ಮಾಡಿಕೊಳ್ಳುವುದು | 32 |
| 66. | ರಫ್ತು ಮಾಡಿದ ಮದ್ಯದ ಸಂದರ್ಭದಲ್ಲಿ ಮರುಪಾವತಿ | 32 |
| 67. | ವಿನಾಯಿತಿ ಇತ್ಯಾದಿ ಕೊಡಲು ರಾಜ್ಯ ಸರ್ಕಾರದ ಶಕ್ತಿ | 33 |
| 68. | ಈ ಅಧಿನಿಯಮದ ಮೇರೆಗೆ ಕೈಕೊಂಡ ಕ್ರಮದ ಬಗ್ಗೆ ರಕ್ಷಣೆ | 33 |
| 68.ಕ. | ಕರ್ತವ್ಯದ ಹೆಸರಿನಲ್ಲಿ ಮಾಡಿದ ಕೃತ್ಯಗಳ ಬಗ್ಗೆ ರಾಜ್ಯ ಸರಕಾರದ ಮಂಜೂರಾತಿಯಿಲ್ಲದೆ ದಾವೆಗಳನ್ನು ಅಥವಾ ಪ್ರಾಸಿಕ್ಯೂಷನ್‌ಗಳನ್ನು ಸ್ವೀಕರಿಸಕೂಡದು | 33 |
| 69. | ದಾವೆಗಳ ಅವಧಿ ಪರಿಮಿತಿ | 34 |
| 70. | ಕಂಪೆನಿ ಇತ್ಯಾದಿಗಳಿಂದ ಅಪರಾಧ | 34 |
| 71. | ನಿಯಮ ರಚನಾ ಶಕ್ತಿ | 34 |
| 72. | ನಿರಸನ ಮತ್ತು ಉಳಿಸುವಿಕೆ | 35 |

ಕರ್ನಾಟಕ ಸರ್ಕಾರ

# 1966ರ 21ನೇ ಕರ್ನಾಟಕ ಅಧಿನಿಯಮ

(ಕರ್ನಾಟಕ ರಾಜ್ಯಪತ್ರದಲ್ಲಿ ಮೊದಲನೆಯ ಸಲ 1966ರ ಆಗಸ್ಟ್ ಹದಿನೆಂಟನೆಯ ದಿನಾಂಕದಂದು ಪ್ರಕಟವಾಗಿದೆ)

## ಕರ್ನಾಟಕ ಅಬ್ಕಾರಿ ಅಧಿನಿಯಮ, 1965

(1970ರ 1ನೇ ಅಧಿನಿಯಮ ಮತ್ತು 1971ರ 1ನೇ ಅಧಿನಿಯಮಗಳಿಂದ ತಿದ್ದುಪಡಿಯಾಗಿದೆ.)

(1966ರ ಆಗಸ್ಟ್ ಮೂರನೆಯ ದಿನಾಂಕದಂದು ರಾಷ್ಟ್ರಪತಿಯ ಅನುಮತಿ ಪಡೆದಿದೆ)

ಇದು ಕರ್ನಾಟಕ ರಾಜ್ಯದಲ್ಲಿ ಏಕರೂಪದ ಅಬ್ಕಾರಿ ವಿಧಿಯನ್ನು ಉಪಬಂಧಿಸುವ ಅಧಿನಿಯಮ.

ಕರ್ನಾಟಕ ರಾಜ್ಯದಲ್ಲಿ, ಮದ್ಯ ಮತ್ತು ಮಾದಕ ದ್ರವ್ಯಗಳ ಉತ್ಪಾದನೆ, ತಯಾರಿ, ಸ್ವಾಧೀನ, ಆಮದು, ರಫ್ತು, ಸಾಗಾಣಿಕೆ, ಖರೀದಿ ಮತ್ತು ಮಾರಾಟಗಳಿಗೆ ಸಂಬಂಧಿಸಿ ಏಕರೂಪವಾದ ವಿಧಿಯನ್ನು ರಚಿಸುವುದಕ್ಕೆ ಮತ್ತು ಅವುಗಳ ಮೇಲೆ ಅಬ್ಕಾರಿ ಶುಲ್ಕವನ್ನು ವಿಧಿಸುವುದಕ್ಕೆ ಮತ್ತು ಈ ಮುಂದಿನ ಇತರ ಕೆಲವು ವಿಷಯಗಳ ಬಗ್ಗೆ ಉಪಬಂಧಿಸುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ಹದಿನಾರನೆಯ ವರ್ಷದಲ್ಲಿ ಮೈಸೂರು ರಾಜ್ಯದ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿಸಲಾಗಿದೆ.

## ಅಧ್ಯಾಯ-1

## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ:–** (1) ಈ ಅಧಿನಿಯಮವನ್ನು ಕರ್ನಾಟಕ ಅಬ್ಕಾರಿ ಅಧಿನಿಯಮ, 1965 ಎಂದು ಕರೆಯತಕ್ಕದ್ದು.

2. ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

[1](3) ಇದು ರಾಜ್ಯ ಸರಕಾರವು ಅಧಿಸೂಚನೆಯ ಮೂಲಕ ನೇಮಿಸುವಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(4) ಈ ಅಧಿನಿಯಮದ ಎಲ್ಲ ಉಪಬಂಧಗಳು, 1961ರ ಕರ್ನಾಟಕ ಪಾನ ನಿರೋಧ ಅಧಿನಿಯಮವು (1962ರ 17ನೇ ಕರ್ನಾಟಕ ಅಧಿನಿಯಮ) ಜಾರಿಯಲ್ಲಿರದ ರಾಜ್ಯದ ಪ್ರದೇಶಗಳಿಗೆ ಅನ್ವಯವಾಗತಕ್ಕದ್ದು ಮತ್ತು ಸದರಿ ಅಧಿನಿಯಮವು ಜಾರಿಯಲ್ಲಿದ್ದ ಪ್ರದೇಶಗಳಲ್ಲಿ ಸದರಿ ಅಧಿನಿಯಮದಲ್ಲಿ ಉಲ್ಲೇಖಿಸಿದ ಮಟ್ಟಿಗೆ ಅನ್ವಯಿಸತಕ್ಕದ್ದು.

---

1. ಈ ಅಧಿನಿಯಮವು 1967ರ ಸೆಪ್ಟೆಂಬರ್ 30ರಂದು (ಎಸ್.ಒ. 1665 ಎಚ್‌ಡಿ 154 ಇಡಿಸಿ 67-1) ನಂಬರಿನ 1967ರ ಆಗಸ್ಟ್ 28ನೇ ದಿನಾಂಕದ ಅಧಿಸೂಚನೆಯ ಮೇರೆಗೆ ಜಾರಿಗೆ ಬಂದಿದೆ.

**2. ಪರಿಭಾಷೆಗಳು:** ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,–

(1) "ಬೀರ್" ಎಂಬುದು, ಏಲ್ ಸ್ಟೌಟ್ ಮತ್ತು ಪೋರ್ಟ್ವರ್‌ಗಳನ್ನು ಒಳಗೊಳ್ಳುತ್ತದೆ;

(2) "ಸೀಸೆ ತುಂಬುವುದು" ಎಂದರೆ, ಮಾರಾಟದ ಉದ್ದೇಶಕ್ಕಾಗಿ, ತಯಾರಿಕೆಯ ಯಾವುದೇ ಪದ್ಧತಿಯನ್ನು ಅನುಸರಿಸಿರಲಿ, ಇಲ್ಲದಿರಲಿ, ಮರದ ಪೀಪಾಯಿ ಅಥವಾ ಇತರ ಪಾತ್ರೆಯಿಂದ ಸೀಸೆಗೆ, ಜಾಡಿಗೆ, ಫ್ಲಾಸ್ಕಿಗೆ ಅಥವಾ ಅದೇ ಬಗೆಯ ಬೇರೊಂದು ಪಾತ್ರೆಗೆ ಮದ್ಯವನ್ನು ತುಂಬುವುದು ಮತ್ತು ಇದು ಪುನಃ ಸೀಸೆಗೆ ತುಂಬುವುದನ್ನು ಒಳಗೊಳ್ಳುತ್ತದೆ;

(3) "ಸಾಗುವಳಿ" ಎಂಬುದು ಬೆಳೆಯುವಾಗ ಸಸಿಯನ್ನು ಎಚ್ಚರಿಕೆಯಿಂದ ನೋಡಿಕೊಳ್ಳುವುದನ್ನು ಅಥವಾ ರಕ್ಷಿಸುವುದನ್ನು ಒಳಗೊಳ್ಳುವುದು ಮತ್ತು ಅದನ್ನು ಬಿತ್ತನೆ ಮಾಡಿ ಬೆಳೆಸುವುದು ಎಂಬುದು ಅವಶ್ಯವಾಗಿ ಇಂಗಿತವಾಗಿರಬೇಕಾಗಿಲ್ಲ;

(4) "ಗುಣಾಪಹೃತ" ಎಂದರೆ ಮಾನವೋಪಯೋಗಕ್ಕೆ ಯೋಗ್ಯವಲ್ಲದ್ದಕ್ಕಾಗಿ ಮಾಡುವ ಉದ್ದೇಶಕ್ಕಾಗಿ ಗೊತ್ತುಪಡಿಸಿದ ಸಂಸ್ಕರಣಕ್ಕೆ ಒಳಪಟ್ಟುದು;

(5) "ಡೆಪ್ಯುಟಿ ಕಮಿಷನರ್" ಎಂದರೆ ರೆವಿನ್ಯೂ ಜಿಲ್ಲೆಯ ಡೆಪ್ಯುಟಿ ಕಮಿಶನರು;

(5ಕ) "ಅಬ್ಕಾರಿ ಡೆಪ್ಯುಟಿ ಕಮಿಷನರ್" ಎಂದರೆ 4ಕ ಪ್ರಕರಣದ ಮೇರೆಗೆ ನಿಯುಕ್ತನಾದ ಅಬ್ಕಾರಿ ಡೆಪ್ಯುಟಿ ಕಮಿಷನರು;

(6) "ಅಬ್ಕಾರಿ ಶುಲ್ಕಕ್ಕೆ ಗುರಿಯಾಗುವ ವಸ್ತುಗಳು" ಎಂದರೆ,–

(ಕ) ಯಾವುದೇ ಮದ್ಯ,

(ಖ) ಯಾವುದೇ ಮಾದಕ ದ್ರವ್ಯ,

(ಗ) ಅಫೀಮು, ಅಥವಾ

(ಘ) ರಾಜ್ಯ ಸರಕಾರವು ಅಧಿಸೂಚನೆಯ ಮೂಲಕ ಅಬ್ಕಾರಿ ಶುಲ್ಕಕ್ಕೆ ಗುರಿಯಾಗುವ ವಸ್ತುಗಳೆಂದು ಘೋಷಿಸಬಹುದಾದಂಥ ಇತರ ಮಂಪರ ದ್ರವ್ಯಗಳು, ಮಂಪರಕಗಳ ಮತ್ತು ಮಂಪರಕವಲ್ಲದ ದ್ರವ್ಯಗಳು;

(7) "ಅಬ್ಕಾರಿ ಕಮಿಶನರು" ಎಂದರೆ 3ನೇ ಪ್ರಕರಣದ ಮೇರೆಗೆ ಅಬ್ಕಾರಿ ಕಮಿಶನರು ಎಂದು ನಿಯುಕ್ತನಾದ ಅಧಿಕಾರಿ,

(8) "ಅಬ್ಕಾರಿ ಶುಲ್ಕ" ಮತ್ತು "ಪ್ರತಿ ಶುಲ್ಕ" ಎಂದರೆ, ಸಂದರ್ಭಾನುಸಾರ ಸಂವಿಧಾನದ ಏಳನೆಯ ಅನುಸೂಚಿಯ IIನೇ ಸೂಚಿಯ 51ನೇ ನಮೂದನೆಯಲ್ಲಿ ಹೇಳಿದಂಥ ಅಬ್ಕಾರಿ ಶುಲ್ಕ ಅಥವಾ ಪ್ರತಿಶುಲ್ಕ;

(9) "ಅಬ್ಕಾರಿ ಇನ್ಸ್‌ಪೆಕ್ಟರ್" ಎಂದರೆ 6ನೆಯ ಪ್ರಕರಣದ ಮೇರೆಗೆ ನಿಯುಕ್ತನಾದ ಅಬ್ಕಾರಿ ಇನ್ಸ್‌ಪೆಕ್ಟರ್;

(10) "ಅಬ್ಕಾರಿ ಅಧಿಕಾರಿ" ಎಂದರೆ, ಅಬ್ಕಾರಿ ಕಮಿಶನರ್, ಡೆಪ್ಯುಟಿ ಕಮಿಶನರು, (ಅಬ್ಕಾರಿ ಡೆಪ್ಯುಟಿ ಕಮಿಶನರು) ಅಥವಾ ವಿಧಿಬದ್ಧವಾಗಿ ನಿಯುಕ್ತನಾದ (ಪ್ರಕರಣ 5, ಪ್ರಕರಣ 5ಕ ಅಥವಾ ಪ್ರಕರಣ 6ರ) ಮೇರೆಗೆ ಶಕ್ತಿ ನಿಹಿತನಾದ ಯಾವನೇ ಅಧಿಕಾರಿ ಅಥವಾ ಇತರ ವ್ಯಕ್ತಿ;

(11) "ಅಬ್ಕಾರಿ ರಾಜಸ್ವ" ಎಂದರೆ ಈ ಅಧಿನಿಯಮದ ಅಥವಾ ಮದ್ಯ ಅಥವಾ ಮಾದಕ ದ್ರವ್ಯಗಳಿಗೆ ಸಂಬಂಧಿಸಿದ ಆಯಾ ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ವಿಧಿಯ ಉಪಬಂಧಗಳ ಮೇರೆಗೆ ವಿಧಿಸಿದ

ಅಥವಾ ಆದೇಶಿಸಿದ ಯಾವುದೇ ಶುಲ್ಕ, ಫೀಜು ಕರ, ಬಾಡಿಗೆ, ಜುಲ್ಮಾನೆ ಅಥವಾ ಮುಟ್ಟುಗೋಲಿನಿಂದ ಬಂದ ಅಥವಾ ಬರಬಹುದಾದ ರಾಜಸ್ವ;

(11ಕ) "ಅಬ್ಕಾರಿ ಮರ" ಎಂಬುದು ಅದರ ಹುಳಿಯೊಡೆದ ಅಥವಾ ಹುಳಿಯೊಡೆಯದ ರಸದಲ್ಲಿ ಮದ್ಯಾಂಶವಿರುವ ಮತ್ತು ಅದರಿಂದ ಹೆಂಡ ಅಥವಾ ಇತರ ಯಾವುದೇ ಮದ್ಯವನ್ನು ತಯಾರಿಸಬಹುದಾದ ಗುಲ್ಮೊಹವಾ, ತೆಂಗು, ಈಚಲು, ತಾಳೆ ಖರ್ಜೂರ ಬಗನಿ ಅಥವಾ ದೊಡ್ಡಸಾಲ ಮರ ಅಥವಾ ಯಾವುದೇ ಇತರ ಮರ;

(12) "ರಫ್ತು" ಎಂದರೆ, 1962ರ ಸೀಮಾಶುಲ್ಕ ಅಧಿನಿಯಮದ (1962ರ 52ನೇ ಕೇಂದ್ರ ಅಧಿನಿಯಮ) 2ನೇ ಪ್ರಕರಣದಲ್ಲಿ ಪರಿಭಾಷಿಸಿದ ಸೀಮಾಶುಲ್ಕಠಾಣೆಯಿಂದಲ್ಲದೆ ಅನ್ಯಥಾ ರಾಜ್ಯದ ಹೊರಗೆ ಒಯ್ಯುವುದು;

(13) "ವಿದೇಶಿ ಮದ್ಯ" ಎಂಬುದು ಭಾರತಕ್ಕೆ ಆಮದು ಮಾಡಿಕೊಳ್ಳುವ ಪ್ರತಿಯೊಂದು ಮದ್ಯವನ್ನೂ ಒಳಗೊಳ್ಳುವುದು;

(14) "ಭಾರತದಲ್ಲಿ ಆಮದು" ಎಂಬ ಪದಾವಳಿಯಲ್ಲಿ ಇರುವ ಆಮದು ಎನ್ನುವುದನ್ನುಳಿದು ಎಂದರೆ "ಆಮದು" ಎಂದರೆ ಸೀಮಾಶುಲ್ಕ ಅಧಿನಿಯಮದ (1962ರ 52ನೇ ಅಧಿನಿಯಮ) 2ನೆಯ ಪ್ರಕರಣದಲ್ಲಿ ಪರಿಭಾಷಿಸಿದಂತೆ ಸೀಮಾಶುಲ್ಕ ಠಾಣೆಯಿಂದಲ್ಲದೆ ಅನ್ಯಥಾ ರಾಜ್ಯದ ಒಳಗೆ ತರುವುದು;

(15) "ಭಾರತೀಯ ಮದ್ಯ" ಎಂದರೆ ಭಾರತಕ್ಕೆ ಆಮದು ಮಾಡಿಕೊಳ್ಳುವ ಜಿನ್, ಬ್ರಾಂದಿ, ವಿಸ್ಕಿ ಅಥವಾ ರಮ್ಮಿನಂತೆ ಅದೇ ರೀತಿಯಲ್ಲಿ ಉತ್ಪಾದಿಸಿದ, ತಯಾರಿಸಿದ ಅಥವಾ ಮಿಶ್ರಣ ಮಾಡಿದ ಮದ್ಯ ಮತ್ತು ಇದು, ಮದ್ಯಸಾರದಿಂದಾದ ಅಥವಾ ಅದನ್ನುಳ್ಳ ಮಿಲ್ಕಪಂಚ್, ಮತ್ತು ಇತರ ಮದ್ಯಗಳನ್ನೂ ಒಳಗೊಳ್ಳುತ್ತದೆ;

(16) "ಮಾದಕ" ಎಂದರೆ (18)ನೇ ಖಂಡದಲ್ಲಿ, ಪರಿಭಾಷಿಸಿದಂಥ ಯಾವುದೇ ಮದ್ಯ ಅಥವಾ (17)ನೇ ಖಂಡದಲ್ಲಿ ಪರಿಭಾಷಿಸಿದಂಥ ಯಾವುದೇ ಮಾದಕ ದ್ರವ್ಯ;

(17) "ಮಾದಕ ದ್ರವ್ಯ" ಎಂದರೆ;–

(i) ಭಂಗಿ, ಸಿದ್ದಿ ಆಥವಾ ಗಾಂಜಾ ಎಂದು ಕರೆಯಲ್ಪಡುವ ಎಲ್ಲ ಪ್ರಭೇದಗಳೂ ಸೇರಿ ಭಾರತೀಯ ಮಾದಕ ನಾರುಗಿಡದ ಎಲೆಗಳು, ಸಣ್ಣ ಕಾಂಡಗಳು ಮತ್ತು ಹೂ ಬಿಡುವ ಅಥವಾ ಹಣ್ಣಾಗುವ ತುದಿಗಳು;

(ii) ಚರಸ್ ಎಂದರೆ, ಪಿಂಡಿಕಟ್ಟಲು ಮತ್ತು ಸಾಗಿಸಲು ಅವಶ್ಯಕವಾದುದನ್ನುಳಿದು ಯಾವುದೇ ವ್ಯತ್ಯಾಸಕ್ಕೆ ಒಳಪಡಿಸಿರದ ಭಾರತೀಯ ನಾರುಗಿಡದಿಂದ ಪಡೆದುಕೊಂಡ ಅಂಟು;

(iii) ಮೇಲೆ ಹೇಳಿದ ಯಾವುದೇ ಪ್ರಕಾರದ ಮಾದಕ ದ್ರವ್ಯಗಳ ಮದ್ಯವರ್ತಿ ವಸ್ತುಗಳ ಸಹಿತವಾದ ಅಥವಾ ರಹಿತವಾದ ಯಾವುದೇ ಮಿಶ್ರಣ, ಅಥವಾ ಅವುಗಳಿಂದ ತಯಾರಿಸಿದ ಯಾವುದೇ ಪಾನೀಯ; ಮತ್ತು

(iv) ರಾಜ್ಯ ಸರಕಾರವು ಅಧಿಸೂಚನೆಯ ಮೂಲಕ ಮಾದಕ ದ್ರವ್ಯವೆಂದು ಘೋಷಿಸುವ ಇತರ ಮಾದಕ ದ್ರವ್ಯ ಅಥವಾ ಮಂಪರು ಪದಾರ್ಥ, ಅಂಥ ಪದಾರ್ಥವು ಅಫೀಮು, ಕೋಕೆ ಎಲೆ ಅಥವಾ 1930ರ ಅಪಾಯಕಾರಿ ದ್ರವ್ಯಗಳ ಅಧಿನಿಯಮ, (1930ರ 1ನೇ ಕೇಂದ್ರ ಅಧಿನಿಯಮ) 2ನೆಯ ಪ್ರಕರಣದ ಮೇರೆಗೆ ಪರಿಭಾಷಿಸಿದಂತೆ ತಯಾರಿಸಿದ ದ್ರವ್ಯ ಆಗಿರಕೂಡದು;

(18) **"ಮದ್ಯ"** ಎಂಬುದು,–

(ಕ) ದ್ರಾಕ್ಷಾರಸದ ಮದ್ಯಸಾರಗಳು, ಗುಣಾಪಹೃತ ಮದ್ಯಸಾರಗಳು, ದ್ರಾಕ್ಷಾರಸ, ಬೀರು, ಹೆಂಡ ಮತ್ತು ಮದ್ಯಾಂಶ ಅಥವಾ ಅದರ ಕೊಳೆಯಿಂದಾದ ವಾಷು ಇರುವ ಅಥವಾ ಅದನ್ನು ಒಳಗೊಂಡಿರುವ ಎಲ್ಲ ದ್ರವ್ಯಗಳು; ಮತ್ತು

(ಖ) ರಾಜ್ಯ ಸರಕಾರವು ಈ ಅಧಿನಿಯಮದ ಉದ್ದೇಶಕ್ಕಾಗಿ, ಅಧಿಸೂಚನೆಯ ಮೂಲಕ ಮದ್ಯವೆಂದು ಘೋಷಿಸಬಹುದಾದ ಯಾವುದೇ ಇತರ ಮಾದಕ ಪದಾರ್ಥ.

(19) **"ತಯಾರಿಕೆ"** ಎಂಬುದು ಹುಳಿ ಹಿಡಿದ, ಮದ್ಯಸಾರವುಳ್ಳ ಅಥವಾ ಮಾದಕ ಮದ್ಯ ಅಥವಾ ಮಾದಕ ದ್ರವ್ಯವನ್ನು ಉತ್ಪಾದಿಸುವ ಅಥವಾ ಸಿದ್ಧಪಡಿಸುವ ಎಲ್ಲ ನೈಸರ್ಗಿಕ ಅಥವಾ ಕೃತಕ ಸಂಸ್ಕರಣ ಪದ್ಧತಿಯನ್ನು ಒಳಗೊಳ್ಳುತ್ತದೆ.

(19ಕ) **"ಸಾಮಗ್ರಿ"** ಎಂಬುದು ಮೊಹರಾ ಹೂವು, ಕಾಕಂಬಿ, ಕೊಳೆ (ವಾಷು), ಕೊಳೆತ ಬೆಲ್ಲ, ದ್ರಾಕ್ಷಿ, ಗೋಡಂಬಿ ಹಣ್ಣುಗಳು ಮತ್ತು ರಾಜ್ಯ ಸರಕಾರವು ಅಧಿಸೂಚನೆಯ ಮೂಲಕ ಉಲ್ಲೇಖಿಸಬಹುದಾದಂಥ ಯಾವುದೇ ಇತರ ಪದಾರ್ಥವನ್ನು ಒಳಗೊಳ್ಳುತ್ತದೆ.

(19ಖ) **"ಮೊಹರಾ ಹೂವು"** ಎಂದರೆ ಪಾಸ್ಸಿಯಾಲಾ ಟಿಪೊಲ್ಲಾ (ಇಪ್ಪೆ) ಹೂವು ಆದರೆ ಇದು ಮೊಹರಾ ಮರದ ಕಾಯಿ ಅಥವಾ ಬೀಜವನ್ನು ಒಳಗೊಳ್ಳುವುದಿಲ್ಲ.

(19ಗ) **"ಕಾಕಂಬಿ"** ಎಂದರೆ ಹುಳಿ ಹಿಡಿಸಬಹುದಾದ ದ್ರವರೂಪದ ಅಥವಾ ತೇಲಾಡುವ ರೂಪದ ಸಕ್ಕರೆಗಳನ್ನೊಳಗೊಂಡ, ಬೆಲ್ಲ ಅಥವಾ ಸಕ್ಕರೆಯ ತಯಾರಿಕೆಯ ಕೊನೆಯ ಘಟ್ಟದಲ್ಲಿ ಶೋಧಿಸಿದನಂತರ ಕೆಳಗುಳಿಯುವ ಭಾರವಾದ, ಕಪ್ಪು ಬಣ್ಣದ ಸಾಂದ್ರರಸ ಮತ್ತು ಇದು ಅಂಥ ರಸದ ಗುಣವನ್ನು ಗಣನಾರ್ಹವಾಗಿ ಬದಲಾಯಿಸಿದ ಯಾವುದೇ ವಸ್ತುವನ್ನು ಅಂಥ ರಸಕ್ಕೆ ಸೇರಿಸಿ ತಯಾರಿಸಿದ ಉತ್ಪನ್ನಗಳನ್ನು ಒಳಗೊಳ್ಳುತ್ತದೆ, ಆದರೆ ಅಧಿಸೂಚನೆಯ ಮೂಲಕ ರಾಜ್ಯ ಸರಕಾರವು ಈ ಅಧಿನಿಯಮದ ಉದ್ದೇಶಕ್ಕಾಗಿ, ಕಾಕಂಬಿ ಅಲ್ಲವೆಂದು ಘೋಷಿಸುವ ಯಾವುದೇ ವಸ್ತುವನ್ನು ಇದು ಒಳಗೊಳ್ಳುವುದಿಲ್ಲ.

(20) **"ಅಧಿಸೂಚನೆ"** ಎಂದರೆ ಸರಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ಅಧಿಸೂಚನೆ.

(21) **"ಸ್ಥಳ"** ಎಂಬುದು ಮನೆ, ಕಟ್ಟಡ, ಅಂಗಡಿ, ಚಪ್ಪರ, ಡೇರೆ, ಹಡಗು, ದೋಣಿ ಮತ್ತು ವಾಹನಗಳನ್ನೂ ಒಳಗೊಳ್ಳುತ್ತದೆ.

(22) **"ಪೊಲೀಸ್ ಠಾಣೆ"** ಎಂಬುದು, ರಾಜ್ಯ ಸರಕಾರವು ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಕ್ಕಾಗಿ ಪೊಲೀಸ್ ಠಾಣೆಯೆಂದು ಘೋಷಿಸುವ ಯಾವುದೇ ಸ್ಥಳವನ್ನು ಒಳಗೊಳ್ಳುತ್ತದೆ.

(23) **"ನಿಯಮಿಸಿದುದು"** ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಿದುದು.

(24) **"ಶುದ್ಧೀಕರಣ"** ಎಂಬುದು ಯಾವುದೇ ಪದಾರ್ಥವನ್ನು ಅದರೊಂದಿಗೆ ಸೇರಿಸಿ ಮದ್ಯವನ್ನು ಶುದ್ಧಗೊಳಿಸುವ, ಬಣ್ಣಗೊಳಿಸುವ ಅಥವಾ ರುಚಿಗೊಳಿಸುವ ಪ್ರತಿಯೊಂದು ಕ್ರಮವನ್ನೂ ಒಳಗೊಳ್ಳುತ್ತದೆ.

[1](24ಕ) **"ಕೊಳೆತ ಬೆಲ್ಲ"** ಎಂದರೆ ಮನುಷ್ಯೋಪಯೋಗಕ್ಕೆ ಯೋಗ್ಯವಲ್ಲದ ಅಥವಾ ಅದರ ಉಪಯೋಗವು ಆರೋಗ್ಯಕ್ಕೆ ಅಪಾಯಕಾರಿಯಾದ ಬೆಲ್ಲ.

**ವಿವರಣೆ.–** ಬೆಲ್ಲವು ಗಾಢ ಕಂದುಬಣ್ಣವಾಗಿದ್ದು ತೀಕ್ಷ್ಣ ವಾಸನೆಯುಳ್ಳದ್ದಾಗಿದ್ದರೆ ಅಥವಾ ರಾಸಾಯನಿಕ ವಿಶ್ಲೇಷಣೆಯಿಂದ ಹೆಚ್ಚು ಪ್ರಮಾಣದಲ್ಲಿ ರೂಪಾಂತರ ಹೊಂದುವ ಸಕ್ಕರೆಯನ್ನು ಶೇಕಡಾ ಹದಿನೈದಕ್ಕಿಂತ ಅಥವಾ ಒಟ್ಟು ಸಕ್ಕರೆಯು ಶೇಕಡಾ ಹದಿನೇಳಕ್ಕಿಂತ ಕಡಿಮೆ ಪ್ರಮಾಣದಲ್ಲಿ ಸಕ್ಕರೆಯನ್ನೂ ಹೊಂದಿದ್ದರೆ, ಆ "ಬೆಲ್ಲವು" ಮನುಷ್ಯೋಪಯೋಗಕ್ಕೆ ಯೋಗ್ಯವಾಗಿದುದಲ್ಲವೆಂದು ಅಥವಾ ಅದನ್ನು ಉಪಯೋಗಿಸುವುದು ಆರೋಗ್ಯಕ್ಕೆ ಅಪಾಯಕಾರಿಯಾಗಿದೆಯೆಂದು ಭಾವಿಸತಕ್ಕದ್ದು.

(25) "ಮಾರಾಟ" ಅಥವಾ "ಮಾರಾಟ ಮಾಡುವುದು" ಎಂಬುದು ದಾನ ರೂಪವಲ್ಲದ ಯಾವುದೇ ಬಗೆಯ ವರ್ಗಾವಣೆಯನ್ನು ಒಳಗೊಳ್ಳುವುದು.

(26) "ಮದ್ಯಸಾರ" ಎಂದರೆ ಮದ್ಯಾಂಶವನ್ನು ಒಳಗೊಂಡಿರುವ ಮತ್ತು ಬಟ್ಟಿಯಿಳಿಸಿ ಪಡೆದಿರುವ ಯಾವುದೇ ಮದ್ಯ, ಅದು ಗುಣಾಪಹೃತವಾದುದಾಗಿರಲಿ ಅಥವಾ ಇಲ್ಲದಿರಲಿ.

(26ಕ) "ಅಬ್ಕಾರಿ ಸಬ್ ಇನ್ಸ್‌ಪೆಕ್ಟರ್" ಎಂದರೆ, 6ನೆಯ ಪ್ರಕರಣದ ಮೇರೆಗೆ ಸಬ್ ಇನ್ಸ್‌ಪೆಕ್ಟರ್ ಎಂದು ನಿಯುಕ್ತನಾದವನು.

(27) "ಹೆಂಡ" ಎಂದರೆ ಅಬ್ಕಾರಿ ಮರದಿಂದ ತೆಗೆಯಲಾದ ಹುಳಿ ಹಿಡಿದ ಅಥವಾ ಹಿಡಿಯದ ರಸ.

(28) ( – – – – – – – – – )

(29) "ಸಾಗಾಣಿಕೆ" ಎಂದರೆ ರಾಜ್ಯದಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವುದು ಮಧ್ಯಂತರ ಪ್ರದೇಶವು ರಾಜ್ಯದ ಒಳಗಿರಲಿ ಅಥವಾ ಹೊರಗಿರಲಿ.

(30) "ಕೊಳೆ (ವಾಷು)" ಎಂಬುದು ಹುಳಿ ಹಿಡಿದ ಮೊಳೆತ ಧಾನ್ಯದ ಕಷಾಯ (ವೊರ್ಟ್‌ನ್ನು) ಮತ್ತು ಮದ್ಯಸಾರವನ್ನು ಬಟ್ಟಿಯಿಳಿಸುವ ಸಕ್ಕರೆಯ ತೆಳು ದ್ರಾವಣವನ್ನು ಒಳಗೊಳ್ಳುತ್ತದೆ.

## ಅಧ್ಯಾಯ–2

## ಸಿಬ್ಬಂದಿ ಮತ್ತು ನಿಯಂತ್ರಣ

**3. ಅಬ್ಕಾರಿ ಕಮೀಶನರನ ನೇಮಕ:–** (1) ರಾಜ್ಯ ಸರಕಾರವು, ಅಧಿಸೂಚನೆಯ ಮೂಲಕ, ಡೆಪ್ಯುಟಿ ಕಮೀಶನರನ ದರ್ಜೆಗೆ ಕಡಿಮೆಯಲ್ಲದ ಒಬ್ಬ ಅಧಿಕಾರಿಯನ್ನು, ಕರ್ನಾಟಕ ರಾಜ್ಯದ ಅಬ್ಕಾರಿ ಕಮಿಶನರೆಂದು ನೇಮಕ ಮಾಡಬಹುದು. ಅವನು, ಈ ಸಂಬಂಧದಲ್ಲಿ ಸರಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು, ಈ ಅಧಿನಿಯಮದ ಆಡಳಿತಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲಿ ಮುಖ್ಯ ನಿಯಂತ್ರಣಾಧಿಕಾರಿಯಾಗಿರತಕ್ಕದ್ದು.

(2) ಅಬ್ಕಾರಿ ಕಮಿಶನರನು, ಅಬ್ಕಾರಿ ಇಲಾಖೆಯ ಆಡಳಿತ ವಿಷಯದಲ್ಲಿ ಡೆಪ್ಯುಟಿ ಕಮಿಶನರನ ಎಲ್ಲ ಶಕ್ತಿಗಳನ್ನು ಚಲಾಯಿಸತಕ್ಕದ್ದು.

**4. ಡೆಪ್ಯುಟಿ ಕಮಿಶನರು:–** (1) ಡೆಪ್ಯುಟಿ ಕಮಿಶನರನು, ತನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಗಳೊಳಗೆ, ರಾಜ್ಯ ಸರಕಾರವು ಕಾಲಕಾಲಕ್ಕೆ ನಿರ್ದೇಶಿಸಬಹುದಾದ ನಿಯಂತ್ರಣಕ್ಕೊಳಪಟ್ಟು, ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅವುಗಳ ಮೇರೆಗೆ ಡೆಪ್ಯುಟಿ ಕಮೀಶನರಿಗೆ ವಹಿಸಿಕೊಡಲಾದಂಥ ಶಕ್ತಿಗಳನ್ನು ಚಲಾಯಿಸತಕ್ಕದ್ದು, ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(2) ಈ ಅಧಿನಿಯಮದ ಉದ್ದೇಶಗಳಿಗಾಗಿ, ಎಲ್ಲ ಡೆಪ್ಯುಟಿ ಕಮಿಶನರುಗಳು ಅಬ್ಕಾರಿ ಕಮಿಶನರಿಗೆ ಅಧೀನರಾಗಿರತಕ್ಕದ್ದು.

**(4ಕ) ಅಬ್ಕಾರಿ ಡೆಪ್ಯುಟಿ ಕಮಿಶನರು:–** (1) ರಾಜ್ಯ ಸರಕಾರವು, ಅಧಿಸೂಚನೆಯ ಮೂಲಕ, ಅಂಥ ಅಧಿಸೂಚನೆಯಲ್ಲಿ ಉಲ್ಲೇಖಿಸಬಹುದಾದಂಥ ಪ್ರದೇಶಕ್ಕಾಗಿ ಅಥವಾ ಪ್ರದೇಶಗಳಿಗಾಗಿ, ತಾನು ಅಗತ್ಯವೆಂದು ಭಾವಿಸುವಷ್ಟು ಜನ ಡೆಪ್ಯುಟಿ ಕಮೀಶನರುಗಳನ್ನು ನೇಮಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ನಿಯುಕ್ತನಾದ ಅಬ್ಕಾರಿ ಡೆಪ್ಯುಟಿ ಕಮಿಶನರು, ರಾಜ್ಯ ಸರಕಾರವು ಅಧಿಸೂಚನೆಯಲ್ಲಿ ಉಲ್ಲೇಖಿಸಬಹುದಾದಂಥ ಮತ್ತು ಈ ಅಧಿನಿಯಮದ ಮೇರೆಗೆ ಡೆಪ್ಯುಟಿ ಕಮಿಶನರಿಗೆ ವಹಿಸಿಕೊಡಲಾದ ಶಕ್ತಿಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಮತ್ತು ಆ ಬಳಿಕ ಡೆಪ್ಯುಟಿ ಕಮಿಶನರು ಹಾಗೆ ಉಲ್ಲೇಖಿಸಿದ ಶಕ್ತಿಗಳನ್ನು ಚಲಾಯಿಸಲು ಅಥವಾ ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಲು ಸಕ್ಷಮನಾಗಿರತಕ್ಕದ್ದದಲ್ಲ.

(3) ಅಬ್ಕಾರಿ ಡೆಪ್ಯುಟಿ ಕಮಿಶನರು, ಅಬ್ಕಾರಿ ಕಮಿಶನರಿಗೆ ಅಧೀನನಾಗಿರತಕ್ಕದ್ದು ಮತ್ತು ಅಬ್ಕಾರಿ ಕಮಿಶನರರ ಮತ್ತು ರಾಜ್ಯ ಸರಕಾರದ ನಿಯಂತ್ರಣಕ್ಕೆ ಒಳಪಟ್ಟಿರತಕ್ಕುದು.

**5. ಅಬ್ಕಾರಿ ಸೂಪರಿಂಟೆಂಡೆಂಟರ ಮತ್ತು ಡೆಪ್ಯುಟಿ ಸೂಪರಿಂಟೆಂಡೆಂಟರ ನೇಮಕ:–** (1) ರಾಜ್ಯ ಸರಕಾರವು, ಈ ಅಧಿನಿಯಮದ ಆಡಳಿತದ ಸಂಬಂಧದಲ್ಲಿ, ಡೆಪ್ಯುಟಿ ಕಮಿಶನರಿಗೆ ಸಮವರ್ತಿಯಾಗಿ ಅಥವಾ ಅವನಿಗೆ ಅಧೀನವಾಗಿ, ರಾಜ್ಯ ಸರಕಾರವು ನಿರ್ದೇಶಿಸಬಹುದಾದಂಥ ನಿಯಂತ್ರಣಕ್ಕೊಳಪಟ್ಟು, ಡೆಪ್ಯುಟಿ ಕಮಿಶನರರ ಎಲ್ಲ ಅಥವಾ ಯಾವುವೇ ಶಕ್ತಿಗಳನ್ನು ಚಲಾಯಿಸಲು ಮತ್ತು ಎಲ್ಲ ಅಥವಾ ಯಾವುದೇ ಕರ್ತವ್ಯಗಳನ್ನು ನಿರ್ವಹಿಸಲು ಒಂದು ಜಿಲ್ಲೆಯ ಅಥವಾ ಅದರ ಯಾವುದೇ ಭಾಗಕ್ಕೆ ಒಬ್ಬ ಅಧಿಕಾರಿಯನ್ನು (ಅಬ್ಕಾರಿ ಸೂಪರಿಂಟೆಂಡೆಂಟನನ್ನಾಗಿ) ನೇಮಿಸಬಹುದು.

(2) ರಾಜ್ಯ ಸರಕಾರವು, ತಾನು ನಿರ್ದೇಶಿಸಬಹುದಾದಂಥ ಶಕ್ತಿಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು, ಒಂದು ಜಿಲ್ಲೆಗೆ ಅಥವಾ ಅದರ ಯಾವುದೇ ಭಾಗಕ್ಕೆ, ತಾನು ಸೂಕ್ತವೆಂದು ಆಲೋಚಿಸುವಷ್ಟು ಜನ ಅಬ್ಕಾರಿ ಡೆಪ್ಯುಟಿ ಸೂಪರಿಂಟೆಂಡೆಂಟರನ್ನು ನೇಮಿಸಬಹುದು.

(5ಕ) ಗುಪ್ತ ವಾರ್ತಾ ವಿಭಾಗದ ರಚನೆ ಮತ್ತು (ಗುಪ್ತ ವಾರ್ತಾ ವಿಭಾಗದ) ಅಬ್ಕಾರಿ ಸೂಪರಿಂಟೆಂಡೆಂಟರ ಮತ್ತು ಡೆಪ್ಯುಟಿ ಸೂಪರಿಂಟೆಂಡೆಂಟರ ನೇಮಕ. (1) ಅಬ್ಕಾರಿ ಕಮಿಶನರು ಮುಖ್ಯಾಧಿಕಾರಿಯಾಗಿರುವ ಒಂದು ಗುಪ್ತ ವಾರ್ತಾ ವಿಭಾಗವಿರತಕ್ಕದ್ದು ಮತ್ತು ಅದು, ಒಬ್ಬ ಡೆಪ್ಯುಟಿ ಕಮಿಶನರನ್ನು ಮತ್ತು (2)ನೆಯ ಉಪಪ್ರಕರಣದ ಮೇರೆಗೆ ರಾಜ್ಯ ಸರಕಾರವು ನೇಮಿಸಬಹುದಾದಷ್ಟು ಜನ (ಗುಪ್ತ ವಾರ್ತಾ ವಿಭಾಗದ) ಅಬ್ಕಾರಿ ಡೆಪ್ಯುಟಿ ಸೂಪರಿಂಟೆಂಡೆಂಟರನ್ನೂ (ಗುಪ್ತವಾರ್ತಾ ವಿಭಾಗದ) ಡೆಪ್ಯುಟಿ ಸೂಪರಿಂಟೆಂಡೆಂಟರನ್ನೂ ಮತ್ತು ರಾಜ್ಯ ಸರಕಾರದ ಪೂರ್ವಾನುಮೋದನೆಯೊಂದಿಗೆ ಅಬ್ಕಾರಿ ಕಮಿಶನರು ನೇಮಿಸಬಹುದಾದಷ್ಟು ಜನ ಇತರ ಅಧಿಕಾರಿಗಳನ್ನೂ ಹೊಂದಿರತಕ್ಕದ್ದು.

(2) ರಾಜ್ಯ ಸರಕಾರವು, ಈ ಅಧಿನಿಯಮದ ಮೇರೆಗೆ ಅಪರಾಧಗಳ ಪತ್ತೆ, ಅನ್ವೇಷಣೆ ಮತ್ತು ಆರೋಪ ವಿಚಾರಣೆಗೆ ಸಂಬಂಧಿಸಿದ ಶಕ್ತಿಗಳನ್ನು ಚಲಾಯಿಸುವುದಕ್ಕಾಗಿ, ಮತ್ತು ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ಅಬ್ಕಾರಿ ಕಮಿಶನರು ನಿರ್ದೇಶಿಸಬಹುದಾದಂಥ ಅಬ್ಕಾರಿ ಅಧಿಕಾರಿಯ ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ,–

(i) ಒಂದು ಜಿಲ್ಲೆಗಾಗಿ ಅಥವಾ ಜಿಲ್ಲೆಯ ಭಾಗಕ್ಕಾಗಿ ಅಥವಾ ಒಂದಕ್ಕಿಂತ ಹೆಚ್ಚು ಜಿಲ್ಲೆಗಾಗಿ ಒಬ್ಬ ಅಧಿಕಾರಿಯನ್ನು (ಗುಪ್ತವಾರ್ತಾ ಕೇಂದ್ರದ) ಅಬ್ಕಾರಿ ಸೂಪರಿಂಟೆಂಡೆಂಟನನ್ನಾಗಿ ನೇಮಿಸಬಹುದು;

(ii) ಒಂದು ಜಿಲ್ಲೆಗಾಗಿ ಅಥವಾ ಅದರ ಭಾಗಕ್ಕಾಗಿ ಅಥವಾ ಒಂದಕ್ಕಿಂತ ಹೆಚ್ಚು ಜಿಲ್ಲೆಗಳಿಗಾಗಿ ಒಬ್ಬ ಅಧಿಕಾರಿಯನ್ನು (ಗುಪ್ತವಾರ್ತಾ ವಿಭಾಗದ) ಅಬ್ಕಾರಿ ಸೂಪರಿಂಟೆಂಡೆಂಟರನ್ನಾಗಿ ನೇಮಿಸಬಹುದು.

**6. ಅಬ್ಕಾರಿ ಇನ್ಸ್‌ಪೆಕ್ಟರುಗಳ ಮತ್ತು ಅಬ್ಕಾರಿ ಸಬ್‌ಇನ್ಸ್‌ಪೆಕ್ಟರುಗಳ ಮತ್ತು ಇತರ ಅಧೀನಾಧಿಕಾರಿಗಳ ನೇಮಕ:–** (1) ಈ ಅಧಿನಿಯಮದ ಮೇರೆಗೆ ಅಪರಾಧಗಳ ಪತ್ತೆ, ಅನ್ವೇಷಣೆ ಮತ್ತು ಆರೋಪ ವಿಚಾರಣೆಯ ಸಂಬಂಧದಲ್ಲಿ ಶಕ್ತಿಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು, ರಾಜ್ಯ ಸರ್ಕಾರವು, (ಅಬ್ಕಾರಿ ಇನ್ಸ್‌ಪೆಕ್ಟರುಗಳನ್ನು ಮತ್ತು ಅಬ್ಕಾರಿ ಸಬ್‌ಇನ್ಸ್‌ಪೆಕ್ಟರುಗಳನ್ನು) ನೇಮಿಸಬಹುದು.

(2) ರಾಜ್ಯ ಸರ್ಕಾರವು, ಈ ಅಧಿನಿಯಮದ ಮೇರೆಗೆ ತಾನು ಸೂಕ್ತವೆಂದು ಆಲೋಚಿಸುವಂಥ ವರ್ಗಗಳನ್ನು ಮತ್ತು ಪದನಾಮಗಳನ್ನು, ಶಕ್ತಿಗಳನ್ನು ಮತ್ತು ಕರ್ತವ್ಯಗಳನ್ನು ಹೊಂದಿರುವಂಥ ಅಧೀನಾಧಿಕಾರಿಗಳನ್ನು ನೇಮಿಸಬಹುದು.

(3) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ (1)ನೇ ಮತ್ತು (2)ನೇ ಉಪಪ್ರಕರಣಗಳ ಮೇರೆಗೆ ಅಬ್ಕಾರಿ ಇನ್ಸ್‌ಪೆಕ್ಟರುಗಳ ಮತ್ತು ಅಬ್ಕಾರಿ ಸಬ್‌ಇನ್ಸ್‌ಪೆಕ್ಟರುಗಳ ಅಥವಾ ಅಧೀನಾಧಿಕಾರಿಗಳ ಎಲ್ಲ ಅಥವಾ ಯಾವುವೇ ಶಕ್ತಿಗಳನ್ನು ಮತ್ತು ಅವರಿಗೆ ವಹಿಸಿಕೊಡಲಾದ ಕರ್ತವ್ಯಗಳನ್ನು, ರಾಜ್ಯ ಸರ್ಕಾರದ ಯಾವನೇ ಅಧಿಕಾರಿಯು ಚಲಾಯಿಸತಕ್ಕದ್ದೆಂದು ಮತ್ತು ನಿರ್ವಹಿಸತಕ್ಕದ್ದೆಂದು, ನಿರ್ದೇಶಿಸಬಹುದು.

(4) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, (1)ನೇ, (2)ನೇ ಮತ್ತು (3)ನೇ ಒಳಪ್ರಕರಣಗಳ ಮೇರೆಗಿನ ಶಕ್ತಿಗಳನ್ನು ಸಂದರ್ಭಾನುಸಾರ, ಅಬ್ಕಾರಿ ಕಮಿಶನರಿಗೆ ಡೆಪ್ಯುಟಿ ಕಮಿಶನರಿಗೆ, ಅಬ್ಕಾರಿ ಸೂಪರಿಂಟೆಂಡೆಂಟನಿಗೆ ಮತ್ತು ಅಬ್ಕಾರಿ ಡೆಪ್ಯುಟಿ ಸೂಪರಿಂಟೆಂಡೆಂಟನಿಗೆ ಪ್ರತ್ಯಾಯೋಜಿಸಬಹುದು.

**7. ಶಕ್ತಿಗಳ ಪ್ರತ್ಯಾಯೋಜನೆ:–** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ 67 ಮತ್ತು 71ನೇ ಪ್ರಕರಣಗಳ ಮೇರೆಗಿನ ಶಕ್ತಿಗಳನ್ನುಳಿದು ಈ ಅಧಿನಿಯಮದ ಮೇರೆಗಿನ ತನ್ನ ಶಕ್ತಿಗಳನ್ನು, ಅಬ್ಕಾರಿ ಕಮಿಶನರನಿಗೆ ಅಥವಾ ಇತರ ಯಾವನೇ ಅಬ್ಕಾರಿ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು.

(2) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಅಬ್ಕಾರಿ ಕಮಿಶನರಿಗೆ ಅಥವಾ ಡೆಪ್ಯುಟಿ ಕಮಿಶನರಿಗೆ ಈ ಅಧಿನಿಯಮದಿಂದ ಅಥವಾ ಮೇರೆಗೆ ಪ್ರದತ್ತವಾದ ಯಾವುದೇ ಶಕ್ತಿಗಳನ್ನು, ಅದರಲ್ಲಿ ಉಲ್ಲೇಖಿಸಬಹುದಾದಂಥ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು, ಯಾವನೇ ಅಬ್ಕಾರಿ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು.

## ಅಧ್ಯಾಯ–3

## ಆಮದು, ರಫ್ತು ಮತ್ತು ಸಾಗಾಣಿಕೆ

**8. ಮಾದಕದ ಆಮದು:–** (1) ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದಂಥ ಪ್ರತಿ ಶುಲ್ಕದ ಸಂದಾಯದ ಮೇಲೆ ಮತ್ತು ನಿಯಮಿಸಬಹುದಾದಂಥ ಇತರ ನಿಬಂಧನೆಗಳ ಮೇಲೆ ಡೆಪ್ಯುಟಿ ಕಮಿಶನರು ಕೊಟ್ಟ ಅನುಮತಿ ಪತ್ರದ ಮೇರೆಗೆ ಹೊರತು ಯಾವ ಮಾದಕವನ್ನೂ ಆಮದು ಮಾಡತಕ್ಕದ್ದಲ್ಲ.

ಪರಂತು, ಪ್ರತಿ ಶುಲ್ಕದ ವಸೂಲಿಯನ್ನು ಸುನಿಶ್ಚಿತ ಮಾಡಿಕೊಳ್ಳಲು ನಿಯಮಿಸಬಹುದಾದಂಥ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು, ಡೆಪ್ಯುಟಿ ಕಮಿಶನರು ಪ್ರತಿ ಶುಲ್ಕದ ಸಂದಾಯವಿಲ್ಲದೆ, ಯಾವುದೇ ಮಾದಕವನ್ನು ಆಮದು ಮಾಡಲು ಅನುಮತಿ ಕೊಡಬಹುದು:

ಮತ್ತು ಪರಂತು, ಯಾವುದೇ ಮಾದಕವು ಭಾರತೀಯ ಆಮದು ರಫ್ತು ಶುಲ್ಕ ಅಧಿನಿಯಮ, 1934ರ ಅಥವಾ ಭಾರತಕ್ಕೆ ಆಮದು ಮಾಡಿಕೊಂಡ ಸರಕುಗಳ ಮೇಲೆ ಸೀಮಾ ಶುಲ್ಕಕ್ಕೆ ಸಂಬಂಧಿಸಿ ಆಯಾ ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ವಿಧಿಯ ಮೇರೆಗೆ ಶುಲ್ಕ ಸಂದಾಯಕ್ಕೆ ಹೊಣೆಯಾಗಿದ್ದು, ಅಂಥ ವಿಧಿಯ ಮೇರೆಗೆ ಅದರ ಬಗ್ಗೆ ವ್ಯವಹರಿಸಿದರೆ, ಅದರ ಮೇಲೆ ಪ್ರತಿ ಶುಲ್ಕವು ಸಂದಾಯವಾಗತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಮೇರೆಗೆ ಕೊಟ್ಟ ಅನುಮತಿ ಪತ್ರವನ್ನು, ಅದನ್ನು ಕೊಟ್ಟ ನಿಬಂಧನೆಗಳ ಉಲ್ಲಂಘನೆಗಾಗಿ ಅಥವಾ ಬರಹದಲ್ಲಿ ಅಭಿಲೇಖಿಸುವ ಇತರ ಯಾವುದೇ ಕಾರಣಕ್ಕಾಗಿ, ಡೆಪ್ಯುಟಿ ಕಮಿಶನರು ರದ್ದುಗೊಳಿಸಬಹುದು.

**9. ಮಾದಕದ ರಫ್ತು:–** (1) ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದಂಥ ಫೀಜು ಸಂದಾಯವಾದ ಅನಂತರ ಮತ್ತು ನಿಯಮಿಸಬಹುದಾದಂಥ ನಿಬಂಧನೆಗಳ ಮೇಲೆ ಡೆಪ್ಯುಟಿ ಕಮಿಶನರು ಕೊಟ್ಟ ಅನುಮತಿ ಪತ್ರದ ಮೇರೆಗೆ ಹೊರತು, ಯಾವ ಮಾದಕವನ್ನೂ ರಫ್ತು ಮಾಡತಕ್ಕದ್ದಲ್ಲ.

ಪರಂತು, ಭಾರತದಲ್ಲಿ ಉತ್ಪಾದಿಸಿದ ಅಥವಾ ತಯಾರಿಸಿದ ಯಾವ ಮಾದಕವನ್ನು 66ನೇ ಪ್ರಕರಣದಲ್ಲಿ ಉಪಬಂಧಿಸಿದಂತಲ್ಲದೆ, ಅದು ಗುರಿಯಾಗುವ ಅಬ್ಕಾರಿ ಶುಲ್ಕವು ಅಥವಾ ಪ್ರತಿ ಶುಲ್ಕವು ಸಂದಾಯವಾಗಿದ್ದ ಹೊರತು, ರಫ್ತು ಮಾಡಲು ಅನುಮತಿ ಕೊಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಮೇರೆಗೆ ಕೊಟ್ಟ ಅನುಮತಿ ಪತ್ರವನ್ನು ಅದನ್ನು ಕೊಟ್ಟ ನಿಬಂಧನೆಗಳ ಉಲ್ಲಂಘನೆಗಾಗಿ ಅಥವಾ ಬರಹದಲ್ಲಿ ಅಭಿಲೇಖಿಸುವ ಇತರ ಯಾವುದೇ ಕಾರಣಕ್ಕಾಗಿ, ಡೆಪ್ಯುಟಿ ಕಮಿಶನರನು ರದ್ದುಗೊಳಿಸಬಹುದು.

**10. ಮಾದಕದ ಸಾಗಾಣಿಕೆಯ ನಿಷೇಧ:–** ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಒಂದು ಸ್ಥಳೀಯ ಪ್ರದೇಶದಿಂದ ಇತರ ಯಾವುದೇ ಸ್ಥಳೀಯ ಪ್ರದೇಶಕ್ಕೆ ಮಾದಕಗಳ ಅಥವಾ ಯಾವುದೇ ಬಗೆಯ ಮಾದಕಗಳ ಸಾಗಾಣಿಕೆಯನ್ನು ನಿಷೇಧಿಸಬಹುದು.

**11. ಸಾಗಾಣಿಕೆ ಅನುಮತಿ ಪತ್ರಗಳು:–** 12ನೇ ಪ್ರಕರಣದ ಮೇರೆಗೆ ಕೊಟ್ಟ ಅನುಮತಿ ಪತ್ರದ ಮೇರೆಗೆ ಹೊರತು, ಸಾಮಾನ್ಯವಾಗಿ ಅಥವಾ ಯಾವುದೇ ಸ್ಥಳೀಯ ಪ್ರದೇಶಕ್ಕಾಗಿ ನಿಯಮಿಸಲಾದಂಥ ಪರಿಮಾಣಕ್ಕೆ ಮೀರಿ ಯಾವುದೇ ಮಾದಕವನ್ನು ಸಾಗಿಸತಕ್ಕದ್ದಲ್ಲ.

**12. ಮಾದಕದ ಸಾಗಾಣಿಕೆ:–** (1) ಡೆಪ್ಯುಟಿ ಕಮಿಶನರು ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರದಿಂದ ಯಥಾವಿಧಿ ಶಕ್ತಗೊಳಿಸಲಾದ ಯಾವನೇ ಇತರ ವ್ಯಕ್ತಿಯು, ಮಾದಕಗಳ ಸಾಗಾಣಿಕೆಗಾಗಿ ಅನುಮತಿ ಪತ್ರ ಕೊಡಬಹುದು.

(2) (1)ನೇ ಒಳಪ್ರಕರಣದ ಮೇರೆಗಿನ ಅನುಮತಿ ಪತ್ರವು, ನಿರ್ದಿಷ್ಟ ಅಪಧಿಗಳಿಗಾಗಿ ಮತ್ತು ವಿಶಿಷ್ಟ ಬಗೆಯ ಮಾದಕಗಳಿಗಾಗಿ ಕೊಟ್ಟ ಸಾಮಾನ್ಯ ಅನುಮತಿ ಪತ್ರವಾಗಿರಬಹುದು ಅಥವಾ ನಿರ್ದಿಷ್ಟ ಸಂದರ್ಭಗಳಿಗಾಗಿ ಮತ್ತು ವಿಶಿಷ್ಟ ರವಾನೆ ವಸ್ತುಗಳಿಗಾಗಿ ಮಾತ್ರ ಕೊಟ್ಟ ವಿಶೇಷ ಅನುಮತಿ ಆಗಿರಬಹುದಾಗಿದೆ:

ಪರಂತು, ಸಾಮಾನ್ಯ ಅನುಮತಿ ಪತ್ರವನ್ನು, ಈ ಅಧಿನಿಯಮದ ಮೇರೆಗೆ ಲೈಸೆನ್ಸ್ ಪಡೆದ ವ್ಯಕ್ತಿಗಳಿಗೆ ಮಾತ್ರ ಕೊಡತಕ್ಕದ್ದು ಮತ್ತು ಅದು ಅನುಮತಿ ಪತ್ರದಲ್ಲಿ ಉಲ್ಲೇಖಿಸಿದ ಪ್ರಮಾಣಕ್ಕೆ ಹೆಚ್ಚಾಗದಂತೆ ಒಂದೇ ಬಾರಿಗೆ ಸಾಗಿಸಬಹುದಾದ ಮದ್ಯದ ಯಾವುದೇ ಪ್ರಮಾಣಕ್ಕೆ ಅನ್ವಯಿಸಬಹುದಾಗಿದೆ.

(3) ಈ ಪ್ರಕರಣದ ಮೇರೆಗಿನ ಪ್ರತಿಯೊಂದು ಅನುಮತಿಪತ್ರದಲ್ಲಿ.–

(ಕ) ಮಾದಕಗಳನ್ನು ಸಾಗಿಸಲು ಅಧಿಕೃತನಾದ ವ್ಯಕ್ತಿಯ ಹೆಸರು;

(ಖ) ಅನುಮತಿಪತ್ರ ಜಾರಿಯಲ್ಲಿರುವ ಅವಧಿ;

(ಗ) ಅದನ್ನು ಯಾವ ಮಾದಕದ ಬಗ್ಗೆ ಕೊಡಲಾಗಿದೆಯೋ ಆ ಮಾದಕದ ಪರಿಮಾಣ ಮತ್ತು ವರ್ಣನೆ; ಮತ್ತು

(ಫ) ನಿಯಮಿಸಬಹುದಾದ ಇತರ ಯಾವುದೇ ವಿವರಗಳನ್ನು –ಇವುಗಳನ್ನು ಉಲ್ಲೇಖಿಸತಕ್ಕದ್ದು.

(4) ಈ ಪ್ರಕರಣದ ಮೇರೆಗೆ ಕೊಟ್ಟ ಅನುಮತಿ ಪತ್ರವು ಅದನ್ನು ಪಡೆದವನಿಂದ ನಿಯೋಜಿತರಾದ ಮತ್ತು ಅವನ ಪರವಾಗಿ ಕೆಲಸ ಮಾಡುವ ನೌಕರರಿಗೆ ಮತ್ತು ಇತರ ವ್ಯಕ್ತಿಗಳಿಗೆ ಅನ್ವಯಿಸತಕ್ಕದ್ದು ಮತ್ತು ಅವರನ್ನು ಒಳಗೊಳ್ಳತಕ್ಕದ್ದು.

## ಅಧ್ಯಾಯ–4

## ತಯಾರಿಕೆ, ಸ್ವಾಧೀನ ಮತ್ತು ಮಾರಾಟ

**13. ಲೈಸೆನ್ಸಿನ ಮೇರೆಗೆ ಹೊರತು ಅಬ್ಕಾರಿ ಶುಲ್ಕ ವಿಧಿಸಬಹುದಾದ ವಸ್ತುಗಳ ತಯಾರಿಕೆ ಇತ್ಯಾದಿಗಳ ನಿಷೇಧ:–** (1) ಯಾವ ವ್ಯಕ್ತಿಯೂ ಈ ಕೆಳಗಿನವುಗಳ ಸಂಬಂಧದಲ್ಲಿ ಡೆಪ್ಯುಟಿ ಕಮಿಶನರನು ಕೊಟ್ಟ ಲೈಸೆನ್ಸಿನ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಮೇಲಲ್ಲದೆ ಅಥವಾ 18ನೇ ಪ್ರಕರಣದ ಉಪಬಂಧಗಳ ಮೇರೆಗಲ್ಲದೆ–

(ಕ) ಮಾದಕವನ್ನು ತಯಾರಿಸತಕ್ಕದ್ದಲ್ಲ ಅಥವಾ ಸಂಗ್ರಹಿಸತಕ್ಕದ್ದಲ್ಲ; ಅಥವಾ

(ಖ) ನಾರುಗಿಡವನ್ನು ಬೆಳಸತಕ್ಕದ್ದಲ್ಲ; ಅಥವಾ

(ಗ) ಹೆಂಡ ಕೊಡುವ ಮರದಿಂದ ಹೆಂಡ ಇಳಿಸತಕ್ಕದ್ದಲ್ಲ ಅಥವಾ ಯಾವುದೇ ಮರದಿಂದ ಹೆಂಡ ತೆಗೆಯತಕ್ಕದ್ದಲ್ಲ; ಅಥವಾ

(ಘ) ಬಟ್ಟಿಯನ್ನು ಅಥವಾ ಸಾರಾಯಿ ಕಾರ್ಖಾನೆಯನ್ನು ನಿರ್ಮಿಸತಕ್ಕದ್ದಲ್ಲ ಅಥವಾ ನಡೆಸತಕ್ಕುದಲ್ಲ; ಅಥವಾ

(ಙ) ಮಾರಾಟಕ್ಕಾಗಿ ಮದ್ಯವನ್ನು ಸೀಸೆಗೆ ತುಂಬತಕ್ಕದ್ದಲ್ಲ; ಅಥವಾ

(ಚ) ಹೆಂಡವಲ್ಲದ ಯಾವುದೇ ಮಾದಕದ ತಯಾರಿಕೆಯ ಉದ್ದೇಶಕ್ಕಾಗಿ ಯಾವುದೇ ಸಾಮಾಗ್ರಿಯನ್ನು, ಬಟ್ಟಿಯಂತ್ರವನ್ನು, ಪಾತ್ರೆಗಳನ್ನು, ಉಪಕರಣವನ್ನು ಅಥವಾ ಯಂತ್ರ ಸಲಕರಣೆಗಳನ್ನು ಉಪಯೋಗಿಸತಕ್ಕದ್ದಲ್ಲ, ಇಟ್ಟಿರತಕ್ಕದ್ದಲ್ಲ ಅಥವಾ ಸ್ವಾಧೀನ ಹೊಂದಿರತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಕೊಡಲ್ಪಟ್ಟ ಲೈಸೆನ್ಸು ಅದನ್ನು ಪಡೆದವನು ನಿಯೋಜಿಸಿದ ಮತ್ತು ಅವನ ಪರವಾಗಿ ಕೆಲಸ ಮಾಡುವ ನೌಕರರಿಗೆ ಮತ್ತು ಇತರ ವ್ಯಕ್ತಿಗಳಿಗೆ ಅನ್ವಯಿಸತಕ್ಕದ್ದು ಮತ್ತು ಅವರನ್ನು ಒಳಗೊಳ್ಳತಕ್ಕದ್ದು.

**14. ನಿಯಮಿಸಿದುದಕ್ಕಿಂತ ಹೆಚ್ಚು ಪರಿಮಾಣದಲ್ಲಿ ಅಬ್ಕಾರಿ ಶುಲ್ಕ ವಿಧಿಸಬಹುದಾದ ವಸ್ತುಗಳ ಸ್ವಾಧೀನ:–** (1) ರಾಜ್ಯ ಸರಕಾರವು, ಅಧಿಸೂಚನೆಯ ಮೂಲಕ, ಸ್ವಾಧೀನದಲ್ಲಿಟ್ಟುಕೊಳ್ಳಬಹುದಾದ ಯಾವುದೇ ಮಾದಕದ ಪರಿಮಾಣದ ಪರಿಮಿತಿಯನ್ನು ನಿಯಮಿಸಬಹುದು:

ಪರಂತು, ಒಂದೇ ವಸ್ತುವಿನ ಬಗ್ಗೆ ಅದರ ಬೇರೆ ಗುಣಾನುಸಾರವಾಗಿ ಬೇರೆ ಬೇರೆ ಪರಿಮಿತಿಗಳನ್ನು ನಿಯಮಿಸಬಹುದು,

(2) ಯಾವ ವ್ಯಕ್ತಿಯೂ, (1)ನೇ ಉಪಪ್ರಕರಣದ ಮೇರೆಗೆ ನಿಯಮಿಸಿದ ಪರಿಮಾಣಕ್ಕಿಂತ ಹೆಚ್ಚಾಗಿ, ಯಾವುದೇ ಮಾದಕವನ್ನು,

(ಕ) ಅಂಥ ವಸ್ತುವಿನ ತಯಾರಿಕೆ, ಬಳಸುವಿಕೆ, ಸಂಗ್ರಹಣೆ, ಮಾರಾಟ ಅಥವಾ ಸರಬರಾಜಿಗಾಗಿ ಕೊಟ್ಟ ಲೈಸೆನ್ಸಿನ; ಅಥವಾ

(ಖ) ಆ ಬಗ್ಗೆ ಡೆಪ್ಯುಟಿ ಕಮಿಶನರು ಕೊಟ್ಟ ಅನುಮತಿ ಪತ್ರದ ಅಧಿಕಾರದ ಮೇರೆಗೆ ಹೊರತು ಮತ್ತು ಅವುಗಳ ನಿಬಂಧನೆಗಳು ಮತ್ತು ಷರತ್ತುಗಳಿಗನುಸಾರವಾಗಿ ಹೊರತು ಸ್ವಾಧೀನದಲ್ಲಿಟ್ಟುಕೊಳ್ಳತಕ್ಕದ್ದಲ್ಲ.

**15. ಅಬ್ಕಾರಿ ಶುಲ್ಕ ವಿಧಿಸಬಹುದಾದ ವಸ್ತುಗಳನ್ನು ಲೈಸೆನ್ಸಿಲ್ಲದೆ ಮಾರಾಟಕ್ಕೆ ನಿಷೇಧ:–** (1) ಯಾವ ಮಾದಕದ ಮಾರಾಟವನ್ನು ಆ ಬಗ್ಗೆ ಕೊಡಲಾದ ಲೈಸೆನ್ಸಿನ ಅಧಿಕಾರದ ಮೇಲಲ್ಲದೆ ಮತ್ತು ಅದರ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟಲ್ಲದೆ, ಮಾಡತಕ್ಕದ್ದಲ್ಲ:

ಪರಂತು, ಅಬ್ಕಾರಿ ಕಮಿಶನರು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಉಲ್ಲೇಖಿಸುವಂಥ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೊಳಪಟ್ಟು,–

(ಕ) ಯಾವುದೇ ಮರದಿಂದ ತೆಗೆದ ಹೆಂಡಕ್ಕೆ ಅಧಿಕಾರ ಹೊಂದಿದ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ಹೆಂಡವನ್ನು ತಯಾರಿಸಲು ಅಥವಾ ಮಾರಾಟ ಮಾಡಲು ಲೈಸೆನ್ಸು ಹೊಂದಿರುವ ವ್ಯಕ್ತಿಗೆ ಅಂಥ ಹೆಂಡವನ್ನು ಲೈಸೆನ್ಸಿಲ್ಲದೆ, ಮಾರಾಟ ಮಾಡಬಹುದು.

(ಖ) ಅದರಿಂದ ಮಾದಕ ವಸ್ತುವು ಉತ್ಪಾದಿತವಾಗುವ ಗಿಡದ ಸಾಗುವಳಿದಾರನು ಅಥವಾ ಒಡೆಯನು, ಈ ಅಧಿನಿಯಮದ ಮೇರೆಗೆ ಮಾದಕ ದ್ರವ್ಯಗಳನ್ನು ಮಾರಲು, ತಯಾರಿಸಲು ಅಥವಾ ರಫ್ತು ಮಾಡಲು ಲೈಸೆನ್ಸು ಪಡೆದಿರುವ ಯಾವೊಬ್ಬ ವ್ಯಕ್ತಿಗೆ, ಅಥವಾ ಅಬ್ಕಾರಿ ಕಮಿಶನರನನ್ನು ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕೃತಗೊಳಿಸಬಹುದಾದ ಯಾವನೇ ಅಧಿಕಾರಿಗೆ, ಲೈಸೆನ್ಸಿಲ್ಲದೆ, ಮಾರಾಟ ಮಾಡಬಹುದು.

(2) 1ನೇ ಉಪಪ್ರಕರಣದ ಮೇರೆಗಿನ ಮಾರಾಟದ ಲೈಸೆನ್ಸನ್ನು–

(ಕ) ಮಾರಾಟವು ಜಿಲ್ಲೆಯ ಒಳಗೆ ಇದ್ದರೆ, ಡೆಪ್ಯುಟಿ ಕಮಿಶನರು, ಅಥವಾ

(ಖ) ಮಾರಾಟವು ಒಂದಕ್ಕಿಂತ ಹೆಚ್ಚು ಜಿಲ್ಲೆಗಳಲ್ಲಿದ್ದರೆ, ಅಬ್ಕಾರಿ ಕಮಿಶನರು, ಕೊಡತಕ್ಕದ್ದು:

ಪರಂತು, ಅಬ್ಕಾರಿ ಕಮಿಶನರು ನಿರ್ಧರಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಇತರ ಯಾವುದೇ ರಾಜ್ಯದಲ್ಲಿ ಜಾರಿಯಲ್ಲಿರುವ ಅಬ್ಕಾರಿ ವಿಧಿಯ ಮೇರೆಗೆ ಕೊಡಲಾದ ಲೈಸೆನ್ಸು, ಈ ಅಧಿನಿಯಮದ ಮೇರೆಗೆ ಕೊಟ್ಟ ಲೈಸೆನ್ಸೆಂದು ಭಾವಿಸಬಹುದು.

(3) ಈ ಪ್ರಕರಣದಲ್ಲಿರುವುದು ಯಾವುದೂ, ಯಾವನೇ ವ್ಯಕ್ತಿಯು ತನ್ನ ಖಾಸಗಿ ಉಪಯೋಗಕ್ಕಾಗಿ ವಿಧಿಬದ್ಧವಾಗಿ ಪಡೆದಿದ್ದ ಮದ್ಯವನ್ನು ಅವನು ಆ ಸ್ಥಳವನ್ನು ಬಿಟ್ಟ ಬಳಿಕ ಅಥವಾ ಅವನ ಮರಣದ ತರುವಾಯ ಅವನು ಅಥವಾ ಅವನ ಪರವಾಗಿ ಅಥವಾ ಅವನ ಹಿತಾಸಕ್ತಿಯ ಪ್ರತಿನಿಧಿಗಳ ಪರವಾಗಿ ಮಾಡುವ ಮದ್ಯದ ಮಾರಾಟಕ್ಕೆ, ಅನ್ವಯಿಸತಕ್ಕದ್ದಲ್ಲ.

(4) (1) ಮತ್ತು (2)ನೇ ಒಳಪ್ರಕರಣಗಳಲ್ಲಿ ಏನೇ ಇದ್ದರೂ ಅಬ್ಕಾರಿ ಕಮಿಶನರು ಈ ಸಂಬಂಧದಲ್ಲಿ ಕೊಟ್ಟ ಲೈಸೆನ್ಸಿನ ಅಧಿಕಾರದ ಮೇರೆಗೆ ಹೊರತು ಮತ್ತು ಅದರ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟ ಹೊರತು ಮತ್ತು ಈ ಬಗ್ಗೆ ರಾಜ್ಯ ಸರಕಾರದಿಂದ ನಿಗದಿಯಾಗುವ ಫೀಜಿನ ಪ್ರಮಾಣಗಳಿಗನುಸಾರವಾಗಿ ಫೀಜು ಸಂದಾಯ ಮಾಡಿದುದಲ್ಲದೇ ಯಾವ ಕ್ಲಬ್ಬೂ ತನ್ನ ಸದಸ್ಯರಿಗೆ ಬೆಲೆ ಅಥವಾ ಯಾವುದೇ ಫೀ ಅಥವಾ ಚಂದಾ ಹಣಕ್ಕಾಗಿ ಮದ್ಯವನ್ನು ಸರಬರಾಜು ಮಾಡತಕ್ಕದ್ದಲ್ಲ.

**16. ಬಟ್ಟಿ ಕಾರ್ಖಾನೆಗಳ ಮತ್ತು ಉಗ್ರಾಣಗಳ ಸ್ಥಾಪನೆ:–** (1) ಅಬ್ಕಾರಿ ಕಮಿಶನರು, ರಾಜ್ಯ ಸರಕಾರದ ಪೂರ್ವ ಮಂಜೂರಾತಿ ಪಡೆದು–

(ಕ) 13ನೇ ಪ್ರಕರಣದ ಮೇರೆಗೆ ಕೊಟ್ಟ ಲೈಸೆನ್ಸಿನ ಮೇರೆಗೆ ರಾಜ್ಯ ಸರಕಾರವು ವಿಧಿಸಬಹುದಾದ ಷರತ್ತುಗಳ ಮೇಲೆ, ಮದ್ಯಸಾರವನ್ನು ತಯಾರಿಸಬಹುದಾದ, ಬಟ್ಟಿ ಕಾರ್ಖಾನೆಯನ್ನು ಸ್ಥಾಪಿಸಬಹುದು;

(ಖ) ಹಾಗೆ ಸ್ಥಾಪಿಸಿದ ಯಾವುದೇ ಬಟ್ಟಿ ಕಾರ್ಖಾನೆಯನ್ನು ನಿಲ್ಲಿಸಬಹುದು;

(ಗ) ರಾಜ್ಯ ಸರಕಾರವು ವಿಧಿಸಲು ಯೋಗ್ಯವೆಂದು ಭಾವಿಸುವಂಥ ಷರತ್ತುಗಳ ಮೇಲೆ, ಬಟ್ಟಿಯ ಅಥವಾ ಸಾರಾಯಿ ಕಾರ್ಖಾನೆಯ ನಿರ್ಮಾಣಕ್ಕೆ ಮತ್ತು ಕೆಲಸಕ್ಕೆ ಲೈಸೆನ್ಸು ಕೊಡಬಹುದು;

(ಘ) ಖಾಸಗಿ ಶುಲ್ಕಬಂಧ ಉಗ್ರಾಣಕ್ಕೆ ಲೈಸನ್ಸು ಕೊಡಬಹುದು.

(ಙ) ಶುಲ್ಕ ಸಂದಾಯ ಮಾಡದೇ ಮಾದಕಗಳನ್ನು ನಿಕ್ಷೇಪಿಸಬಹುದಾದಂಥ ಮತ್ತು ಇಡಬಹುದಾದಂಥ ಉಗ್ರಾಣವನ್ನು ಸ್ಥಾಪಿಸಬಹುದು ಅಥವಾ ಅದಕ್ಕಾಗಿ ಲೈಸನ್ಸು ಕೊಡಬಹುದು ಮತ್ತು

(ಚ) ಹಾಗೆ ಸ್ಥಾಪಿಸಿದ ಯಾವುದೇ ಉಗ್ರಾಣವನ್ನು ನಿಲಿಸಬಹುದು.

(2) 1ನೇ ಉಪಪ್ರಕರಣದ ಮೇರೆಗೆ ಸ್ಥಾಪಿತವಾದ ಉಗ್ರಾಣದಲ್ಲಿ, ಸ್ಥಳೀಯ ಬಳಕೆಗಾಗಿ ಅಥವಾ ರಫ್ತಿಗಾಗಿ ಸಾಗಿಸುವವರೆಗೆ ಶುಲ್ಕಕ್ಕೊಳಪಟ್ಟ ಮಾದಕಗಳನ್ನು ಇಟ್ಟಿರಲು ಸಾಮಾನ್ಯ ಸ್ಥಳಾವಕಾಶವಿರತಕ್ಕದ್ದು.

(3) ರಾಜ್ಯ ಸರಕಾರದ ಮಂಜೂರಾತಿಯಿಲ್ಲದೆ, ಈ ಅಧಿನಿಯಮದ ಮೇರೆಗೆ ಸ್ಥಾಪಿಸಿದ ಅಥವಾ ಲೈಸನ್ಸು ಕೊಡಲಾದ ಯಾವುದೇ ಬಟ್ಟಿ ಕಾರ್ಖಾನೆಯಿಂದ, ಸಾರಾಯಿ ಕಾರ್ಖಾನೆಯಿಂದ, ಉಗ್ರಾಣದಿಂದ ಅಥವಾ ಇತರ ಸಂಗ್ರಹ ಸ್ಥಳದಿಂದ, ಈ ಅಧಿನಿಯಮದ ಮೇರೆಗೆ ವಿಧಿಸಿದ ಶುಲ್ಕವೇನಾದರೂ ಇದ್ದರೆ ಅದನ್ನು ಸಂದಾಯ ಮಾಡಿದ ಹೊರತು ಅಥವಾ ಸಂದಾಯ ಮಾಡುವ ಬಗ್ಗೆ ಒಂದು ಬಂಧಕ ಪತ್ರವನ್ನು ಬರೆದು ಕೊಟ್ಟ ಹೊರತು ಯಾವ ಮಾದಕವನ್ನೂ ಸಾಗಿಸತಕ್ಕದ್ದಲ್ಲ.

**17. ತಯಾರಿಕೆ ಇತ್ಯಾದಿಗಳ ಅಧಿಕಾರವನ್ನು ಗುತ್ತಿಗೆಗೆ ಕೊಡುವ ಶಕ್ತಿ:–** (1) ರಾಜ್ಯ ಸರಕಾರವು ಯಾವನೇ ವ್ಯಕ್ತಿಗೆ,– ಯಾವುದೇ ಭಾರತೀಯ ಮದ್ಯವನ್ನು ಅಥವಾ ಮಾದಕ ದ್ರವ್ಯವನ್ನು ಯಾವುದೇ ನಿರ್ದಿಷ್ಟ ಪ್ರದೇಶದಲ್ಲಿ–

(ಕ) ಬಟ್ಟಿಗಟ್ಟಲೇ ತಯಾರಿಸುವ ಅಥವಾ ಸರಬರಾಜು ಮಾಡುವ ಅಥವಾ ಎರಡನ್ನೂ ಮಾಡುವ ಅಥವಾ

(ಖ) ಸಗಟು ಅಥವಾ ಚಿಲ್ಲರೆಯಾಗಿ ಮಾರಾಟ ಮಾಡುವ, ಅಥವಾ

(ಗ) ಒಟ್ಟು ತಯಾರಿಸುವ ಅಥವಾ ಸರಬರಾಜು ಮಾಡುವ ಅಥವಾ ಎರಡನ್ನೂ ಮಾಡುವ ಮತ್ತು ಚಿಲ್ಲರೆ ಮಾರಾಟ ಮಾಡುವ, – ಸಂಪೂರ್ಣ ಅಥವಾ ಇತರ ಅಧಿಕಾರವನ್ನು, ತಾನು ಸೂಕ್ತವೆಂದು ಆಲೋಚಿಸುವಂಥ ಷರತ್ತುಗಳ ಮೇಲೆ ಮತ್ತು ಅಂಥ ಅವಧಿಗಾಗಿ ಗುತ್ತಿಗೆ ಕೊಡಬಹುದು.

(1ಕ) (1)ನೇ ಉಪಪ್ರಕರಣದ ಮೇರೆಗೆ ಕೊಟ್ಟ ಯಾವುದೇ ಗುತ್ತಿಗೆಯನ್ನು ವರ್ಗಾಯಿಸತಕ್ಕದ್ದಲ್ಲ.

ಪರಂತು, (ವರ್ಗಾಂತರಿತನು ರಾಜ್ಯ ಸರಕಾರದೊಂದಿಗೆ ಗುತ್ತಿಗೆಯ ಒಪ್ಪಂದ ಮಾಡಿಕೊಳ್ಳುವುದನ್ನೂ ಒಳಗೊಂಡು) ನಿಯಮಿಸಬಹುದಾದಂಥ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು, ಗುತ್ತಿಗೆಯನ್ನು ಅಥವಾ ಅದರ ಒಂದು ಭಾಗವನ್ನು ಇತರ ಯಾವನೇ ವ್ಯಕ್ತಿಗೆ ವರ್ಗಾಯಿಸಲು ಗುತ್ತಿಗೆದಾರನಿಗೆ ರಾಜ್ಯ ಸರಕಾರವು, ಅನುಮತಿ ಕೊಡಬಹುದು.

(2) ಲೈಸೆನ್ಸು ಕೊಡುವ ಪ್ರಾಧಿಕಾರಿಯು, (1)ನೇ ಉಪಪ್ರಕರಣದ ಮೇರೆಗೆ ಗುತ್ತಿಗೆದಾರನಿಗೆ ಅಥವಾ (1ಕ) ಉಪಪ್ರಕರಣದ ಮೇರೆಗೆ ವರ್ಗಾಂತರಿತನಿಗೆ ಅವನ ಗುತ್ತಿಗೆಯ ನಿಬಂಧನೆಗಳ ಪ್ರಕಾರ ಲೈಸೆನ್ಸು ಕೊಡಬಹುದು, ಮತ್ತು ಗುತ್ತಿಗೆಯಲ್ಲಿ ಒಳಗುತ್ತಿಗೆಗೆ ಕೊಡುವುದನ್ನು ನಿಷೇಧಿಸುವ ಯಾವ ಷರತ್ತು ಇಲ್ಲದಿರುವಾಗ ಗುತ್ತಿಗೆದಾರನ ಆವೇದನದ ಮೇಲೆ ಅಂಥ ಪ್ರಾಧಿಕಾರಿಯಿಂದ ಅನುಮೋದಿತವಾದ ಯಾವನೇ ಒಳಗುತ್ತಿಗೆದಾರನಿಗೆ ಲೈಸನ್ಸು ಕೊಡಬಹುದು.

(3) (1)ನೇ ಉಪಪ್ರಕಣದಲ್ಲಿ ಅಥವಾ (1ಕ) ಉಪಪ್ರಕರಣದಲ್ಲಿ ಉಲ್ಲೇಖಿಸಿದ ಗುತ್ತಿಗೆಯನ್ನು,–

(ಕ) ಗುತ್ತಿಗೆದಾರನು ಕೊಡಬೇಕಾಗಿರುವ ಯಾವುದೇ ಶುಲ್ಕವನ್ನು ಅಥವಾ ಫೀಜನ್ನು ಯಥಾವಿಧಿ ಸಂದಾಯ ಮಾಡದಿದ್ದರೆ, ಅಥವಾ

(ಖ) ಗುತ್ತಿಗೆಯ ಯಾವುದೇ ನಿಬಂಧನೆಗಳನ್ನು ಅಥವಾ ಷರತ್ತನ್ನು ಗುತ್ತಿಗೆದಾರನು ಅಥವಾ ಅವನ ಯಾವನೇ ನೌಕರನು, ಅಥವಾ ಅವನ ಪರವಾಗಿ ಅಥವಾ ಗುತ್ತಿಗೆದಾರನ ಸ್ಪಷ್ಟ ಅಥವಾ ಇಂಗಿತ ಅನುಮತಿಯೊಂದಿಗೆ ಕೆಲಸ ಮಾಡುವ ಯಾವನೇ ವ್ಯಕ್ತಿಯು ಉಲ್ಲಂಘಿಸಿದರೆ ಅಥವಾ

(ಗ) ಗುತ್ತಿಗೆದಾರನು ವ್ಯವಹಾರನ್ನು ನಡೆಸಲು ಅಸಮರ್ಥನಾದರೆ ಅಥವಾ

(ಘ) ಗುತ್ತಿಗೆಯ ಷರತ್ತುಗಳು ಅವನ್ನು ಇಷ್ಟ ಬಂದಾಗ ಕೊನೆಗೊಳಿಸಲು ಉಪಬಂಧ ಕಲ್ಪಿಸಿದ್ದರೆ;– ಕೊನೆಗೊಳಿಸಬಹುದು:

ಪರಂತು, ಅದರಿಂದ ಬಾಧಿತನಾದ ವ್ಯಕ್ತಿಗೆ ಅಂಥ ಕೊನೆಗೊಳಿಸುವಿಕೆಯ ವಿರುದ್ಧ ಕಾರಣವನ್ನು ತೋರಿಸಲು ಯುಕ್ತ ಅವಕಾಶ ಕೊಡಲ್ಪಟ್ಟಿದ್ದ ಹೊರತು, ಅದನ್ನು ಹಾಗೆ ಕೊನೆಗೊಳಿಸತಕ್ಕದ್ದಲ್ಲ.

(4) (3)ನೇ ಒಳಪ್ರಕರಣದ (ಕ), (ಖ), (ಗ) ಖಂಡಗಳ ಮೇರೆಗೆ ಗುತ್ತಿಗೆಯನ್ನು ಕೊನೆಗೊಳಿಸಿರುವಲ್ಲಿ, ಆ ಅಧಿಕಾರವನ್ನು ತನ್ನ ಆಡಳಿತದಲ್ಲಿ ತೆಗೆದುಕೊಳ್ಳಲು ಮತ್ತು ಅದನ್ನು ಮರು ಮಾರಾಟದ ಮೂಲಕ ಅಥವಾ ಅನ್ಯಥಾ ಮತ್ತೆ ಗುತ್ತಿಗೆಗೆ ಕೊಡಲು ರಾಜ್ಯ ಸರ್ಕಾರವು, ಡೆಪ್ಯುಟಿ ಕಮಿಶನರಿಗೆ ನಿರ್ದೇಶಿಸಬಹುದು; ಮತ್ತು ಹಾಗೆ ಆಡಳಿತಕ್ಕೆ ತೆಗೆದುಕೊಂಡಾಗ ಅಥವಾ ಮರು ಮಾರಾಟ ಮಾಡಿದಾಗ, ವಸೂಲಾದ ಮೊಬಲಗು ಕೊನೆಗೊಳಿಸಲ್ಪಟ್ಟ ಗುತ್ತಿಗೆಯ ಪ್ರಕಾರ ಸಂದೇಯವಿದ್ದ ಮೊಬಲಿಗಿಗಿಂತ ಕಡಿಮೆಯಾಗಿದ್ದರೆ, ಅಂಥ ನಷ್ಟವು ಯಾರ ಗುತ್ತಿಗೆಯನ್ನು ಕೊನೆಗೊಳಿಸಲಾಯಿತೋ ಆ ವ್ಯಕ್ತಿಯಿಂದ ಸಂದೇಯವಿರತಕ್ಕದ್ದು.

**18**. **ಹೆಂಡ ತೆಗೆಯಲು ಗುತ್ತಿಗೆದಾರನ ಅನುಮತಿ:–** 17ನೇ ಪ್ರಕರಣದ ಮೇರೆಗೆ ಹೆಂಡವನ್ನು ತಯಾರಿಸುವ ಅಧಿಕಾರವನ್ನು ಗುತ್ತಿಗೆಗೆ ಕೊಟ್ಟಿರುವಲ್ಲಿ, ಹೆಂಡವನ್ನು ತೆಗೆಯಲು ಗುತ್ತಿಗೆದಾರನು ಕೊಟ್ಟ ಲಿಖಿತ ಅನುಮತಿಯು ಆ ಉದ್ದೇಶಕ್ಕಾಗಿ ಡೆಪ್ಯುಟಿ ಕಮಿಷನರು ಪ್ರಕರಣ 13ರ ಮೇರೆಗೆ ಕೊಡುವ ಲೈಸೆನ್ಸಿನಷ್ಟೇ ಪ್ರಭಾವ ಮತ್ತು ಪರಿಣಾಮವನ್ನು ಹೊಂದಿರತಕ್ಕದ್ದೆಂದು ರಾಜ್ಯ ಸರ್ಕಾರವು ಘೋಷಿಸಬಹುದು.

**19**. **ಅಳತೆ ಮತ್ತು ಪರೀಕ್ಷೆಯ ಬಗ್ಗೆ ಲೈಸೆನ್ಸುದಾರರ ಕರ್ತವ್ಯಗಳು:–** ಈ ಅಧಿನಿಯಮದ ಮೇರೆಗೆ ಕೊಟ್ಟ ಲೈಸೆನ್ಸಿನ ಮೇರೆಗೆ ಯಾವುದೇ ಮಾದಕವನ್ನು ತಯಾರಿಸುವ ಅಥವಾ ಮಾರಾಟ ಮಾಡುವ ಪ್ರತಿಯೊಬ್ಬ ವ್ಯಕ್ತಿಯು,–

(ಕ) ಅಬ್ಕಾರಿ ಕಮಿಷನರನು ನಿಯಮಿಸಬಹುದಾದಂಥ ಅಳತೆಗಳನ್ನು, ತೂಕಗಳನ್ನು ಮತ್ತು ಉಪಕರಣಗಳನ್ನು ಇಟ್ಟುಕೊಳ್ಳಲು ಮತ್ತು ಅವುಗಳನ್ನು ಸುಸ್ಥಿತಿಯಲ್ಲಿ ಲೈಸೆನ್ಸಿಗೆ ಒಳಪಟ್ಟಿರುವ ಆವರಣದಲ್ಲಿ ಇಟ್ಟಿರಲು; ಮತ್ತು

(ಖ) ಈ ಬಗ್ಗೆ ಯಥಾವಿಧಿ ಶಕ್ತಗೊಳಿಸಲಾದ ಅಬ್ಕಾರಿ ಅಧಿಕಾರಿಯು ಅಗತ್ಯಪಡಿಸಿದಾಗ, ಯಾವುದೇ ಕಾಲಕ್ಕೆ, ತನ್ನ ಸ್ವಾಧೀನದಲ್ಲಿರುವ ಯಾವುದೇ ಮಾದಕವನ್ನು ಸದರಿ ಅಬ್ಕಾರಿ ಅಧಿಕಾರಿಯು ಅಗತ್ಯಪಡಿಸುವ ರೀತಿಯಲ್ಲಿ ಅಳೆಯಲು, ತೂಕ ಮಾಡಲು ಅಥವಾ ಪರೀಕ್ಷಿಸಲು ಬದ್ಧನಾಗಿರತಕ್ಕದ್ದು.

**20. ಮಕ್ಕಳನ್ನು ಮತ್ತು ಹೆಂಗಸರನ್ನು ನಿಯೋಜಿಸುವುದಕ್ಕೆ ನಿಷೇಧ:–** (1) ಯಾವುದೇ ಮಾದಕವನ್ನು ತನ್ನ ಆವರಣದಲ್ಲಿ ಸೇವನೆಗಾಗಿ ಮಾರಾಟ ಮಾಡಲು ಲೈಸೆನ್ಸು ಪಡೆದ ಯಾವ ವ್ಯಕ್ತಿಯೂ, ಅಂಥ ಆವರಣವನ್ನು ಜನರಿಗಾಗಿ ತೆರೆದಿಡುವ ಕಾಲದಲ್ಲಿ, ಪಾರಿಶ್ರಾಮಿಕ ಸಹಿತವಾಗಿ ಅಥವಾ ರಹಿತವಾಗಿ, ರಾಜ್ಯ ಸರಕಾರವು ಈ ಸಂಬಂಧದಲ್ಲಿ ನಿಯಮಿಸಬಹುದಾದಂಥ ವಯಸ್ಸಿಗೆ ಕಡಿಮೆಯಿರುವ ಯಾವುದೇ ಮಕ್ಕಳನ್ನು, ಯಾವುದೇ ಅಬ್ಕಾರಿ ಶುಲ್ಕ ವಿಧಿಸಬಹುದಾದಂಥ ವಸ್ತುವನ್ನು ಸಾರ್ವಜನಿಕರು ಸೇವಿಸುವಂಥ ಆವರಣದ ಯಾವುದೇ ಭಾಗದಲ್ಲಿ ನಿಯೋಜಿಸತಕ್ಕದ್ದಲ್ಲ ಅಥವಾ ನಿಯೋಜಿಸಲು ಅನುಮತಿ ಕೊಡತಕ್ಕದ್ದಲ್ಲ.

(2) ಯಾವುದೇ ಮಾದಕವನ್ನು ತನ್ನ ಆವರಣದಲ್ಲಿ ಸೇವನೆಗಾಗಿ ಮಾರಾಟ ಮಾಡಲು ಲೈಸೆನ್ಸು ಕೊಡಲ್ಪಟ್ಟ ಯಾವ ವ್ಯಕ್ತಿಯೂ, ಡೆಪ್ಯುಟಿ ಕಮೀಷನರನ ಪೂರ್ವ ಲಿಖಿತ ಅನುಮತಿಯಿಲ್ಲದೆ, ಅಂಥ ಆವರಣವನ್ನು ಜನರಿಗಾಗಿ ತೆರೆದಿರುವ ಕಾಲದಲ್ಲಿ, ಪಾರಿಶ್ರಾಮಿಕ ಸಹಿತವಾಗಿ ಅಥವಾ ರಹಿತವಾಗಿ, ಅಬ್ಕಾರಿ ಶುಲ್ಕ ವಿಧಿಸಬಹುದಾದಂಥ ವಸ್ತುವನ್ನು ಸಾರ್ವಜನಿಕರು ಸೇವಿಸುವ ಆ ಆವರಣದ ಯಾವುದೇ ಭಾಗದಲ್ಲಿ, ಯಾವ ಹೆಂಗಸನ್ನೂ ನಿಯೋಜಿಸತಕ್ಕದ್ದಲ್ಲ ಅಥವಾ ನಿಯೋಜಿಸಲು ಅನುಮತಿ ಕೊಡತಕ್ಕದ್ದಲ್ಲ.

(3) (2)ನೇ ಉಪಪ್ರಕರಣದ ಮೇರೆಗೆ ಕೊಡಲಾದ ಪ್ರತಿಯೊಂದು ಅನುಮತಿಯು ಲೈಸೆನ್ಸಿನಲ್ಲಿ ಹಿಂಬರಹ ಮಾಡಲ್ಪಡತಕ್ಕದ್ದು ಮತ್ತು ಅದನ್ನು ಬದಲಾಯಿಸಬಹುದು ಮತ್ತು ಹಿಂತೆಗೆದುಕೊಳ್ಳಬಹುದು.

**21. ಸಾರ್ವಜನಿಕ ಶಾಂತಿಯನ್ನು ಕಾಪಾಡಲು ಅಂಗಡಿಗಳನ್ನು ಮುಚ್ಚುವುದು:–** (1) ಜಿಲ್ಲಾ ಮ್ಯಾಜಿಸ್ಟ್ರೇಟನು, ಯಾವುದೇ ಮಾದಕವನ್ನು ಮಾರುವ ಯಾವುದೇ ಅಂಗಡಿಯನ್ನು ಸಾರ್ವಜನಿಕ ಶಾಂತಿ ಪಾಲನೆಯ ಸಲುವಾಗಿ ತಾನು ಅವಶ್ಯವೆಂದು ಆಲೋಚಿಸುವಂಥ ಕಾಲದಲ್ಲಿ ಮತ್ತು ಅವಧಿಯಲ್ಲಿ ಮುಚ್ಚಿರಬೇಕೆಂದು ಲೈಸೆನ್ಸುದಾರನಿಗೆ ಲಿಖಿತ ಮೂಲಕವಾದ ನೋಟೀಸನ್ನು ಅಗತ್ಯಪಡಿಸಬಹುದು.

(2) ಅಂಥ ಯಾವುದೇ ಅಂಗಡಿಯ ಸಮೀಪದಲ್ಲಿ ಯಾವುದೇ ದೊಂಬಿ ಅಥವಾ ವಿಧಿ ವಿರುದ್ಧ ಕೂಟವು ನಡೆಯಬಹುದೆಂದು ಶಂಕಿಸಿದರೆ, ಅಥವಾ ಜರುಗಿದರೆ, ಹಾಜರಿರುವ ಯಾವೊಬ್ಬ ಮ್ಯಾಜಿಸ್ಟ್ರೇಟನು ಅಥವಾ ಸಬ್ ಇನ್ಸ್‌ಪೆಕ್ಟರನ ದರ್ಜೆಗೆ ಕಡಿಮೆಯಿರದ ಯಾವೊಬ್ಬ ಪೋಲೀಸು ಅಧಿಕಾರಿಯು, ತಾನು ಅವಶ್ಯವೆಂದು ಆಲೋಚಿಸುವ ಅವಧಿಯವರೆಗೆ ಅಂಥ ಅಂಗಡಿಯನ್ನು ಮುಚ್ಚಬೇಕೆಂದು ಅಗತ್ಯಪಡಿಸುವುದು:

ಪರಂತು, ಹಾಗೆ ದೊಂಬಿಯು ಅಥವಾ ವಿಧಿ ವಿರುದ್ಧ ಕೂಟವು ನಡೆದಲ್ಲಿ, ಅಂಥ ಮ್ಯಾಜಿಸ್ಟ್ರೇಟನು ಅಥವಾ ಅಧಿಕಾರಿಯು ಇಲ್ಲದಿರುವಾಗ, ಲೈಸೆನ್ಸುದಾರನು, ಯಾವ ಆದೇಶವಿಲ್ಲದೆಯೇ ಆ ಅಂಗಡಿಯನ್ನು ಮುಚ್ಚತಕ್ಕದ್ದು ಮತ್ತು ಅಂಥ ದೊಂಬಿಯು ಅಥವಾ ವಿಧಿ ವಿರುದ್ಧ ಕೂಟವು ನಡೆಯುವವರೆಗೆ ಅದನ್ನು ಮುಚ್ಚಿಯೇ ಇರತಕ್ಕದ್ದು.

## ಅಧ್ಯಾಯ–5

## ಅಬ್ಕಾರಿ ಶುಲ್ಕ ಮತ್ತು ಪ್ರತಿಶುಲ್ಕ

**22. ಅಬ್ಕಾರಿ ಶುಲ್ಕ ವಿಧಿಸಬಹುದಾದ ವಸ್ತುಗಳ ಮೇಲೆ ಅಬ್ಕಾರಿ ಶುಲ್ಕ ಅಥವಾ ಪ್ರತಿಶುಲ್ಕ:–** (1) ಈ ಅಧಿನಿಯಮದ ಮೇರೆಗೆ ಕೊಟ್ಟ ಯಾವುದೇ ಲೈಸೆನ್ಸಿನ ಅಥವಾ ಅನುಮತಿ ಪತ್ರದ ಮೇರೆಗೆ ರಾಜ್ಯದಲ್ಲಿ ತಯಾರಿಸಲಾದ ಅಥವಾ ಉತ್ಪಾದಿಸಲಾದ ಅಬ್ಕಾರಿ ಶುಲ್ಕ ವಿಧಿಸಬಹುದಾದ ಯಾವುದೇ ವಸ್ತುವಿನ ಮೇಲೆ ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ದರ ಅಥವಾ ದರಗಳ ಪ್ರಕಾರ ಅಬ್ಕಾರಿ ಶುಲ್ಕವನ್ನು ವಿಧಿಸತಕ್ಕದ್ದು.

(2) ರಾಜ್ಯದ ಹೊರಗೆ ಭಾರತದಲ್ಲಿ ತಯಾರಿಸಲಾದ ಅಥವಾ ಉತ್ಪಾದಿಸಲಾದ ಮತ್ತು ಈ ಅಧಿನಿಯಮದ ಮೇರೆಗೆ ಕೊಟ್ಟ ಲೈಸೆನ್ಸಿನ ಮೇರೆಗೆ ರಾಜ್ಯದಲ್ಲಿ ಆಮದು ಮಾಡಲಾದ ಅಬ್ಕಾರಿ ಶುಲ್ಕ ವಿಧಿಸಬಹುದಾದ ಯಾವುದೇ ವಸ್ತುವಿನ ಮೇಲೆ, ರಾಜ್ಯ ಸರಕಾರವು ನಿಯಮಿಸಬಹುದಾದಂಥ ದರ ಅಥವಾ ದರಗಳ ಪ್ರಕಾರ ಪ್ರತಿ ಶುಲ್ಕವನ್ನು ವಿಧಿಸತಕ್ಕದ್ದು.

(3) (1)ನೇ ಮತ್ತು (2)ನೇ ಉಪಪ್ರಕರಣಗಳ ಮೇರೆಗೆ ನಿಯಮಿಸಲಾದ ದರಗಳು ಅಬ್ಕಾರಿ ಶುಲ್ಕ ವಿಧಿಸಬಹುದಾದ ಬೇರೆ ಬೇರೆ ತರಹದ ವಸ್ತುಗಳ ಬಗ್ಗೆ ಬೇರೆ ಬೇರೆಯಾಗಿರಬಹುದು ಮತ್ತು 23ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಬೇರೆ ಬೇರೆ ರೀತಿಯಲ್ಲಿ ಶುಲ್ಕ ವಿಧಿಸಿದಾಗ ದರವು ಬೇರೆ ಬೇರೆಯಾಗಿಯೂ ಇರಬಹುದು.

**23. ಅಂಥ ಶುಲ್ಕಗಳನ್ನು ವಿಧಿಸುವ ರೀತಿಗಳು:–** ಕಾಲ, ಸ್ಥಳ ಮತ್ತು ರೀತಿಯನ್ನು ವಿನಿಯಮನಗೊಳಿಸುವ ನಿಯಮಗಳಿಗೊಳಪಟ್ಟು, ನಿಯಮಿಸಬಹುದಾದಂಥ ಈ ಮುಂದಿನ ಯಾವುದೇ ಒಂದು ಅಥವಾ ಹೆಚ್ಚು ರೀತಿಗಳಲ್ಲಿ 22ನೇ ಪ್ರಕರಣದ ಮೇರೆಗೆ ಅಬ್ಕಾರಿ ಶುಲ್ಕವನ್ನು ಅಥವಾ ಪ್ರತಿ ಶುಲ್ಕವನ್ನು ವಿಧಿಸತಕ್ಕದ್ದು ಎಂದರೆ;–

(ಕ) ಯಾವುದೇ ಬಟ್ಟಿ ಕಾರ್ಖಾನೆಯಲ್ಲಿ, ಸಾರಾಯಿ ಕಾರ್ಖಾನೆಯಲ್ಲಿ ತಯಾರಿಕಾ ಕೇಂದ್ರದಲ್ಲಿ ಅಥವಾ ಉಗ್ರಾಣದಲ್ಲಿ ಉತ್ಪಾದಿಸಲಾದ ಅಥವಾ ತಯಾರಿಸಲಾದ ಅಥವಾ ಅಲ್ಲಿಂದ ಹೊರಕಳಿಸಿದ ಅಥವಾ ರಾಜ್ಯಕ್ಕೆ ಆಮದು ಮಾಡಿಕೊಂಡ ಅಬ್ಕಾರಿ ಶುಲ್ಕ ವಿಧಿಸಬಹುದಾದ ಯಾವುದೇ ವಸ್ತುವಿನ ಪರಿಮಾಣಾನುಸಾರವಾಗಿ,

(ಕಕ) ಸಂದರ್ಭಾನುಸಾರ ಯಾವೊಬ್ಬನೇ ವ್ಯಕ್ತಿಯು ಆಮದು ಮಾಡಿಕೊಂಡ ಅಥವಾ ಯಾವುದೇ ಬಟ್ಟಿ ಕಾರ್ಖಾನೆಯಿಂದ, ಸಾರಾಯಿ ಕಾರ್ಖಾನೆಯಿಂದ, ತಯಾರಿಕಾ ಕೇಂದ್ರದಿಂದ ಅಥವಾ ಉಗ್ರಾಣದಿಂದ ಯಾವನೇ ವ್ಯಕ್ತಿಯು ಪಡೆದುಕೊಂಡ ಅಬ್ಕಾರಿ ಶುಲ್ಕ ವಿಧಿಸಬಹುದಾದ ಯಾವುದೇ ವಸ್ತುವಿನ ಪರಿಮಾಣಾನುಸಾರವಾದ (ಲೀಟರ್ ಫೀ ಎಂದು ಕರೆಯಲಾಗುವ) ಫೀಜಿನ ಮೂಲಕ.

**ವಿವರಣೆ.–** ಈ ಖಂಡದಲ್ಲಿ **"ಉಗ್ರಾಣ"** ಎಂಬುದು ಮದ್ಯದ ಸಗಟು ಮಾರಾಟಗಾರನು ಮದ್ಯವನ್ನು ಇಟ್ಟಿರುವ ಸ್ಥಳವನ್ನು ಒಳಗೊಳ್ಳುತ್ತದೆ.

(ಖ) ಈ ಅಧಿನಿಯಮದ ಮೇರೆಗೆ ಸ್ಥಾಪಿತವಾದ ಬಟ್ಟಿ ಕಾರ್ಖಾನೆಯಲ್ಲಿ ಅಥವಾ ಲೈಸೆನ್ಸು ಕೊಡಲಾದ ಬಟ್ಟಿ ಕಾರ್ಖಾನೆ ಸಾರಾಯಿ ಕಾರ್ಖಾನೆ ಅಥವಾ ತಯಾರಿಕಾ ಕೇಂದ್ರದಲ್ಲಿ ಉತ್ಪಾದಿಸಲಾದ ಮದ್ಯಸಾರದ ಅಥವಾ ಇತರ ಮದ್ಯದ ಸಂದರ್ಭದಲ್ಲಿ ನಿಯಮಿಸಬಹುದಾದಂತೆ ಅದರ ಗುಣ ಅಥವಾ ಸತ್ವಕ್ಕನುಸಾರವಾಗಿ ಉಪಯೋಗಿಸಿದ ಪದಾರ್ಥಗಳ ಪರಿಮಾಣದ ಮೇಲೆ ಲೆಕ್ಕ ಹಾಕಲಾದ ಸಮಾನಕಗಳ ಪ್ರಮಾಣಾನುಸಾರವಾಗಿ, ಅಥವಾ ಸಂದರ್ಭಾನುಸಾರವಾಗಿ ಕೊಳೆಯ ಅಥವಾ ಮೊಳೆತ ಧಾನ್ಯದ ಕಷಾಯದ ನಿಸ್ಸತ್ವದ ಪ್ರಮಾಣಕ್ಕನುಸಾರವಾಗಿ;

(ಗ) ಹೆಂಡದ ಸಂದರ್ಭದಲ್ಲಿ, ಹೆಂಡವನ್ನು ತೆಗೆಯಲಾಗುವ ಪ್ರತಿಯೊಂದು ಮರದ ಮೇಲೆ ಕರ ಹಾಕುವ ಮೂಲಕ;

(ಘ) ಅಬ್ಕಾರಿ ಶುಲ್ಕ ವಿಧಿಸಬಹುದಾದ ಯಾವುದೇ ವಸ್ತುವಿನ ತಯಾರಿಕೆ ಅಥವಾ ಮಾರಾಟದ ಸಂಬಂಧದಲ್ಲಿ ಲೈಸೆನ್ಸುಗಳ ಮೇಲಿನ ಫೀಜಿನ ಮೂಲಕ.

**24. ಗುತ್ತಿಗೆಗೆ ಕೊಡುವ ಸಂಬಂಧದಲ್ಲಿ ಅಬ್ಕಾರಿ ಶುಲ್ಕ:–** 22 ಮತ್ತು 23ನೇ ಪ್ರಕರಣಗಳಲ್ಲಿ ಏನೇ ಇದ್ದರೂ, ಅಬ್ಕಾರಿ ಶುಲ್ಕ ವಿಧಿಸಬಹುದಾದ ಯಾವುದೇ ವಸ್ತುವಿಗೆ ಸಂಬಂಧಿಸಿ 17ನೇ ಪ್ರಕರಣದ ಮೇರೆಗೆ ಗುತ್ತಿಗೆಗೆ ಕೊಡುವ ಬಗ್ಗೆ ಸ್ವೀಕರಿಸಿದ ಪ್ರತಿಫಲದ ಮೊಬಲಗು, 22 ಮತ್ತು 23ನೇ ಪ್ರಕರಣಗಳ ಮೇರೆಗೆ ಸಂದೇಯವಿರುವ

ಯಾವುದೇ ಶುಲ್ಕದ ಜೊತೆಗೆ, ಅಬ್ಕಾರಿ ಶುಲ್ಕ ವಿಧಿಸಬಹುದಾದ ಅಂಥ ವಸ್ತುವಿನ ಸಂಬಂಧದಲ್ಲಿ ಸಂದೇಯವಿರುವ ಅಬ್ಕಾರಿ ಶುಲ್ಕ ಅಥವಾ ಪ್ರತಿ ಶುಲ್ಕವಾಗಿರತಕ್ಕದ್ದು.

**25. ಮರಗಳಿಂದ ಹೆಂಡ ಇಳಿಸುವ ಬಗೆಗಿನ ಕರವನ್ನು ಯಾರಿಂದ ವಸೂಲು ಮಾಡಬೇಕು:–** ಪ್ರಕರಣ 23ರ ಮೇರೆಗೆ (ಅಬ್ಕಾರಿ ಮರಗಳ ಮೇಲೆ ಕರ ಹಾಕುವ ಮೂಲಕ ಶುಲ್ಕವನ್ನು ವಿಧಿಸಿದಾಗ, ಮತ್ತು ಅಬ್ಕಾರಿ ಮರಗಳಿಂದ ಲೈಸೆನ್ಸಿಲ್ಲದೆ ಹೆಂಡ ಇಳಿಸಿದಾಗ, ಬರಬೇಕಾದ ಕರವನ್ನು ಪ್ರಥಮತಃ ಹೆಂಡ ಇಳಿಸುವವನಿಂದ ಅಥವಾ ಅವನು ತಪ್ಪಿದಲ್ಲಿ, ಆ ಭೂಮಿಯ ಅಧಿಭೋಗದಾರನು ಯಾರಾದರೂ ಇದ್ದರೆ, ಅವನಿಂದ ಅಥವಾ ಮರಗಳು ಆ ಭೂಮಿಯ ಅಧಿಭೋಗದಾರನಿಗೆ ಸೇರಿಲ್ಲವಾದರೆ ಅಥವಾ ಭೂಮಿಯು ಅಧಿಭೋಗದಲ್ಲಿರದಿದ್ದರೆ, ಅದರ ಒಡೆತನ ಅಥವಾ ಸ್ವಾಧೀನಹೊಂದಿದ ವ್ಯಕ್ತಿಯಿಂದ, ಮರಗಳಿಂದ ತನ್ನ ಸಮ್ಮತಿಯಿಲ್ಲದೆ ಹೆಂಡ ಇಳಿಸಲಾಗಿದೆಯೆಂಬುದನ್ನು ಅವನು ರುಜುವಾತು ಪಡಿಸಿದ ಹೊರತು, ವಸೂಲು ಮಾಡತಕ್ಕದ್ದು.

## ಅಧ್ಯಾಯ–6

## ಲೈಸೆನ್ಸುಗಳು ಮತ್ತು ಅನುಮತಿ ಪತ್ರಗಳು

**26. ಲೈಸೆನ್ಸು ಇತ್ಯಾದಿಗಳ ನಮೂನೆ ಮತ್ತು ಷರತ್ತುಗಳು:–** (1) ಈ ಅಧಿನಿಯಮದ ಮೇರೆಗೆ ಕೊಡಲಾಗುವ ಪ್ರತಿಯೊಂದು ಲೈಸೆನ್ಸು ಅಥವಾ ಅನುಮತಿ ಪತ್ರವನ್ನು ನಿಯಮಿಸಬಹುದಾದಂಥ ಫೀಜಿನ ಸಂದಾಯದ ಮೇಲೆ ಅಂಥ ಅವಧಿಗಾಗಿ ಮತ್ತು ಅಂಥ ನಿರ್ಬಂಧಗಳ ಮೇಲೆ ಮತ್ತು ಅಂಥ ಷರತ್ತುಗಳ ಮೇಲೆ ಕೊಡತಕ್ಕುದು. ಮತ್ತು ಅದು ಅಂಥ ನಮೂನೆಯಲ್ಲಿರತಕ್ಕದ್ದು ಮತ್ತು ಅಂಥ ವಿವರಗಳನ್ನೊಳಗೊಂಡಿರತಕ್ಕದ್ದು.

(2) ಲೈಸೆನ್ಸಿಗೆ ಒಳಪಟ್ಟ ಆವರಣಗಳಲ್ಲಿ ಅಬ್ಕಾರಿ ಅಧಿಕಾರಿಗಳಿಗೆ ಇಳಿದುಕೊಳ್ಳುವುದಕ್ಕಾಗಿ ಲೈಸೆನ್ಸುದಾರನು ಸ್ಥಳಾವಕಾಶ ಒದಗಿಸುವುದನ್ನು ಅಥವಾ ಲೈಸೆನ್ಸಿಗೆ ಒಳಪಟ್ಟ ಆವರಣದಲ್ಲಿ ಅಥವಾ ಅದರ ಸಮೀಪದಲ್ಲಿ ಅಂಥ ಸ್ಥಳಾವಕಾಶದ ಬಗ್ಗೆ ಬಾಡಿಗೆ ಅಥವಾ ಇತರ ವೆಚ್ಚ ಸಂದಾಯ ಮಾಡಬೇಕಾಗುವುದನ್ನು ಮತ್ತು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಮತ್ತು ಲೈಸೆನ್ಸಿನ ಉಪಬಂಧಗಳನ್ನು ಪಾಲಿಸಲಾಗುತ್ತಿದೆಯೆಂಬುದನ್ನು ಸುನಿಶ್ಚಿತಗೊಳಿಸಲು ಅಧೀಕ್ಷಣೆ ನಡೆಸುವ ಸಂಬಂಧದಲ್ಲಿ ರಾಜ್ಯ ಸರಕಾರಕ್ಕೆ ತಗಲಬಹುದಾದ (ಅಬ್ಕಾರಿ ಅಧಿಕಾರಿಗಳ ಸಂಬಳಗಳು ಮತ್ತು ಭತ್ಯೆಗಳೂ ಸೇರಿ) ಖರ್ಚುಗಳು, ವೆಚ್ಚಗಳು ಮತ್ತು ವ್ಯಯಗಳ ಸಂದಾಯ ಮಾಡಬೇಕಾಗುವುದನ್ನು (1)ನೇ ಉಪಪ್ರಕರಣದ ಮೇರೆಗೆ ನಿಯಮಿಸಲಾದ ಷರತ್ತುಗಳು ಒಳಗೊಳ್ಳಬಹುದು.

**27. ಜಾಮೀನು ಮತ್ತು ಎದುರೊಪ್ಪಂದವನ್ನು ತೆಗೆದುಕೊಳ್ಳಲು ಶಕ್ತಿ:–** ವಿನಿಯಮಿಸಬಹುದಾದ ನಿಯಮಗಳಿಗೊಳಪಟ್ಟು, ಈ ಅಧಿನಿಯಮದ ಮೇರೆಗೆ ಲೈಸೆನ್ಸು ಕೊಡುವ ಯಾವನೇ ಪ್ರಾಧಿಕಾರಿಯು,–

(ಕ) ಲೈಸೆನ್ಸುದಾರನು ತನ್ನ ಲೈಸೆನ್ಸಿನ ನಿಬಂಧನೆಗಳ ಪಾಲನೆಯ ಬಗ್ಗೆ ಜಾಮೀನು ಕೊಡಬೇಕೆಂದು ಮತ್ತು

(ಖ) ತನ್ನ ಲೈಸೆನ್ಸಿನ ರೀತಿಗನುಸಾರವಾಗಿ ಎದುರೊಪ್ಪಂದವನ್ನು ಬರೆದುಕೊಡಲು ಲೈಸೆನ್ಸುದಾರನನ್ನು ಅಗತ್ಯಪಡಿಸಬಹುದು.

**28. ತಾಂತ್ರಿಕ ದೋಷಗಳು, ಅಕ್ರಮಗಳು ಮತ್ತು ಲೋಪಗಳು:–** (1) ಈ ಅಧಿನಿಯಮದ ಮೇರೆಗೆ ಕೊಡಲಾದ ಯಾವ ಲೈಸೆನ್ಸೂ ಲೈಸೆನ್ಸಿನಲ್ಲಿ ಅಥವಾ ಅದನ್ನು ಕೊಡುವುದಕ್ಕೆ ಮುಂಚೆ ನಡೆದ ಯಾವುವೇ ವ್ಯವಹರಣೆಗಳಲ್ಲಿ ಕೇವಲ ಪಾರಿಭಾಷಿಕ ದೋಷಗಳು, ಅಕ್ರಮಗಳು ಅಥವಾ ಲೋಪಗಳಿವೆಯೆಂಬ ಕಾರಣದಿಂದ ವಿಧಿಮಾನ್ಯವಲ್ಲವೆಂದು ಭಾವಿಸತಕ್ಕದ್ದಲ್ಲ.

(2) ಯಾವುದು ತಾಂತ್ರಿಕ ದೋಷ, ಅಕ್ರಮತೆ ಅಥವಾ ಲೋಪ ಎಂಬ ಬಗ್ಗೆ ಅಬ್ಕಾರಿ ಕಮಿಶನರರ ತೀರ್ಮಾನವು ಅಂತಿಮವಾಗಿರತಕ್ಕದ್ದು.

**29. ಲೈಸೆನ್ಸು ಇತ್ಯಾದಿಗಳನ್ನು ರದ್ದು ಮಾಡಲು ಅಥವಾ ನಿಲಂಬನ ಮಾಡಲು ಶಕ್ತಿ.–** (1) ರಾಜ್ಯ ಸರಕಾರವು ನಿಯಮಿಸಬಹುದಾದಂಥ ನಿರ್ಬಂಧಗಳಿಗೊಳಪಟ್ಟು ಈ ಅಧಿನಿಯಮದ ಮೇರೆಗೆ ಲೈಸೆನ್ಸನ್ನು ಅಥವಾ ಅನುಮತಿ ಪತ್ರವನ್ನು ಕೊಡುವ ಪ್ರಾಧಿಕಾರಿಯು,–

(ಕ) ಅದನ್ನು ಪಡೆದವನು ಸಂದಾಯ ಮಾಡಬೇಕಾಗಿರುವ ಯಾವುದೇ ಶುಲ್ಕವು ಅಥವಾ ಫೀಜು ಯಥಾವಿಧಿ ಸಂದಾಯವಾಗದಿದ್ದರೆ; ಅಥವಾ

(ಖ) ಅದನ್ನು ಪಡೆದವನು ಅಥವಾ ಅವನ ಯಾವನೇ ನೌಕರನು ಅಥವಾ ಅವನ ಸ್ಪಷ್ಟ ಅಥವಾ ಇಂಗಿತ ಅನುಮತಿಯಿಂದ ಅವನ ಪರವಾಗಿ ಕೆಲಸ ಮಾಡುವ ಯಾವೊಬ್ಬನು ಅದರ ಯಾವುದೇ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಉಲ್ಲಂಘಿಸಿದ ಪ್ರಸಂಗದಲ್ಲಿ; ಅಥವಾ

(ಗ) ಅದನ್ನು ಪಡೆದವನು ಅಥವಾ ಅವನ ಯಾವನೇ ನೌಕರನು ಅಥವಾ ಅವನ ಸ್ಪಷ್ಟ ಅಥವಾ ಇಂಗಿತ ಅನುಮತಿಯಿಂದ ಅವನ ಪರವಾಗಿ ಕೆಲಸ ಮಾಡುವ ಯಾವೊಬ್ಬನು ಈ ಅಧಿನಿಯಮದ ಮೇರೆಗಿನ ಯಾವುದೇ ಸಿದ್ಧಾಪರಾಧಿಯಾಗಿದ್ದರೆ; ಅಥವಾ

(ಘ) ಅದನ್ನು ಪಡೆದವನು ಸಂಜ್ಞೇಯವಾದ ಮತ್ತು ಜಾಮೀನಿನ ಮೇಲೆ ಬಿಡಲಾಗದ ಯಾವುದೇ ಅಪರಾಧದ, ಅಥವಾ ಅಪಾಯಕಾರಿ ದ್ರವ್ಯಗಳ, ಅಧಿನಿಯಮ, 1930ರ ಮೇರೆಗಿನ ಅಥವಾ ವೈದ್ಯಕೀಯ ಮತ್ತು ಪ್ರಸಾಧನ ಸಾಮಗ್ರಿಗಳ ತಯಾರಿಕೆ ಅಧಿನಿಯಮ, 1955ರ ಅಥವಾ ವ್ಯಾಪಾರ ಮತ್ತು ವಾಣಿಜ್ಯ ಗುರುತುಗಳ ಅಧಿನಿಯಮ, 1958ರ ಮೇರೆಗಿನ ಅಥವಾ ಭಾರತೀಯ ದಂಡ ಸಂಹಿತೆಯ ಪ್ರಕರಣ 481, 482, 483, 484, 485, 486, 487, 488 ಅಥವಾ 489ರ ಮೇರೆಗಿನ ಅಥವಾ 1962ರ ಸೀಮಾ ಶುಲ್ಕ ಅಧಿನಿಯಮದ ಪ್ರಕರಣ 112 ಅಥವಾ 114ರ ಮೇರೆಗಿನ ಯಾವುದೇ ದಂಡನೀಯವಾದ ಯಾವುದೇ ಅಪರಾಧದ ಸಿದ್ಧಾ ಪರಾಧಿಯಾಗಿದ್ದರೆ; ಅಥವಾ

(ಙ) ಲೈಸೆನ್ಸಿನ ಅಥವಾ ಅನುಮತಿ ಪತ್ರದ ಷರತ್ತುಗಳು ಹಾಗೆ ರದ್ದು ಮಾಡುವ ಅಥವಾ ನಿಲಂಬನ ಮಾಡುವ ಬಗ್ಗೆ ಉಪಬಂಧಿಸಿದ್ದರೆ–ಅದನ್ನು ರದ್ದು ಮಾಡಬಹುದು ಅಥವಾ ನಿಲಂಬನ ಮಾಡಬಹುದು.

(2) ಯಾವನೇ ವ್ಯಕ್ತಿಯು ಹೊಂದಿರುವ ಲೈಸೆನ್ಸು ಅಥವಾ ಅನುಮತಿ ಪತ್ರವು (1)ನೇ ಉಪಪ್ರಕರಣದ (ಕ) ಖಂಡದ, (ಖ) ಖಂಡದ, (ಗ) ಖಂಡದ ಅಥವಾ (ಘ) ಖಂಡದ ಮೇರೆಗೆ ರದ್ದಾಗಿರುವಲ್ಲಿ, ಮೇಲೆ ಹೇಳಿದ ಪ್ರಾಧಿಕಾರಿಯು, ಈ ಅಧಿನಿಯಮದ ಅಥವಾ ಅಫೀಮು ಅಧಿನಿಯಮ, 1878ರ ಮೇರೆಗೆ ಅಂಥ ವ್ಯಕ್ತಿಗೆ ಕೊಟ್ಟ ಯಾವುದೇ ಇತರ ಲೈಸೆನ್ಸನ್ನು ರದ್ದು ಮಾಡಬಹುದು.

(3) ಅದನ್ನು ಪಡೆದವನು ಅಂಥ ರದ್ದಿಯಾತಿ ಅಥವಾ ನಿಲಂಬನೆಯ ಕಾರಣದಿಂದ ಯಾವುದೇ ಪರಿಹಾರಕ್ಕೆ ಅಥವಾ ಅದರ ಸಂಬಂಧದಲ್ಲಿ ಕೊಟ್ಟ ಯಾವುದೇ ಫೀಜಿನ ಅಥವಾ ಮಾಡಿದ ಯಾವುದೇ ಠೇವಣಿಯ ವಾಪಸಾತಿಗೆ ಹಕ್ಕುಳ್ಳವನಾಗಿರತಕ್ಕದ್ದಲ್ಲ.

**30. ಲೈಸೆನ್ಸನ್ನು ಹಿಂತೆಗೆದುಕೊಳ್ಳಲು ಶಕ್ತಿ:–** (1) ಈ ಅಧಿನಿಯಮದ ಮೇರೆಗೆ ಲೈಸೆನ್ಸು ಕೊಟ್ಟ ಪ್ರಾಧಿಕಾರಿಯು, 29ನೇ ಪ್ರಕರಣದಲ್ಲಿ ಉಲ್ಲೇಖಿಸಿದವುಗಳನ್ನುಳಿದು ಇತರ ಯಾವುದೇ ಕಾರಣಕ್ಕಾಗಿ ಅಂಥ ಲೈಸೆನ್ಸನ್ನು ಹಿಂತೆಗೆದುಕೊಳ್ಳಬೇಕೆಂದು ಯಾವುದೇ ಕಾಲಕ್ಕೆ ಪರ್ಯಾಲೋಚಿಸಿದರೆ, ಅದು, ತಾನು ಹಾಗೆ ಮಾಡಬೇಕೆಂದಿರುವ ಉದ್ದೇಶದ ಬಗ್ಗೆ ಕನಿಷ್ಠ ಮೂವತ್ತು ದಿನಗಳಿಗೆ ಕಡಿಮೆಯಲ್ಲದ ಲಿಖಿತ ನೋಟೀಸು ಕೊಟ್ಟ ನಂತರ ಆ ಲೈಸೆನ್ಸನ್ನು ಹಿಂತೆಗೆದುಕೊಳ್ಳಬಹುದು.

(2) (1)ನೆಯ ಉಪಪ್ರಕರಣದ ಮೇರೆಗೆ ಲೈಸೆನ್ಸನ್ನು ಹಿಂತೆಗೆದುಕೊಂಡಾಗ, ಲೈಸೆನ್ಸಿನ ಉಳಿದಿರುವ ಅವಧಿಯ ಭಾಗಕ್ಕೆ ಅನುಪಾತಿಯಾದ ಲೈಸೆನ್ಸು ಫೀಜಿನ ಒಂದು ಭಾಗವನ್ನು ಮತ್ತು ಲೈಸೆನ್ಸುದಾರನು ಆ ಬಗ್ಗೆ ಇಟ್ಟ ಠೇವಣಿಯನ್ನು, ಅವನಿಂದ ರಾಜ್ಯ ಸರಕಾರಕ್ಕೆ ಬರಬೇಕಾದ ಮೊಬಲಗನ್ನು ವಜಾ ಮಾಡಿಕೊಂಡು ಅವನಿಗೆ ಮರುಪಾವತಿ ಮಾಡತಕ್ಕದ್ದು.

**31. ಲೈಸೆನ್ಸನ್ನು ಬಿಟ್ಟುಕೊಡುವುದು:–** (1) ಅಬ್ಕಾರಿ ಶುಲ್ಕ ವಿಧಿಸಬಹುದಾದ ವಸ್ತುವನ್ನು ಮಾರಾಟ ಮಾಡಲು ಈ ಅಧಿನಿಯಮದ ಮೇರೆಗೆ ಕೊಟ್ಟ ಲೈಸೆನ್ಸನ್ನು ಹೊಂದಿರುವವನು ಅದನ್ನು ಬಿಟ್ಟುಕೊಡುವ ತನ್ನ ಉದ್ದೇಶದ ಬಗ್ಗೆ ಡೆಪ್ಯುಟಿ ಕಮಿಶನರನಿಗೆ, ಒಂದು ತಿಂಗಳ ಲಿಖಿತ ನೋಟೀಸು ಕೊಟ್ಟು, ಆ ಅವಧಿ ಮುಗಿದ ನಂತರ ಹಾಗೆ ಬಿಟ್ಟು ಕೊಡದಿದ್ದರೆ ಅದು ಚಾಲ್ತಿ ಇರಬಹುದಾಗಿದ್ದ ಉಳಿದ ಅವಧಿಯ ಬಗ್ಗೆ ಸಂದೇಯವಿದ್ದ ಫೀಜನ್ನು ಸಂದಾಯ ಮಾಡಿ ತನ್ನ ಲೈಸೆನ್ಸನ್ನು ಬಿಟ್ಟುಕೊಡಬಹುದು:

ಪರಂತು, ಲೈಸೆನ್ಸನ್ನು ಬಿಟ್ಟುಕೊಡಲು ಸಾಕಷ್ಟು ಕಾರಣವಿದೆಯೆಂದು ಅಬ್ಕಾರಿ ಕಮಿಶನರನಿಗೆ ಮನದಟ್ಟಾದರೆ, ಹಾಗೆ ಬಿಟ್ಟುಕೊಟ್ಟಾಗ ಹಾಗೆ ಸಂದೇಯವಿರುವ ಮೊಬಲಗನ್ನು ಅಥವಾ ಅದರ ಯಾವುದೇ ಭಾಗವನ್ನು ಮಾಫಿ ಮಾಡಬಹುದು.

(2) 17ನೇ ಪ್ರಕರಣದ ಮೇರೆಗೆ ಕೊಟ್ಟ ಲೈಸೆನ್ಸಿನ ಸಂದರ್ಭದಲ್ಲಿ (1)ನೇ ಉಪಪ್ರಕರಣವು ಅನ್ವಯಿಸತಕ್ಕದ್ದಲ್ಲ.

## ಅಧ್ಯಾಯ–7

## ಅಪರಾಧಗಳು ಮತ್ತು ದಂಡಗಳು

**32. ವಿಧಿವಿರುದ್ಧ ಆಮದು ಇತ್ಯಾದಿಗಳ ಬಗ್ಗೆ ದಂಡ:–** (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ, ಹೊರಡಿಸಿದ ಅಥವಾ ಕೊಟ್ಟ ಯಾವುದೇ ನಿಯಮದ, ಅಧಿಸೂಚನೆಯ ಅಥವಾ ಆದೇಶಗಳ ಅಥವಾ ಈ ಅಧಿನಿಯಮದ ಮೇರೆಗೆ ಕೊಟ್ಟ ಯಾವುದೇ ಲೈಸೆನ್ಸನ್ನು ಅಥವಾ ಅನುಮತಿ ಪತ್ರವನ್ನು ಉಲ್ಲಂಘಿಸಿದಲ್ಲಿ, ಯಾವೊಬ್ಬನು, ಯಾವುದೇ ಮಾದಕವನ್ನು ರಫ್ತು ಮಾಡಿದರೆ, ಸಾಗಿಸಿದರೆ, ತಯಾರಿಸಿದರೆ, ಸಂಗ್ರಹಿಸಿದರೆ ಅಥವಾ ಸ್ವಾಧೀನದಲ್ಲಿಟ್ಟುಕೊಂಡರೆ, ಅವನ ಅಪರಾಧ ಸಿದ್ಧಪಟ್ಟ ಬಳಿಕ, (ಪ್ರತಿಯೊಂದು ಅಪರಾಧಕ್ಕಾಗಿ ಎರಡು ವರ್ಷಗಳವರೆಗಿನ ಕಠಿಣ ಕಾರಾವಾಸದಿಂದ ಮತ್ತು ಎರಡು ಸಾವಿರ ರೂಪಾಯಿವರೆಗಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು):

ಪರಂತು ಅಂಥ ದಂಡನೆಯು–

(i) ಮೊದಲನೆಯ ಅಪರಾಧಕ್ಕಾಗಿ ಮೂರು ತಿಂಗಳ ಕಠಿಣ ಕಾರಾವಾಸಕ್ಕೆ ಮತ್ತು ಒಂದು ನೂರು ರೂಪಾಯಿಗಳ ಜುಲ್ಮಾನೆಗೆ ಕಡಿಮೆಯಾಗಿರತಕ್ಕದ್ದಲ್ಲ ಮತ್ತು

(ii) ಎರಡನೆಯ ಮತ್ತು ಅನಂತರದ ಅಪರಾಧಗಳಿಗಾಗಿ, ಅಂಥ ಪ್ರತಿಯೊಂದು ಅಪರಾಧಕ್ಕೆ ಆರು ತಿಂಗಳ ಕಠಿಣ ಕಾರಾವಾಸಕ್ಕೆ ಮತ್ತು ಒಂದು ಸಾವಿರ ರೂಪಾಯಿಗಳ ಜುಲ್ಮಾನೆಗೆ ಕಡಿಮೆಯಾಗಿರತಕ್ಕದ್ದಲ್ಲ.

(2) ಈ ಅಧಿನಿಯಮದ ಅಥವಾ ಅದರನ್ವಯ ರಚಿತವಾದ, ಹೊರಡಿಸಿದ ಅಥವಾ ಕೊಟ್ಟ ಯಾವುದೇ ನಿಯಮ, ಅಧಿಸೂಚನೆ ಅಥವಾ ಆದೇಶದ ಅಥವಾ ಈ ಅಧಿನಿಯಮದ ಮೇರೆಗೆ ಕೊಟ್ಟ ಯಾವುದೇ ಲೈಸೆನ್ಸನ್ನು ಅಥವಾ ಅನುಮತಿ ಪತ್ರವನ್ನು ಉಲ್ಲಂಘಿಸಿ ಯಾವೊಬ್ಬನು–

(ಕ) 37ನೇ ಪ್ರಕರಣದಲ್ಲಿ ಉಪಬಂಧಿಸಿದ ಸಂದರ್ಭಗಳನ್ನುಳಿದು, ಯಾವುದೇ ಮಾದಕವನ್ನು ಮಾರಿದರೆ; ಅಥವಾ

(ಖ) ಮಾದಕ ನಾರಿನ ಗಿಡದ ಸಾಗುವಳಿ ಮಾಡಿದರೆ ಅಥವಾ ಅದು ತಾನಾಗಿಯೇ ಬೆಳೆಯುವುದನ್ನು ತಡೆಗಟ್ಟಲು ಅಥವಾ ಅದರ ಮೂಲೋತ್ಪಾಟನ ಮಾಡಲು ನಿಯಮಿಸಿದ ಕ್ರಮಗಳನ್ನು ಕೈಗೊಳ್ಳಲು ತಪ್ಪಿದರೆ; ಅಥವಾ

(ಗ) ಹೆಂಡ ಉತ್ಪತ್ತಿಯಾಗುವ ಮರದಿಂದ ಹೆಂಡ ಇಳಿಸಿದರೆ ಅಥವಾ ಅದರಿಂದ ಹೆಂಡ ತೆಗೆದರೆ; ಅಥವಾ

(ಘ) ಯಾವುದೇ ಬಟ್ಟಿ ಕಾರ್ಖಾನೆಯನ್ನು ಅಥವಾ ಬ್ರಿವರಿಯನ್ನು, ಸಾರಾಯಿ ಕಾರ್ಖಾನೆಯನ್ನು ನಿರ್ಮಾಣ ಮಾಡಿದರೆ ಅಥವಾ ನಡೆಸಿದರೆ; ಅಥವಾ

(ಙ) ಹೆಂಡವನ್ನುಳಿದು ಇತರ ಯಾವುದೇ ಮಾದಕವನ್ನು ತಯಾರಿಸುವ ಉದ್ದೇಶಕ್ಕಾಗಿ ಯಾವುದೇ ಪದಾರ್ಥವನ್ನು ಬಟ್ಟಿಯಂತ್ರವನ್ನು, ಪಾತ್ರೆಯನ್ನು ಉಪಕರಣವನ್ನು ಅಥವಾ ಸಲಕರಣೆಯನ್ನು ಉಪಯೋಗಿಸಿದರೆ, ಇಟ್ಟಿದ್ದರೆ ಅಥವಾ ಸ್ವಾಧೀನದಲ್ಲಿಟ್ಟುಕೊಂಡಿದ್ದರೆ;

(ಚ) ಈ ಅಧಿನಿಯಮದ ಮೇರೆಗೆ ಲೈಸೆನ್ಸು ಕೊಡಲಾದ, ಸ್ಥಾಪಿತವಾದ ಅಥವಾ ಮುಂದುವರಿಯುತ್ತಿರುವ ಯಾವುದೇ ಬಟ್ಟಿ ಕಾರ್ಖಾನೆಯಿಂದ, ಸಾರಾಯಿ ಕಾರ್ಖಾನೆಯಿಂದ ಅಥವಾ ಉಗ್ರಾಣದಿಂದ ಯಾವುದೇ ಮಾದಕವನ್ನು ಸಾಗಿಸಿದರೆ; ಅಥವಾ

(ಛ) ಯಾವುದೇ ಮದ್ಯವನ್ನು ಸೀಸೆಗೆ ತುಂಬಿದರೆ;

ಅವನು ಅಪರಾಧ ಸಿದ್ಧಪಟ್ಟ ಮೇಲೆ ಪ್ರತಿಯೊಂದು ಅಪರಾಧಕ್ಕಾಗಿ ಎರಡು ವರ್ಷಗಳವರೆಗಿನ ಕಠಿಣ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿವರೆಗಿನ ಜುಲ್ಮಾನೆಯಿಂದ ದಂಡಿತನಾಗತಕ್ಕುದು:

ಪರಂತು ದಂಡನೆಯು–

(i) ಮೊದಲನೆಯ ಅಪರಾಧಕ್ಕೆ ಮೂರು ತಿಂಗಳ ಕಠಿಣ ಕಾರಾವಾಸಕ್ಕೆ ಮತ್ತು ಒಂದು ನೂರು ರೂಪಾಯಿಗಳ ಜುಲ್ಮಾನೆಗೆ ಕಡಿಮೆಯಾಗಿರತಕ್ಕದ್ದಲ್ಲ; ಮತ್ತು

(ii) ಎರಡನೆಯ ಮತ್ತು ಅನಂತರದ ಅಪರಾಧಗಳಿಗಾಗಿ ಅಂಥ ಪ್ರತಿಯೊಂದು ಅಪರಾಧಕ್ಕೆ ಆರು ತಿಂಗಳ ಕಠಿಣ ಕಾರಾವಾಸಕ್ಕೆ ಮತ್ತು ಒಂದು ಸಾವಿರ ರೂಪಾಯಿಗಳ ಜುಲ್ಮಾನೆಗೆ ಕಡಿಮೆಯಾಗಿರತಕ್ಕದ್ದಲ್ಲ.

**33. ಗುಣಾಪಹೃತ ಮದ್ಯಸಾರವನ್ನು ಮನುಷ್ಯೋಪಯೋಗಕ್ಕೆ ತಕ್ಕದುದನ್ನಾಗಿ ಮಾಡುವುದಕ್ಕೆ ದಂಡ ಯಾವೊಬ್ಬನು–**

(ಕ) ಗುಣಾಪಹೃತ ಯಾವುದೇ ಮದ್ಯಸಾರವನ್ನು ಮನುಷ್ಯೋಪಯೋಗಕ್ಕೆ ತಕ್ಕುದುದುನ್ನಾಗಿ ಮಾಡಿದರೆ; ಅಥವಾ

(ಖ) ತತ್ಸಂಬಂಧದಲ್ಲಿ ಅಂಥ ಅಪರಾಧ ಮಾಡಲಾಗಿದೆ ಅಥವಾ ಅಂಥ ಅಪರಾಧ ಮಾಡಲು ಯತ್ನಿಸಲಾಗಿದೆಯೆಂದು ತಾನು ತಿಳಿಯುವ ಅಥವಾ ನಂಬಲು ಕಾರಣವಿರುವ ಯಾವುದೇ ಮದ್ಯಸಾರವನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡಿದ್ದರೆ;

ಅವನು ಅಪರಾಧ ಸಿದ್ದ ಪಟ್ಟ ಮೇಲೆ, ಪ್ರತಿಯೊಂದು ಅಪರಾಧಕ್ಕಾಗಿ ಎರಡು ವರ್ಷಗಳವರೆಗಿನ ಕಠಿಣ ಕಾರಾವಾಸದಿಂದ ಮತ್ತು ಎರಡು ಸಾವಿರ ರೂಪಾಯಿವರೆಗಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(1) ಪರಂತು ದಂಡನೆಯು,

(i) ಮೊದಲನೆಯ ಅಪರಾಧಕ್ಕಾಗಿ ಆರು ತಿಂಗಳ ಕಠಿಣ ಕಾರಾವಾಸಕ್ಕೆ ಮತ್ತು ಐದುನೂರು ರೂಪಾಯಿಗಳ ಜುಲ್ಮಾನೆಗೆ ಕಡಿಮೆಯಾಗಿರತಕ್ಕದ್ದಲ್ಲ; ಮತ್ತು

(ii) ಎರಡನೆಯ ಮತ್ತು ಅನಂತರದ ಅಪರಾಧಗಳಿಗಾಗಿ ಅಂಥ ಪ್ರತಿಯೊಂದು ಅಪರಾಧಕ್ಕಾಗಿ ಒಂದು ವರ್ಷದ ಕಠಿಣ ಕಾರಾವಾಸಕ್ಕೆ ಮತ್ತು ಒಂದು ಸಾವಿರ ರೂಪಾಯಿಗಳ ಜುಲ್ಮಾನೆಗೆ ಕಡಿಮೆಯಾಗಿರತಕ್ಕದ್ದಲ್ಲ;

**ವಿವರಣೆ:–** ಈ ಪ್ರಕರಣದ ಉದ್ದೇಶಕ್ಕಾಗಿ ತದ್ವಿರುದ್ಧ ರುಜುವಾತಾದ ಹೊರತು ಯಾವುದೇ ಮದ್ಯಸಾರವು ಅದನ್ನು ರಾಸಾಯನಿಕ ವಿಶ್ಲೇಷಣೆಗೊಳಪಡಿಸಿದಾಗ ನಿಯಮಿಸಿದ ಗುಣಾಪಹೃತ ದ್ರವ್ಯಗಳ ಯಾವುದೇ ಪ್ರಮಾಣವನ್ನು ಒಳಗೊಂಡಿರುವುದು ರುಜುವಾತಾದರೆ ಅದು ಗುಣಾಪಹೃತವಾಗಿದೆ ಎಂದು ಅಥವಾ ಅದನ್ನೊಳಗೊಂಡಿದೆಯೆಂದು ಅಥವಾ ಗುಣಾಪಹೃತ ಮದ್ಯಸಾರದಿಂದ ತೆಗೆಯಲಾಗಿದೆ ಎಂದು ಪೂರ್ವಭಾವನೆ ಮಾಡತಕ್ಕದ್ದು.

**34. ವಿಧಿವಿರುದ್ಧ ಸ್ವಾಧೀನಕ್ಕೆ ದಂಡ:–** ವಿಧಿಬದ್ಧ ಅಧಿಕಾರವಿಲ್ಲದೆ ಯಾವನೊಬ್ಬನು ಅದನ್ನು ವಿಧಿವಿರುದ್ಧವಾಗಿ ಆಮದು ಮಾಡಲಾಗಿದೆ, ಸಾಗಿಸಲಾಗಿದೆ, ತಯಾರಿಸಲಾಗಿದೆ, ಬಳಸಲಾಗಿದೆ ಅಥವಾ ಸಂಗ್ರಹಿಸಲಾಗಿದೆಯೆಂದು ಅಥವಾ ಅದರ ಬಗ್ಗೆ ನಿಯಮಿಸಿದ ಫೀಜು ಸಂದಾಯವಾಗಿಲ್ಲವೆಂದು ತಿಳಿದೂ ಯಾವುದೇ ಮಾದಕದ ಯಾವುದೇ ಪ್ರಮಾಣವನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡಿದ್ದರೆ, ಅವನು ಅಪರಾಧ ಸಿದ್ಧಪಟ್ಟ ಮೇಲೆ ಆರು ತಿಂಗಳ ಅವಧಿಯವರೆಗಿನ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು;

ಪರಂತು, ದಂಡನೆಯು–

(i) ಮೊದಲನೆಯ ಅಪರಾಧಕ್ಕಾಗಿ, ಮೂರು ತಿಂಗಳು ಕಾರಾವಾಸಕ್ಕೆ ಮತ್ತು ಒಂದು ನೂರು ರೂಪಾಯಿಗಳ ಜುಲ್ಮಾನೆಗೆ ಕಡಿಮೆಯಾಗಿರತಕ್ಕದ್ದಲ್ಲ; ಮತ್ತು

(ii) ಎರಡನೆಯ ಮತ್ತು ಅನಂತರ ಅಪರಾಧಗಳಿಗಾಗಿ, ಅಂಥ ಪ್ರತಿಯೊಂದು ಅಪರಾಧಕ್ಕಾಗಿ ಆರು ತಿಂಗಳ ಕಾರಾವಾಸಕ್ಕೆ ಮತ್ತು ಒಂದು ಸಾವಿರ ರೂಪಾಯಿಗಳ ಜುಲ್ಮಾನೆಗೆ ಕಡಿಮೆಯಾಗಿರತಕ್ಕದ್ದಲ್ಲ:

ಮತ್ತೂ ಪರಂತು, ವಿಧಿಸಿದ ಜುಲ್ಮಾನೆಯು ಅಂಥ ಮಾದಕದ ಮೇಲೆ ವಿಧಿಸಬಹುದಾದ ಶುಲ್ಕದ ಮೊಬಲಗಿನ ನಾಲ್ಕರಷ್ಟಕ್ಕಿಂತ ಕಡಿಮೆಯಾಗಿರತಕ್ಕದ್ದಲ್ಲ.

**35. ಅನ್ಯಥಾ ಉಪಬಂಧಿಸಿದ ಅಪರಾಧಕ್ಕಾಗಿ ದಂಡ:–** ಈ ಅಧಿನಿಯಮದ ಅಥವಾ ಅದರನ್ವಯ ರಚಿಸಿದ, ಹೊರಡಿಸಿದ ಅಥವಾ ಕೊಟ್ಟ ಯಾವುದೇ ನಿಯಮ, ಅಧಿಸೂಚನೆ ಅಥವಾ ಆದೇಶವನ್ನು ಉಲ್ಲಂಘಿಸಿದ ಯಾವನೊಬ್ಬನು ಏನೊಂದು ಕೃತ್ಯವನ್ನು ಮಾಡಿದರೆ ಮತ್ತು ಅದರ ಬಗ್ಗೆ ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧವಿರದಿದ್ದರೆ, ಅವನು ಅಪರಾಧ ಸಿದ್ಧ ಪಟ್ಟ ಮೇಲೆ ಎರಡು ನೂರು ರೂಪಾಯಿಗಳಿಗೆ ಕಡಿಮೆಯಿರದ ಮತ್ತು ಒಂದು ಸಾವಿರ ರೂಪಾಯಿಗೆ ಹೆಚ್ಚಾಗದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**36. ಲೈಸೆನ್ಸುದಾರ ಮೊದಲಾದವರ ದುರ್ವರ್ತನೆಗೆ ದಂಡ:–** (1) ಈ ಅಧಿನಿಯಮದ ಮೇರೆಗೆ ಕೊಟ್ಟ ಲೈಸೆನ್ಸನ್ನು ಅಥವಾ ಅನುಮತಿ ಪತ್ರವನ್ನು ಪಡೆದವನು ಅಥವಾ ಹಾಗೆ ಪಡೆದವನ ನೌಕರನಾಗಿರುವ ಅಥವಾ ಅವನ ಪರವಾಗಿ ಕೆಲಸ ಮಾಡುವ ಯಾವೊಬ್ಬನು–

(ಕ) ಅಬ್ಕಾರಿ ಅಧಿಕಾರಿಯು ಕೇಳಿದಾಗ ಅಥವಾ ಹಾಗೆ ಕೇಳಲು ಯಥಾವಿಧಿ ಶಕ್ತಗೊಳಿಸಲಾದ ಯಾವೊಬ್ಬ ಇತರ ಅಧಿಕಾರಿಯು ಕೇಳಿದಾಗ ಅಂಥ ಲೈಸನ್ಸನ್ನು ಅಥವಾ ಅನುಮತಿ ಪತ್ರವನ್ನು ಹಾಜರುಪಡಿಸಲು ತಪ್ಪಿದರೆ; ಅಥವಾ

(ಖ) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರದ ಲೈಸೆನ್ಸಿನ ಅಥವಾ ಅನುಮತಿ ಪತ್ರದ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿ ಬುದ್ಧಿಪೂರ್ವಕವಾಗಿ ಯಾವುದೇ ಕೃತ್ಯವನ್ನು ಮಾಡಿದರೆ ಅಥವಾ ಮಾಡಲು ತಪ್ಪಿದರೆ; ಅಥವಾ

(ಗ) 32ನೇ ಪ್ರಕರಣದಲ್ಲಿ ಉಪಬಂಧಿಸಿರುವ ಸಂದರ್ಭವನ್ನುಳಿದು 71ನೇ ಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಬುದ್ಧಿಪೂರ್ವಕವಾಗಿ ಉಲ್ಲಂಘಿಸಿದರೆ; ಅಥವಾ

(ಘ) ಯಾವುದೇ ಮಾದಕವನ್ನು ಮಾರಾಟ ಮಾಡುವ ಅಥವಾ ತಯಾರಿಸುವ ಯಾವುದೇ ಸ್ಥಳದಲ್ಲಿ ಕುಡಿದು ಅಮಲಿನಲ್ಲಿರಲು, ದುರ್ವರ್ತಿಸಲು ಅಥವಾ ಜೂಜಾಡಲು ಅವಕಾಶ ಕೊಟ್ಟರೆ; ಅಥವಾ

(ಙ) ಜಾಮೀನಿನ ಮೇಲೆ ಬಿಡಲಾಗದ ಯಾವುದೇ ಅಪರಾಧದ ಸಿದ್ಧಾಪರಾಧಿಯೆಂದು ತಾನು ತಿಳಿದಿರುವ ಅಥವಾ ನಂಬಲು ಕಾರಣವಿರುವ ಅಥವಾ ಕುಪ್ರಸಿದ್ಧ ವ್ಯಭಿಚಾರಿಗಳನ್ನು ಅಥವಾ ರೂಢಾಪರಾಧಿಗಳನ್ನು, ಅಬ್ಕಾರಿ ಶುಲ್ಕ ವಿಧಿಸಬಹುದಾದ ವಸ್ತುವನ್ನು ಮಾರಾಟ ಮಾಡುವ ಅಥವಾ ತಯಾರಿಸುವ ಆವರಣದಲ್ಲಿ ಹೋಗಲು, ಬರಲು ಅಥವಾ ಅಲ್ಲಿ ಸೇರಲು ಅಥವಾ ಅಲ್ಲಿ ಉಳಿಯಲು ಅವಕಾಶ ಕೊಟ್ಟರೆ ಅಥವಾ ಅದನ್ನು ಸಹಿಸಿದರೆ; ಅಥವಾ

(ಚ) ಕುಡಿದ ಅಮಲಿನಲ್ಲಿರುವ ಯಾವೊಬ್ಬ ವ್ಯಕ್ತಿಗೆ ಮಾದರವನ್ನು ಮಾರಾಟ ಮಾಡಿದರೆ; ಅಥವಾ

(ಛ) ನೋಡಲು ಹದಿನೆಂಟು ವರ್ಷ ವಯಸ್ಸಿಗೆ ಕಡಿಮೆಯೆಂದು ಕಾಣುವ ಯಾವುದೇ ಮಗುವಿಗೆ ಯಾವುದೇ ಮಾದಕವನ್ನು ಮಾರಾಟ ಮಾಡಿದರೆ ಅಥವಾ ಕೊಟ್ಟರೆ ಅಥವಾ ಅಬ್ಕಾರಿ ಶುಲ್ಕ ವಿಧಿಸಬಹುದಾದ ಯಾವುದೇ ವಸ್ತುವನ್ನು ಮಾರಾಟ ಮಾಡುವ ಅಥವಾ ತಯಾರಿಸುವ ಯಾವುದೇ ಆವರಣದಲ್ಲಿ ಅಂಥ ಮಗುವು ಉಳಿದುಕೊಳ್ಳಲು ಅವಕಾಶ ಕೊಟ್ಟರೆ ಅಥವಾ ಅದನ್ನು ಸಹಿಸಿದರೆ; ಅಥವಾ

(ಜ) 20ನೇ ಪ್ರಕರಣವನ್ನು ಉಲ್ಲಂಘಿಸಿ, ಆ ಪ್ರಕರಣದಲ್ಲಿ ಉಲ್ಲೇಖಿಸಿದ ತನ್ನ ಲೈಸೆನ್ಸ್ ಪಡೆದಿರುವ ಆವರಣದ ಯಾವುದೇ ಭಾಗದಲ್ಲಿ ಯಾವುದೇ ಮಗುವನ್ನು ಅಥವಾ ಹೆಂಗಸನ್ನು ನಿಯೋಜಿಸಿಕೊಂಡರೆ ಅಥವಾ ನಿಯೋಜಿಸಲು ಅವಕಾಶ ಕೊಟ್ಟರೆ;–

ಅವನು, ಅಪರಾಧ ಸಿದ್ಧಪಟ್ಟ ಮೇಲೆ ಮೂರು ತಿಂಗಳವರೆಗಿನ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿವರೆಗಿನ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ಲೈಸೆನ್ಸನ್ನು ಅಥವಾ ಅನುಮತಿ ಪತ್ರವನ್ನು ಹೊಂದಿರುವವನು ಅಥವಾ ಅವನ ನಿಯೋಜನೆಯಲ್ಲಿರುವ ಅಥವಾ ಅವನ ಪರವಾಗಿ ಕೆಲಸ ಮಾಡುವ ಯಾವೊಬ್ಬ ವ್ಯಕ್ತಿಯು ಹಾಗೆ ಲೈಸೆನ್ಸು ಅಥವಾ ಅನುಮತಿ ಪತ್ರವನ್ನು ಪಡೆದಿರುವವನ ಆವರಣದಲ್ಲಿ ಕುಡಿದು ಅಮಲಿನಲ್ಲಿರಲು ಅನುಮತಿ ಕೊಟ್ಟಿರುವನೆಂದು ಆರೋಪಿತನಾಗಿರುವಲ್ಲಿ, ಮತ್ತು ಅಂಥ ಆವರಣದಲ್ಲಿ ಯಾವೊಬ್ಬ ವ್ಯಕ್ತಿಯು ಕುಡಿದು ಅಮಲಿನಲ್ಲಿದ್ದನೆಂದು ರುಜುವಾತಾದರೆ, ಲೈಸೆನ್ಸು ಪಡೆದವನು ಮತ್ತು ಅವನಿಂದ ನಿಯೋಜಿತರಾದ ವ್ಯಕ್ತಿಗಳು ಅಂಥ ಆವರಣದಲ್ಲಿ ಕುಡಿದು ಅಮಲಿನಲ್ಲಿರದಂತೆ ತಡೆಯಲು ಎಲ್ಲ ಯುಕ್ತ ಕ್ರಮಗಳನ್ನು ಕೈಗೊಂಡಿದ್ದರೆಂಬುದನ್ನು ರುಜುವಾತುಪಡಿಸುವ ಭಾರವು ಆರೋಪಣೆಗೆ ಗುರಿಯಾದ ವ್ಯಕ್ತಿಯ ಮೇಲೆ ಇರುವುದು.

**37. ಲೈಸೆನ್ಸು ಪಡೆದ ಮಾರಾಟಗಾರ ಅಥವಾ ತಯಾರಿಕೆದಾರರಿಂದ ಕಲಬೆರಕೆ ಇತ್ಯಾದಿಗಳಿಗೆ ದಂಡ:–** (1) ಈ ಅಧಿನಿಯಮದ ಮೇರೆಗೆ ಯಾವುದೇ ಮಾದಕವನ್ನು ಮಾರಾಟ ಮಾಡಲು ಅಥವಾ ತಯಾರಿಸಲು ಲೈಸೆನ್ಸು ಪಡೆದಿರುವ ಯಾವೊಬ್ಬನು, ಅಥವಾ ಹಾಗೆ ಲೈಸೆನ್ಸು ಪಡೆದವನ ನಿಯೋಜನೆಯಲ್ಲಿರುವ ಯಾವೊಬ್ಬ ವ್ಯಕ್ತಿಯು, ತನ್ನಿಂದ ಮಾರಾಟವಾಗುವ ಅಥವಾ ತಯಾರಿಸಲಾಗುವ ಮಾದಕದೊಂದಿಗೆ, ಅದರ ಮಾದಕ ಗುಣ ಅಥವಾ ಬಲವನ್ನು ವಾಸ್ತವಿಕವಾಗಿ ಅಥವಾ ತೋರಿಬರುವಂತೆ ಹೆಚ್ಚಿಸಬಹುದಾದ ಯಾವುದೇ ಹಾನಿಕಾರಕ ದ್ರವ್ಯವನ್ನು ಅಥವಾ ವಿದೇಶೀ ಪದಾರ್ಥವನ್ನು ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ನಿಯಮದಿಂದ ನಿಷೇಧಿಸಲಾದ ಯಾವುದೇ ಪದಾರ್ಥವನ್ನು ಬೆರೆಸಿದರೆ ಅಥವಾ ಬೆರೆಸಲು ಅವಕಾಶ ಕೊಟ್ಟರೆ, ಹಾಗೆ ಬೆರೆಸುವುದು ಭಾರತೀಯ ದಂಡ ಸಂಹಿತೆಯ 272ನೇ ಪ್ರಕರಣದ ಮೇರೆಗೆ ಕಲಬೆರಕೆಯೆಂದೆನಿಸದಿದ್ದಾಗ್ಯೂ, ಅವನು ಅಪರಾಧ ಸಿದ್ಧಪಟ್ಟ ಮೇಲೆ, ಮೂರು ತಿಂಗಳವರೆಗಿನ ಅವಧಿಯವರೆಗಿನ ಕಾರಾವಾಸದಿಂದ ಮತ್ತು (ಒಂದು ಸಾವಿರ ರೂಪಾಯಿಗಳಿಗೆ ಕಡಿಮೆಯಿರದ ಮತ್ತು ಎರಡು ಸಾವಿರ ರೂಪಾಯಿಗಳಿಗೆ ಹೆಚ್ಚಾಗಿರದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು).

(2) ಈ ಅಧಿನಿಯಮದ ಮೇರೆಗೆ ಯಾವುದೇ ಮಾದಕದ ಮಾರಾಟಕ್ಕೆ ಅಥವಾ ತಯಾರಿಕೆಗೆ ಲೈಸೆನ್ಸು ಪಡೆದಿರುವ ಯಾವೊಬ್ಬನು, ಅಥವಾ ಹಾಗೆ ಲೈಸೆನ್ಸು ಹೊಂದಿರುವವನ ನೌಕರಿಯಲ್ಲಿರುವ ವ್ಯಕ್ತಿಯು,–

(ಕ) ಅದು ಭಾರತೀಯ ಮದ್ಯವೆಂಬುದು ತನಗೆ ತಿಳಿದಿದ್ದರೂ ಅಥವಾ ನಂಬಲು ಕಾರಣವಿದ್ದರೂ, ಅದನ್ನು ವಿದೇಶಿ ಮದ್ಯವೆಂದು ಮಾರಿದರೆ, ಅಥವಾ ಇಟ್ಟರೆ ಅಥವಾ ಮಾರಾಟಕ್ಕೆ ಪ್ರದರ್ಶಿಸಿದರೆ; ಅಥವಾ

(ಖ) ಸೀಸೆ, ಪೆಟ್ಟಿಗೆ, ಪಿಂಡಿ ಅಥವಾ ಪಾತ್ರೆಯು ವಿದೇಶಿ ಮದ್ಯವುಳ್ಳದ್ದಾಗಿದೆ ಎಂದು ನಂಬುವಂತೆ ಮಾಡುವ ಉದ್ದೇಶದಿಂದ ಭಾರತೀಯ ಮದ್ಯವುಳ್ಳ ಅಂಥ ಯಾವುದೇ ಸೀಸೆ ಅಥವಾ ಸೀಸೆಯ ಯಾವುದೇ ಮುಚ್ಚಳಕ್ಕೆ, ಪೆಟ್ಟಿಗೆಗೆ, ಪಿಂಡಿಗೆ ಅಥವಾ ಇತರ ಪಾತ್ರೆಗೆ ಗುರುತು ಹಾಕಿದರೆ, ಅಥವಾ ಭಾರತೀಯ ಮದ್ಯವಿರುವ ಅದರ ಮೇಲೆ ಅಥವಾ ಅದರ ಮುಚ್ಚಳದ ಮೇಲೆ ಗುರುತುಳ್ಳ ಯಾವುದೇ ಸೀಸೆ, ಪೆಟ್ಟಿಗೆ, ಪಿಂಡಿ ಅಥವಾ ಇತರ ಪಾತ್ರೆಯನ್ನು ಉಪಯೋಗಿಸಿದರೆ ಮತ್ತು ಅಂಥ ಕೃತ್ಯವು ಭಾರತ ದಂಡ ಸಂಹಿತೆಯ 482ನೇ ಪ್ರಕರಣದ ಮೇರೆಗೆ ಯಾವನೇ ವ್ಯಕ್ತಿಗೆ ಮೋಸ ಮಾಡುವ ಅಥವಾ ಕ್ಷತಿಗೊಳಿಸುವ ಉದ್ದೇಶದಿಂದ ಸುಳ್ಳು ವ್ಯಾಪಾರದ ಗುರುತು ಉಪಯೋಗಿಸಿದ ಅಪರಾಧವಾಗದಿದ್ದಾಗ್ಯೂ; ಅಥವಾ

(ಗ) ಸೀಸೆ, ಪೆಟ್ಟಿಗೆ, ಪಿಂಡಿ ಅಥವಾ ಇತರ ಪಾತ್ರೆಯು ವಿದೇಶೀ ಮದ್ಯವುಳ್ಳದ್ದಾಗಿದೆಯೆಂದು ನಂಬುವಂತೆ ಮಾಡುವ ಉದ್ದೇಶದಿಂದ ಅದರ ಮೇಲೆ ಅಥವಾ ಅದರ ಮುಚ್ಚಳದ ಮೇಲೆ ಗುರುತಿರುವ ಸೀಸೆ, ಪೆಟ್ಟಿಗೆ, ಪಿಂಡಿ ಅಥವಾ ಇತರ ಪಾತ್ರೆಯಲ್ಲಿ ಭಾರತೀಯ ಮದ್ಯವನ್ನು ಮಾರಿದರೆ ಅಥವಾ ಇಟ್ಟರೆ, ಅಥವಾ ಮಾರಾಟಕ್ಕೆ ಪ್ರದರ್ಶಿಸಿದರೆ, ಮತ್ತು ಅಂಥ ಕೃತ್ಯವು ಭಾರತೀಯ ದಂಡ ಸಂಹಿತೆಯ 486ನೇ ಪ್ರಕರಣದ ಮೇರೆಗೆ ಖೋಟಾ ವ್ಯಾಪಾರ ಗುರುತು ಹಾಕಿ ಸರಕುಗಳನ್ನು ಮಾರಾಟ ಮಾಡುವ ಅಪರಾಧವಾಗದಿದ್ದಾಗ್ಯೂ ಅಥವಾ ಅವನು, ಅಪರಾಧ ಸಿದ್ಧಪಟ್ಟಮೇಲೆ, ಎರಡು ವರ್ಷಗಳ ಅವಧಿಯವರೆಗಿನ ಕಾರಾವಾಸದಿಂದ ಮತ್ತು ಒಂದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ದಂಡಿತನಾಗತಕ್ಕುದು:

[ಪರಂತು, ದಂಡನೆಯು–

(i) ಮೊದಲನೆಯ ಅಪರಾಧಕ್ಕಾಗಿ, ಮೂರು ತಿಂಗಳ ಕಾರಾವಾಸಕ್ಕೆ ಮತ್ತು ಎರಡುನೂರು ರೂಪಾಯಿಯ ಜುಲ್ಮಾನೆಗೆ ಕಡಿಮೆಯಾಗಿರತಕ್ಕದ್ದಲ್ಲ; ಮತ್ತು

(ii) ಎರಡನೆಯ ಮತ್ತು ಅನಂತರದ ಅಪರಾಧಗಳಿಗಾಗಿ, ಅಂಥ ಪ್ರತಿಯೊಂದು ಅಪರಾಧಕ್ಕಾಗಿ, ಆರು ತಿಂಗಳ ಕಾರಾವಾಸಕ್ಕೆ ಮತ್ತು ಐದು ನೂರು ರೂಪಾಯಿಯ ಜುಲ್ಮಾನೆಗೆ ಕಡಿಮೆಯಾಗಿರತಕ್ಕದ್ದಲ್ಲ:]

**38. ಔಷಧಿ ವಸ್ತು ಅಂಗಡಿ ಇತ್ಯಾದಿಗಳಲ್ಲಿ ಸೇವನೆಗಾಗಿ ದಂಡ:–** (1) ಔಷದಿ ವಸ್ತು ವ್ಯಾಪಾರಿಯು, ಔಷಧಿ ಅಂಗಡಿಯವನು, ಔಷಧಿ ಸಮ್ಮಿಶ್ರಕನು, ಅಥವಾ ಔಷಧಾಲಯವನ್ನಿಟ್ಟುಕೊಂಡಿರುವವನು, ವಿಶ್ವಾಸನೀಯವಾಗಿ ಔಷಧೋದ್ದೇಶಕ್ಕಾಗಿ ಔಷಧೀಯವಾಗಿಸಿರದ ಯಾವುದೇ ಮಾದಕವನ್ನು ಯಾವೊಬ್ಬ ವ್ಯಕ್ತಿಯು ತನ್ನ ವ್ಯವಹಾರ ಆವರಣದಲ್ಲಿ ಸೇವಿಸಲು ಅವಕಾಶ ಕೊಟ್ಟರೆ, ಅವನು, ಅಪರಾಧ ಸಿದ್ಧಪಟ್ಟ ಮೇಲೆ, ಮೂರು ತಿಂಗಳ ಅವಧಿಯವರೆಗಿನ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

(2) ಅಂಥ ಆವರಣದಲ್ಲಿ ಯಾವುದೇ ಮಾದಕವನ್ನು ಸೇವಿಸುವ ಮೇಲೆ ಹೇಳಿದಂತೆ ನೌಕರಿಯಲ್ಲಿರದ ಯಾವನೇ ವ್ಯಕ್ತಿಯು, ಅಪರಾಧ ಸಿದ್ಧಪಟ್ಟ ಮೇಲೆ, ಎರಡು ನೂರು ರೂಪಾಯಿಯವರೆಗಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

[**38.ಕ ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡುವ ಉದ್ದೇಶಕ್ಕೆ ಆವರಣ ಇತ್ಯಾದಿಗಳಲ್ಲಿ ಉಪಯೋಗಿಸಲು ಅವಕಾಶ ಕೊಡುವುದಕ್ಕೆ ದಂಡ:–** ಯಾವುದೇ ಸ್ಥಳದ, ಕೊಠಡಿಯ, ಆವರಣದ, ಜಾಗದ, ನೌಕೆಯ, ವಾಹನದ ಅಥವಾ ಸ್ಥಳದ ಒಡೆಯನಾಗಿರುವ, ಅಥವಾ ಅಧಿಭೋಗದಾರನಾಗಿರುವ ಅಥವಾ ಅದರ ಉಪಯೋಗ ಅಥವಾ ರಕ್ಷಣೆ ಅಥವಾ ವ್ಯವಸ್ಥೆ ಅಥವಾ ನಿಯಂತ್ರಣ ಹೊಂದಿರುವ ಯಾವೊಬ್ಬನು ತಿಳಿದೂ ಅದನ್ನು 32, 33, 34, 36, ಮತ್ತು 37ನೇ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧ ಮಾಡಲು ಉಪಯೋಗಿಸಿಕೊಳ್ಳಲು ಅವಕಾಶ ಕೊಟ್ಟರೆ, ಅವನು, ಅಪರಾಧ ಸಿದ್ಧವಾಗಿ ಆಯಾ ಪ್ರಕರಣಗಳ ಮೇರೆಗೆ ಅಪರಾಧ ಮಾಡಿರುವನೆಂಬಂತೆಯೇ ದಂಡಿತನಾಗತಕ್ಕದ್ದು.]

**39. ಒಬ್ಬನ ಪರವಾಗಿ ಮತ್ತೊಬ್ಬನು ತಯಾರಿಸುವುದು, ಮಾರಾಟ ಮಾಡುವುದು ಅಥವಾ ಸ್ವಾಧೀನ ಹೊಂದಿರುವುದು:–**

(1) ಒಬ್ಬನು ಮತ್ತೊಬ್ಬನ ಪರವಾಗಿ ಯಾವುದೇ ಮಾದಕವನ್ನು ತಯಾರಿಸಿದ್ದರೆ, ಅಥವಾ ಮಾರಾಟ ಮಾಡಿದ್ದರೆ ಅಥವಾ ಸ್ವಾಧೀನ ಹೊಂದಿದ್ದರೆ, ಮತ್ತು ಅಂಥ ತಯಾರಿಕೆಯು ಅಥವಾ ಮಾರಾಟದ ಅಥವಾ ಸ್ವಾಧೀನದಲ್ಲಿರಿಸುವಿಕೆಗಳು ತನ್ನ ಪರವಾಗಿ ನಡೆಯಿತು ಎಂದು ಅಂಥ ಬೇರೊಬ್ಬ ವ್ಯಕ್ತಿಗೆ ತಿಳಿದಿದ್ದರೆ ಅಥವಾ ನಂಬಲು ಕಾರಣವಿದ್ದರೆ, ಆ ವಸ್ತುವು, ಈ ಅಧಿನಿಯಮದ ಉದ್ದೇಶಗಳಿಗಾಗಿ ಅಂಥ ಬೇರೊಬ್ಬ ವ್ಯಕ್ತಿಯಿಂದ ತಯಾರಿಸಲಾಯಿತು, ಮಾರಾಟ ಮಾಡಲಾಯಿತು ಅಥವಾ ಅವನ ಸ್ವಾಧೀನದಲ್ಲಿಟ್ಟುಕೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿರುವುದು ಯಾವುದೂ, ಮತ್ತೊಬ್ಬನ ಪರವಾಗಿ ಯಾವುದೇ ಮಾದಕವನ್ನು ತಯಾರಿಸುವ, ಮಾರಾಟ ಮಾಡುವ ಅಥವಾ ಸ್ವಾಧೀನದಲ್ಲಿಟ್ಟುಕೊಳ್ಳುವ ವ್ಯಕ್ತಿಯನ್ನು, ಅಂಥ ವಸ್ತುವಿನ ವಿಧಿವಿರುದ್ಧವಾದ ತಯಾರಿಕೆ, ಮಾರಾಟ ಅಥವಾ ಸ್ವಾಧೀನದ ಬಗ್ಗೆ ಈ ಅಧಿನಿಯಮದ ಮೇರೆಗಿನ ಯಾವುದೇ ದಂಡನೆಯ ಹೊಣೆಯಿಂದ ಮುಕ್ತಗೊಳಿಸತಕ್ಕದ್ದಲ್ಲ.

**40. ಕೆಲವು ಸಂದರ್ಭಗಳಲ್ಲಿ ಅಪರಾಧ ನಡೆದಿದೆಯೆಂಬ ಬಗ್ಗೆ ಪೂರ್ವ ಭಾವನೆ:–** 32 ಮತ್ತು 34ನೇ ಪ್ರಕರಣಗಳ ಮೇರೆಗಿನ ಪ್ರಾಸಿಕ್ಯೂಷನ್ನುಗಳಲ್ಲಿ, ತದ್ವಿರುದ್ಧ ರುಜುವಾತಾದ ಹೊರತು, ಆಪಾದಿತನು–

(ಕ) ಯಾವುದೇ ಮಾದಕ; ಅಥವಾ

(ಖ) ಹೆಂಡವಲ್ಲದ ಯಾವುದೇ ಇತರ ತಯಾರಿಕೆಯಲ್ಲಿಯ ಯಾವುದೇ ಭಟ್ಟಿ ಯಂತ್ರ, ಪಾತ್ರೆ, ಉಪಕರಣ ಅಥವಾ ಯಾವುದೇ ಬಗೆಯ ಸಲಕರಣೆ ಬಗ್ಗೆ ; ಅಥವಾ

(ಗ) ಮಾದಕದ ತಯಾರಿಕೆಯ ಕ್ರಮಗಳಿಗೆ ಒಳಪಟ್ಟಿರುವ ಅಥವಾ ಅವುಗಳಿಂದ ಮಾದಕವನ್ನು ತಯಾರಿಸಿರುವ ಯಾವುದೇ ಪದಾರ್ಥಗಳು

ಇವುಗಳ ಸ್ವಾಧೀನ ಹೊಂದಿರುವ ಬಗ್ಗೆ ಅವನು ಸಮಾಧಾನಕರ ಕಾರಣಕೊಡಲು ಅಸಮರ್ಥನಾಗಿರುವುದರಿಂದ ಆ ಪ್ರಕರಣದ ಮೇರೆಗಿನ ಅಪರಾಧ ಮಾಡಿದ್ದಾನೆಂದು ಪೂರ್ವ ಭಾವನೆ ಮಾಡತಕ್ಕದ್ದು.

**41. ನೌಕರರ ಕೃತ್ಯಗಳಿಗಾಗಿ ಲೈಸೆನ್ಸುದಾರನ ಕ್ರಿಮಿನಲ್ ಹೊಣೆಗಾರಿಕೆ:–** ಈ ಅಧಿನಿಯಮದ ಮೇರೆಗೆ ಕೊಡಲಾದ, ಲೈಸೆನ್ಸು ಅಥವಾ ಅನುಮತಿ ಪತ್ರವನ್ನು ಪಡೆದವನ ನೌಕರಿಯಲ್ಲಿರುವವನಿಂದ ಲೈಸೆನ್ಸು ಅಥವಾ ಅನುಮತಿ ಪತ್ರ ಪಡೆದವನ ಪರವಾಗಿ ಕೆಲಸ ಮಾಡುವನಿಂದ ಪ್ರಕರಣ 32, ಪ್ರಕರಣ 33, 34, 36 ಅಥವಾ 37ನೇ ಪ್ರಕರಣಗಳ ಯಾವುದಾದರೂ ಮೇರೆಗೆ ಯಾವುದಾದರೂ ಅಪರಾಧವು ನಡೆದಿರುವಲ್ಲಿ ಹಾಗೆ ಪಡೆದಿರುವಷ್ಟು, ಅಂಥ ಅಪರಾಧವು ನಡೆಯುವುದನ್ನು ತಡೆಯಲು ಎಲ್ಲ ಯೋಗ್ಯ ಮತ್ತು ಯುಕ್ತ ಮುಂಜಾಗ್ರತೆಯನ್ನು ವಹಿಸಲಾಯಿತೆಂಬುದನ್ನು ರುಜುವಾತು ಮಾಡಿದ ಹೊರತು, ಅವನೇ ಅಂಥ ಅಪರಾಧ ಮಾಡಿದನೆಂಬಂತೆ, ದಂಡನೀಯನಾಗತಕ್ಕದ್ದು;

ಪರಂತು, ಈ ಪ್ರಕರಣದ ಮೇರೆಗೆ ವಾಸ್ತವಿಕ ಅಪರಾಧಿಯಲ್ಲದ ಇತರ ಯಾವ ವ್ಯಕ್ತಿಯೂ ಜುಲ್ಮಾನೆ ಕೊಡಲು ತಪ್ಪಿದಾಗಲ್ಲದೆ, ಕಾರಾವಾಸದ ಶಿಕ್ಷೆಯಿಂದ ದಂಡನೀಯವಾಗತಕ್ಕದ್ದಲ್ಲ.

**42. ಹಿಂದೆ ಸಿದ್ಧಾಪರಾಧಿಯಾಗಿದ್ದರೆ ಹೆಚ್ಚಿನ ದಂಡನೆ:–** ಯಾವೊಬ್ಬ ವ್ಯಕ್ತಿಯು 38ನೇ ಪ್ರಕರಣದ ಮೇರೆಗೆ ಅಥವಾ ಈ ಅಧಿನಿಯಮದಿಂದ ನಿರಸಿತವಾದ ಯಾವುದೇ ಅಧಿನಿಯಮದ ಸಂವಾದೀ ಉಪಬಂಧಗಳ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಬಗ್ಗೆ ಹಿಂದೆ ಸಿದ್ಧಾಪರಾಧಿಯಾಗಿದ್ದು ಸದರಿ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ತರುವಾಯದಲ್ಲಿ ಮಾಡಿ ಸಿದ್ಧಾಪರಾಧಿಯಾದರೆ, ಅವನು ಈ ಅಧಿನಿಯಮದ ಮೇರೆಗೆ ಮೊದಲನೆಯ ಸಲ ಸಿದ್ಧಾಪರಾಧಿಯಾದಾಗ ವಿಧಿಸಬಹುದಾಗಿದ್ದ ದಂಡನೆಯ ಎರಡರಷ್ಟು ದಂಡನೆಗೆ ಗುರಿಯಾಗತಕ್ಕದ್ದು;

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ದಂಡ ಪ್ರಕ್ರಿಯಾ ಸಂಹಿತೆಯ 22ನೇ ಅಧ್ಯಾಯದ ಮೇರೆಗೆ ಸಂಕ್ಷಿಪ್ತ ರೀತಿಯಲ್ಲಿ ಅನ್ಯಥಾ ವಿಚಾರಿಸಬಹುದಾಗಿದ್ದ ಯಾವುದೇ ಅಪರಾಧದ ಅಂಥ ವಿಚಾರಣೆಯನ್ನು ಪ್ರತಿಬಂಧಿಸತಕ್ಕದ್ದಲ್ಲ.

**42ಕ. ಕೆಲವು ಅಪರಾಧಗಳನ್ನು ಮಾಡಿರುವ ಬಗ್ಗೆ ಜಾಮೀನು:–** (1) ಯಾವೊಬ್ಬ ವ್ಯಕ್ತಿಯು 32, 33, 34, 36 ಅಥವಾ 37ನೇ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧದ ಬಗ್ಗೆ ಸಿದ್ಧಾಪರಾಧಿಯಾಗಿದ್ದರೆ, ಮತ್ತು ಅವನನ್ನು ಸಿದ್ಧಾಪರಾಧಿಯೆಂದು ತೀರ್ಮಾನಿಸುವ ನ್ಯಾಯಾಲಯವು ಅಂಥ ಅಪರಾಧ ಮಾಡದಿರುವ ಬಗ್ಗೆ ಆ ವ್ಯಕ್ತಿಯ ಒಂದು ಮುಚ್ಚಳಿಕೆಯನ್ನು ಬರೆದುಕೊಡುವಂತೆ ಅಗತ್ಯಪಡಿಸುವುದು ಅವಶ್ಯವೆಂದು ಅಭಿಪ್ರಾಯಪಟ್ಟಲ್ಲಿ, ಆ ನ್ಯಾಯಾಲಯವು ಆ ವ್ಯಕ್ತಿಗೆ ದಂಡಾದೇಶವನ್ನು ವಿಧಿಸುವಾಗ, ತಾನು ನಿಗದಿ ಮಾಡುವುದು ಯೋಗ್ಯವೆಂದು ತಿಳಿಯುವಂಥ, ಮೂರು ವರ್ಷಗಳಿಗೆ ಹೆಚ್ಚಾಗದ ಅವಧಿಯಲ್ಲಿ, ಅವನು ಅಂಥ ಅಪರಾಧಗಳನ್ನು ಮಾಡುವುದಿಲ್ಲವೆಂದು ಅವನ ಆದಾಯಕ್ಕೆ ಸರಿದೂಗುವ ಮೊಬಲಗಿಗೆ ಜಾಮೀನು ಸಹಿತವಾಗಿ ಅಥವಾ ರಹಿತವಾಗಿ, ನಿಯಮಿಸಿದ ನಮೂನೆಯಲ್ಲಿ ಒಂದು ಮುಚ್ಚಳಿಕೆಯನ್ನು ಬರೆದುಕೊಡಲು ಆದೇಶಿಸಬಹುದು.

(2) ದಂಡ ಪ್ರಕ್ರಿಯಾ ಸಂಹಿತೆಯ, 1898ರ ಉಪಬಂಧಗಳು, ಅವು ಅನ್ವಯಿಸುವ ಮಟ್ಟಿಗೆ ಸದರಿ ಸಂಹಿತೆಯ 106ನೇ ಪ್ರಕರಣದ ಮೇರೆಗೆ ಬರೆದುಕೊಂಡು ಆದೇಶಿಸಿದ ಶಾಂತಿ ಪಾಲನೆಯ ಮುಚ್ಚಳಿಕೆಯೆಂಬಂತೆ ಈ ಮುಚ್ಚಳಿಕೆಗೆ ಸಂಬಂಧಿಸಿದ ಎಲ್ಲ ವಿಷಯಗಳಿಗೆ, ಅನ್ವಯಿಸತಕ್ಕದ್ದು.

(3) ಅಪೀಲಿನಲ್ಲಿ ಅಥವಾ ಅನ್ಯಥಾ ಅಪರಾಧ ಸಿದ್ಧಿಯು ತಳ್ಳಿಹಾಕಲ್ಪಟ್ಟರೆ, ಹಾಗೆ ಬರೆದುಕೊಟ್ಟ ಮುಚ್ಚಳಿಕೆಯು ಶೂನ್ಯವಾಗತಕ್ಕದ್ದು.

(4) ಈ ಅಪೀಲು ನ್ಯಾಯಾಲಯವು ಅಥವಾ ಉಚ್ಚ ನ್ಯಾಯಾಲಯವು ಕೂಡ ಅಪೀಲು ಅಥವಾ ಪುನರೀಕ್ಷಣೆಯ ಶಕ್ತಿಗಳನ್ನು ಚಲಾಯಿಸುವಾಗ ಈ ಪ್ರಕರಣದ ಮೇರೆಗಿನ ಆದೇಶವನ್ನು ಮಾಡಬಹುದು.

**43. ಕೆಲವು ವಸ್ತುಗಳು ಮುಟ್ಟುಗೋಲಿಗೆ ಗುರಿಯಾಗಿರುವುದು:–** ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧ ಮಾಡಿರುವಾಗ, ಈ ಕೆಳಕಂಡ ವಸ್ತುಗಳು ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು, ಎಂದರೆ.–

(1) ಯಾವುದರ ಸಂಬಂಧದಲ್ಲಿ ಅಥವಾ ಮೂಲಕ ಅಂಥ ಅಪರಾಧ ಮಾಡಲಾಯಿತೋ ಅಂಥ ಯಾವುದೇ ಮಾದಕ, ಪದಾರ್ಥ, ಬಟ್ಟಿಯಂತ್ರ, ಪಾತ್ರೆ, ಉಪಕರಣ ಅಥವಾ ಸಲಕರಣೆ;

(2) (1)ನೆಯ ಖಂಡದ ಮೇರೆಗೆ ಜಪ್ತಿಗೆ ಗುರಿಯಾಗುವ ಯಾವುದೇ ಮಾದಕದೊಂದಿಗೆ ಅಥವಾ ಅದರ ಜೊತೆಗೆ ವಿಧಿಬದ್ಧವಾಗಿ ಆಮದು ಮಾಡಿದ, ಸಾಗಿಸಿದ, ತಯಾರಿಸಿದ, ಸ್ವಾಧೀನದಲ್ಲಿಟ್ಟುಕೊಂಡ ಅಥವಾ ಮಾರಾಟ ಮಾಡಿದ, ಯಾವುದೇ ಮಾದಕ; ಮತ್ತು

(3) (1)ನೇ ಖಂಡದ ಅಥವಾ (2)ನೇ ಖಂಡದ ಮೇರೆಗೆ ಮುಟ್ಟುಗೋಲಿಗೆ ಗುರಿಯಾಗುವ ಯಾವುದೇ ಪದಾರ್ಥವು, ಯಾವುದೇ ಪಾತ್ರೆ, ಪಿಂಡಿ ಅಥವಾ ಹೊದಿಕೆಯು ದೊರೆತರೆ, ಅವುಗಳನ್ನು ಮತ್ತು ಅಂಥ ಪಾತ್ರೆ, ಪಿಂಡಿ ಅಥವಾ ಹೊದಿಕೆಯಲ್ಲಿ ಇರುವ ಇತರ ವಸ್ತುಗಳು, ಯಾವುದಾದರೂ ಇದ್ದರೆ, ಅವುಗಳು ಮತ್ತು ಅವುಗಳನ್ನು ಸಾಗಿಸಲು ಉಪಯೋಗಿಸಿದ ಯಾವುದೇ ಪ್ರಾಣಿ, ವಾಹನ, ನೌಕೆ, ದೋಣಿ ಅಥವಾ ಇತರ ವಾಹನ:

ಪರಂತು, (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವುದು ಯಾವುದೂ ಅಪರಾಧಿಯ ಸ್ವತ್ತಾಗಿರದಿದ್ದರೆ, ಮತ್ತು ಅಂಥ ಅಪರಾಧವು ನಡೆಯುತ್ತಿದೆಯೆಂದು ಅಥವಾ ನಡೆಯುವ ಸಂಭವವಿದೆಯೆಂದು ನಂಬಲು ಅದರ ಒಡೆಯನಿಗೆ ಕಾರಣವಿರದಿದ್ದರೆ, ಅದನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದಲ್ಲ.

**44. ಮುಟ್ಟುಗೋಲಿನ ಆದೇಶ:–** (1) ತನ್ನಿಂದ ವಿಚಾರಣೆ ನಡೆದ ಯಾವುದೇ ಮೊಕದ್ದಮೆಯಲ್ಲಿ, ಯಾವುದೇ ಪದಾರ್ಥವು 43ನೇ ಪ್ರಕರಣದ ಮೇರೆಗೆ ಮುಟ್ಟುಗೋಲಿಗೆ ಗುರಿಯಾಗತಕ್ಕದ್ದೆಂದು ಮ್ಯಾಜಿಸ್ಟ್ರೇಟನು ತೀರ್ಮಾನಿಸಿದರೆ, ಅವನು, ಸದರಿ ಪ್ರಕರಣದ ಪರಂತುಕದಲ್ಲಿ ಉಪಬಂಧಿಸಿರುವುದನ್ನುಳಿದು ಅದರ ಮುಟ್ಟುಗೋಲಿಗೆ ಆದೇಶ ಮಾಡಬಹುದು.

(2) ಈ ಅಧಿನಿಯಮದ ಮೇರೆಗಿನ ಅಪರಾಧವು ನಡೆದಿರುವಾಗ, ಆದರೆ ಅಪರಾಧಿ ಯಾರೆಂಬುದು ತಿಳಿಯದಿದ್ದಲ್ಲಿ ಅಥವಾ ಅವನು ಸಿಕ್ಕದಿದ್ದಲ್ಲಿ, ಅಥವಾ ಈ ಅಧಿನಿಯಮದ ಮೇರೆಗೆ ಮುಟ್ಟುಗೋಲಿಗೆ ಗುರಿಯಾಗುವ ಯಾವುದೇ ಪದಾರ್ಥವು ಯಾವ ವ್ಯಕ್ತಿಯ ಸ್ವಾಧೀನದಲ್ಲಿಯೂ ಇಲ್ಲದಿರುವಾಗ ಮತ್ತು ಅದರ ಬಗ್ಗೆ ಸಮಾಧಾನಕರವಾದ ವಿವರವು ದೊರೆಯದಿರುವಾಗ, ಆ ಮೊಕದ್ದಮೆಯನ್ನು ಅಬ್ಕಾರಿ ಕಮಿಷನರು ಅಥವಾ ಆ ಬಗ್ಗೆ ರಾಜ್ಯ ಸರಕಾರದಿಂದ ಅಧಿಕೃತನಾದ ಯಾವನೇ ಇತರ ಅಧಿಕಾರಿಯು, ಅದರ ವಿಚಾರಣೆ ಮಾಡತಕ್ಕದ್ದು ಮತ್ತು ನಿರ್ಧರಿಸತಕ್ಕದ್ದು, ಮತ್ತು ಅವನು ಅಂಥ ಮುಟ್ಟುಗೋಲಿನ ಆದೇಶ ಮಾಡಬಹುದು:

ಪರಂತು, ಮುಟ್ಟುಗೋಲು ಮಾಡಲು ಉದ್ದೇಶಿಸಿದ ಸರಕುಗಳನ್ನು ಅಧಿಗ್ರಹಣ ಮಾಡಿದ ದಿನಾಂಕದಿಂದ ಒಂದು ತಿಂಗಳು ಮುಗಿಯುವವರೆಗೆ ಅಥವಾ ಅದರ ಬಗ್ಗೆ ಯಾವುದೇ ಕ್ಲೇಮು ಮಾಡುವ ವ್ಯಕ್ತಿಗಳು, ಯಾರಾದರೂ ಇದ್ದರೆ, ಅವರನ್ನು ಮತ್ತು ಅವರು ತಮ್ಮ ಕ್ಲೇಮಿನ ಸಮರ್ಥನೆಯಲ್ಲಿ ಹಾಜರು ಪಡಿಸುವ ಸಾಕ್ಷ್ಯವೇನಾದರೂ ಇದ್ದರೆ, ಅದನ್ನು ವಿಚಾರಣೆ ಮಾಡದೆ, ಅಂಥ ಯಾವ ಆದೇಶವನ್ನು ಮಾಡತಕ್ಕದ್ದಲ್ಲ:

ಮತ್ತೂ ಪರಂತು, ವಿವಾದದಲ್ಲಿರುವ ವಸ್ತುವು ಶೀಘ್ರವಾಗಿ ಮತ್ತು ಸ್ವಾಭಾವಿಕವಾಗಿ ನಶಿಸುವುದಾಗಿದ್ದರೆ, ಅಥವಾ ಅದರ ಮಾರಾಟವು ಒಡೆಯನಿಗೆ ಹಿತಕಾರಿಯಾಗಿದೆಯೆಂದು ಅಬ್ಕಾರಿ ಕಮಿಶನರು ಅಥವಾ ಅಧಿಕೃತ

ಅಧಿಕಾರಿಯು ಅಭಿಪ್ರಾಯ ಪಡುವುದಾದರೆ, ಅವನು, ಯಾವುದೇ ಕಾಲದಲ್ಲಿ ಅದನ್ನು ಮಾರಾಟ ಮಾಡಲು ನಿರ್ದೇಶಿಸಬಹುದು ಮತ್ತು ಈ ಪ್ರಕರಣದ ಉಪಬಂಧಗಳು, ಸಾಧ್ಯವಾಗುವಷ್ಟರ ಮಟ್ಟಿಗೆ, ಅಂಥ ಮಾರಾಟದ ನಿವ್ವಳ ಉತ್ಪತ್ತಿಗೆ ಅನ್ವಯಿಸತಕ್ಕದ್ದು.

**45. ಪರಿಹಾರ ತೆತ್ತು ಅಪರಾಧಗಳ ಶಮನ:–** (1) ಅಬ್ಕಾರಿ ಕಮಿಷನರು, ಡೆಪ್ಯುಟಿ ಕಮಿಷನರು, ಅಥವಾ ಈ ಬಗ್ಗೆ ವಿಶೇಷವಾಗಿ ಅಧಿಕೃತನಾದ ಯಾವನೇ ಅಬ್ಕಾರಿ ಅಧಿಕಾರಿಯು, 29ನೇ ಪ್ರಕರಣದ (1)ನೇ ಉಪಪ್ರಕರಣದ (ಕ) ಖಂಡದ ಅಥವಾ (ಖ) ಖಂಡದ ಮೇರೆಗೆ ಯಾವನ ಲೈಸೆನ್ಸು ಅಥವಾ ಅನುಮತಿ ಪತ್ರವು ರದ್ದಿಯಾತಿಗೆ ಅಥವಾ ನಿಲಂಬನೆಗೆ ಗುರಿಯಾಗಬಹುದಾಗಿದ್ದಿತೋ ಅವನಿಂದ, ಯಾವನು ಅಥವಾ 32ನೇ ಪ್ರಕರಣದ (2)ನೇ ಉಪಪ್ರಕರಣದ 33ನೇ, 34ನೇ 35ನೇ, 36ನೇ ಪ್ರಕರಣಗಳ ಅಥವಾ 37ನೇ ಪ್ರಕರಣದ (2)ನೆಯ ಒಳಪ್ರಕರಣದ ಮೇರೆಗೆ ಅಪರಾಧ ಮಾಡಿದ್ದಾನೆಂದು ಯುಕ್ತವಾಗಿ ಶಂಕಿತನಾಗಿದ್ದಾನೋ ಅದರಿಂದ ಸಂದರ್ಭಾನುಸಾರ, ಅಂಥ ರದ್ದಿಯಾತಿಯ ಅಥವಾ ನಿಲಂಬನೆಯ ಬದಲಾಗಿ ಅಥವಾ ಮಾಡಿರಬಹುದಾದ ಅಪರಾಧದ ಪರಿಹಾರ ರೂಪವಾಗಿ, ಒಂದು ಸಾವಿರ ರೂಪಾಯಿಗಳಿಗೆ ಮೀರದ ಮತ್ತು ನಿಯಮಿಸಬಹುದಾದ ಕನಿಷ್ಠ ಮಿತಿಗೆ ಒಳಪಟ್ಟು, ಒಂದು ಮೊತ್ತವನ್ನು ಸ್ವೀಕರಿಸಬಹುದು, ಮತ್ತು ಈ ಅಧಿನಿಯಮದ ಮೇರೆಗೆ ಮುಟ್ಟುಗೋಲಿಗೆ ಗುರಿಯಾದ ಯಾವುದೇ ಸ್ವತ್ತನ್ನು ಅಧಿಗ್ರಹಣ ಮಾಡಿದ ಎಲ್ಲ ಸಂದರ್ಭಗಳಲ್ಲೂ, ಅಂಥ ಅಧಿಕಾರಿಯು ಅಂದಾಜು ಮಾಡುವಂಥ ಅದರ ಮೌಲ್ಯವನ್ನು ಸಂದಾಯ ಮಾಡಿದರೆ, ಅದನ್ನು ಬಿಟ್ಟುಕೊಡಬಹುದು.

(2) ಅಂಥ ವ್ಯಕ್ತಿಯು, ಸಂದರ್ಭಾನುಸಾರ, ಅಂಥ ಮೊತ್ತವನ್ನು ಅಥವಾ ಅಂಥ ಮೌಲ್ಯವನ್ನು ಅಥವಾ ಎರಡನ್ನೂ ಸಂದಾಯ ಮಾಡಿದಲ್ಲಿ, ಅಂಥ ವ್ಯಕ್ತಿಯು ಅಭಿರಕ್ಷೆಯಲ್ಲಿದ್ದರೆ, ಅವನನ್ನು ಬಿಡುಗಡೆ ಮಾಡತಕ್ಕದ್ದು ಮತ್ತು ಅಧಿಗ್ರಹಣ ಮಾಡಿದ ಎಲ್ಲ ಸ್ವತ್ತನ್ನು ಬಿಡುಗಡೆ ಮಾಡಬಹುದು ಮತ್ತು ಅಂಥ ವ್ಯಕ್ತಿಯ ವಿರುದ್ಧ ಯಾವ ಕ್ರಿಮಿನಲ್ ನ್ಯಾಯಾಲಯದಲ್ಲಿಯೂ ವ್ಯವಹರಣೆಯನ್ನು ಹೂಡತಕ್ಕದ್ದಲ್ಲ. ಪರಿಹಾರದ ಸ್ವೀಕಾರವನ್ನು ದೋಷ ವಿಮೋಚನೆಯೆಂದು ಭಾವಿಸತಕ್ಕದ್ದು ಮತ್ತು ಯಾವ ಸಂದರ್ಭದಲ್ಲಿಯೂ ಅದೇ ಕೃತ್ಯದ ಬಗ್ಗೆ ಅಂಥ ವ್ಯಕ್ತಿಯ ಅಥವಾ ಸ್ವತ್ತಿನ ವಿರುದ್ಧ ಮುಂದಿನ ಯಾವ ವ್ಯವಹರಣೆಗಳನ್ನೂ ಜರುಗಿಸತಕ್ಕದ್ದಲ್ಲ.

**45. ಕ ಅಬ್ಕಾರಿ ಅಧಿಕಾರಿಗಳು ದಂಡ ವಿಧಿಸುವುದು:–** (1) ಈ ಅಧಿನಿಯಮದ ಮೇರೆಗೆ ಕೊಡಲಾದ ಲೈಸೆನ್ಸು ಅಥವಾ ಅನುಮತಿ ಪತ್ರವನ್ನು ಪಡೆದಿರುವವನು ಅಥವಾ ಅವನ ನೌಕರನು ಲೈಸೆನ್ಸಿನ ಅಥವಾ ಅನುಮತಿ ಪತ್ರದ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ನಿಯಮದ ಷರತ್ತುಗಳನ್ನು ಉಲ್ಲಂಘಿಸಿದರೆ, ಡೆಪ್ಯುಟಿ ಕಮಿಷನರು, ಅಥವಾ ಈ ಸಂಬಂಧದಲ್ಲಿ ರಾಜ್ಯ ಸರಕಾರದಿಂದ ಅಧಿಕೃತನಾದ ಯಾವನೇ ಇತರ ಅಬ್ಕಾರಿ ಅಧಿಕಾರಿಯು, ಒಂದು ಸಾವಿರ ರೂಪಾಯಿಗಳಿಗೆ ಮೀರದ ದಂಡವನ್ನು ವಿಧಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಯಾವನೇ ವ್ಯಕ್ತಿಗೆ ದಂಡ ವಿಧಿಸುವ ಯಾವ ಆದೇಶವನ್ನೂ, ಸಂಬಂಧಪಟ್ಟ ಲೈಸೆನ್ಸು ಅಥವಾ ಅನುಮತಿ ಪತ್ರ ಪಡೆದಿರುವ ಅಥವಾ ಅವನ ನೌಕರನಿಗೆ.–

(ಕ) ಯಾವ ಕಾರಣಗಳ ಮೇಲೆ ದಂಡವನ್ನು ವಿಧಿಸಲು ಉದ್ದೇಶಿಸಲಾಗಿದೆಯೋ ಅವುಗಳನ್ನು ಅವನಿಗೆ ತಿಳಿಸುವ ಲಿಖಿತ ನೋಟೀಸು ಕೊಟ್ಟ ಹೊರತು;

(ಖ) ಅದರಲ್ಲಿ ಹೇಳಿದ ದಂಡ ವಿಧಿಸುವಿಕೆಯ ಕಾರಣಗಳ ವಿರುದ್ಧ, ನೋಟೀಸಿನಲ್ಲಿ ಉಲ್ಲೇಖಿಸಬಹುದಾದಂಥ ಯುಕ್ತ ಸಮಯದೊಳಗಾಗಿ, ನಿವೇದನೆ ಮಾಡಿಕೊಳ್ಳುವ ಅವಕಾಶ ಕೊಟ್ಟ ಹೊರತು; ಮತ್ತು

(ಗ) ಆ ವಿಷಯದ ಬಗ್ಗೆ ಹೇಳಿಕೊಳ್ಳಲು ಯುಕ್ತ ಅವಕಾಶ ಕೊಟ್ಟ ಹೊರತು;

ಕೊಡತಕ್ಕದ್ದಲ್ಲ.

(3) (1)ನೇ ಉಪಪ್ರಕರಣದ ಮೇರೆಗೆ ದಂಡ ವಿಧಿಸಲ್ಪಟ್ಟ ಯಾವ ವ್ಯಕ್ತಿಯೂ, ಈ ಅಧಿನಿಯಮದ ಯಾವುದೇ ಅಪರಾಧದ ಬಗ್ಗೆ ಅದೇ ಸಂಗತಿಗಳ ಸಂಬಂಧದಲ್ಲಿ ಪ್ರಾಸಿಕ್ಯೂಷನಿಗೆ ಗುರಿಯಾಗತಕ್ಕದ್ದಲ್ಲ.]

**46. ಉಪದ್ರವಕಾರಿ, ಶೋಧನೆ, ಅಧಿಗ್ರಹಣ, ತಡೆಹಿಡಿದಿರುಸುವಿಕೆ ಅಥವಾ ದಸ್ತಗಿರಿ ಮಾಡುವ ಅಬ್ಕಾರಿ ಅಧಿಕಾರಿಗೆ ದಂಡ:–** ಉಪದ್ರವಕಾರಿಯಾಗಿ ಮತ್ತು ಶಂಕಿಸಲು ಯುಕ್ತ ಕಾರಣವಿಲ್ಲದೆ, ಯಾವನೇ ಅಬ್ಕಾರಿ ಅಧಿಕಾರಿಯು ಅಥವಾ ಇತರ ವ್ಯಕ್ತಿಯು,

(ಕ) ಈ ಅಧಿನಿಯಮದಿಂದ ಪ್ರದತ್ತವಾದ ಶಕ್ತಿಯನ್ನು ಚಲಾಯಿಸುವ ನೆಪದಿಂದ ಯಾವುದೇ ಆವೃತ ಸ್ಥಳವನ್ನು ಪ್ರವೇಶಿಸಿದರೆ ಅಥವಾ ಶೋಧಿಸಿದರೆ ಅಥವಾ ಪ್ರವೇಶಿಸುವಂತೆ ಅಥವಾ ಶೋಧಿಸುವಂತೆ ಮಾಡಿದರೆ; ಅಥವಾ

(ಖ) ಈ ಅಧಿನಿಯಮದ ಮೇರೆಗೆ ಮುಟ್ಟುಗೋಲಿಗೆ ಗುರಿಯಾಗುವ ಯಾವುದೇ ವಸ್ತುವನ್ನು ವಶಪಡಿಸಿಕೊಳ್ಳುವ ಅಥವಾ ಶೋಧಿಸುವ ನೆಪದಿಂದ ಯಾವೊಬ್ಬ ವ್ಯಕ್ತಿಯ ಚರಸ್ವತ್ತನ್ನು ಅಧಿಗ್ರಹಣ ಮಾಡಿದರೆ; ಅಥವಾ

(ಗ) ಯಾವೊಬ್ಬ ವ್ಯಕ್ತಿಯನ್ನು ಶೋಧಿಸಿದರೆ, ತಡೆಹಿಡಿದಿರಿಸಿದರೆ ಅಥವಾ ದಸ್ತಗಿರಿ ಮಾಡಿದರೆ; ಅಥವಾ

(ಘ) ಇನ್ನಾವುದೇ ರೀತಿಯಲ್ಲಿ ಈ ಅಧಿನಿಯಮದ ಮೇರೆಗಿನ ತನ್ನ ವಿಧಿಬದ್ಧ ಶಕ್ತಿಗಳನ್ನು ಮೀರಿ ವರ್ತಿಸಿದರೆ,

ಅಪರಾಧ ಸಿದ್ಧಪಟ್ಟ ಮೇಲೆ ಆರು ತಿಂಗಳ ಅವಧಿಯವರೆಗಿನ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

**47. ಕರ್ತವ್ಯ ಮಾಡಲು ನಿರಾಕರಿಸುವ ಅಬ್ಕಾರಿ ಅಧಿಕಾರಿಗೆ ದಂಡ:–** ಅಬ್ಕಾರಿ ಕಮಿಶನರನು ಸ್ಪಷ್ಟವಾಗಿ ಲಿಖಿತದಲ್ಲಿ ಅನುಮತಿಸಿದ್ದ ಹೊರತು, ಅಥವಾ ಅವನು ತನ್ನ ಮೇಲಾಧಿಕಾರಿಗೆ ತನ್ನ ಉದ್ದೇಶದ ಬಗ್ಗೆ ಎರಡು ತಿಂಗಳ ಲೇಖೀ ಲಿಖಿತ ನೋಟೀಸನ್ನು ಕೊಟ್ಟಿದ್ದ ಹೊರತು, ವಿಧಿಬದ್ಧ ಕಾರಣವಿಲ್ಲದೆ ತನ್ನ ಪದದ ಕರ್ತವ್ಯ ಮಾಡುವುದನ್ನು ನಿಲ್ಲಿಸುವ ಅಥವಾ ನಿರ್ವಹಿಸಲು ನಿರಾಕರಿಸುವ ಅಥವಾ ಅದರಿಂದ ಹಿಂತೆಗೆಯುವ ಅಥವಾ ಹೇಡಿತನದ ದೋಷಿಯಾಗುವ ಅಬ್ಕಾರಿ ಅಧಿಕಾರಿಯು, ಅಪರಾಧ ಸಿದ್ಧಪಟ್ಟ ಮೇಲೆ ಮೂರು ತಿಂಗಳ ಅವಧಿಯವರೆಗಿನ ಕಾರಾವಾಸದಿಂದ, ಅಥವಾ ಐದು ನೂರು ರೂಪಾಯಿಯವರೆಗಿನ ಜುಲ್ಮಾನೆಯಿಂದ ಅಥವಾ ಎರಡರಿಂದಲೂ, ದಂಡಿತನಾಗತಕ್ಕದ್ದು.

**48. ಉಪದ್ರವಕಾರಿ ನಿಲಂಬಕ್ಕೆ ದಂಡ:–** ದಸ್ತಗಿರಿ ಮಾಡಲಾದ ಯಾವನೇ ವ್ಯಕ್ತಿಯನ್ನು 59ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಅಗತ್ಯಪಡಿಸಿದಂತೆ ಅತಿಸಮೀಪದ ಅಬ್ಕಾರಿ ಅಧಿಕಾರಿಯ ಬಳಿಗೆ ಅಥವಾ ಅತಿ ಸಮೀಪದ ಪೊಲೀಸ್ ಠಾಣೆಯ ಆಡಳಿತವನ್ನು ಹೊಂದಿರುವ ಅಧಿಕಾರಿಯ ಬಳಿಗೆ ಕಳಿಸಿ ಕೊಡುವಲ್ಲಿ ಉಪದ್ರವಕಾರಿಯಾಗಿ ಮತ್ತು ಅನಾವಶ್ಯಕವಾಗಿ ವಿಲಂಬ ಮಾಡುವ ಮತ್ತು ಈ ಅಧಿನಿಯಮದ ಮೇರೆಗೆ ಶಕ್ತಿಗಳನ್ನು ಚಲಾಯಿಸುವ ಯಾವನೇ ಅಧಿಕಾರಿಯು ಅಥವಾ ವ್ಯಕ್ತಿಯು, ಅಪರಾಧ ಸಿದ್ಧಪಟ್ಟ ಮೇಲೆ ಎರಡು ನೂರು ರೂಪಾಯಿಗಳ ವರೆಗಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**49. ತಪ್ಪಿಸಿಕೊಂಡು ಹೋಗುವಂತೆ ದುಷ್ಪ್ರೇರಣೆ ಇತ್ಯಾದಿಗಳನ್ನು ಮಾಡುವುದಕ್ಕೆ ದಂಡ:–** ಈ ಅಧಿನಿಯಮದ ಮೇರೆಗೆ ದಸ್ತಗಿರಿಯಾದ ಯಾವನೇ ವ್ಯಕ್ತಿಯನ್ನು ವಿಧಿವಿರುದ್ಧವಾಗಿ ಬಿಡುಗಡೆ ಮಾಡುವ ಅಥವಾ ಅವನು ತಪ್ಪಿಸಿಕೊಂಡು ಹೋಗುವಂತೆ ದುಷ್ಪ್ರೇರಣೆ ಮಾಡುವ ಅಥವಾ ಈ ಅಧಿನಿಯಮದ ವಿರುದ್ಧವಾಗಿ ಅಪರಾಧವೆಸಗಲು ದುಷ್ಪ್ರೇರಣೆ ಮಾಡುವ ಅಥವಾ ಈ ಅಧಿನಿಯಮದ ಉಪಬಂಧಗಳಿಂದ ತಪ್ಪಿಸಿಕೊಳ್ಳಲು ಅಥವಾ ಅವುಗಳನ್ನು ಉಲ್ಲಂಘಿಸಲು ಅಥವಾ ಅಬ್ಕಾರಿ ರಾಜಸ್ವವು ನಷ್ಟವಾಗುವಂತೆ ಯಾವುದೇ ಕೃತ್ಯವನ್ನು ಮಾಡಲು ಯಾವನೇ ವ್ಯಕ್ತಿಗೆ ಅನುಕೂಲ ಉಂಟು ಮಾಡುವ ಉದ್ದೇಶಕ್ಕಾಗಿ ತನ್ನ ಕರ್ತವ್ಯದ ಬಗ್ಗೆ ಯಾವುದೇ

ರೀತಿಯಲ್ಲಿ ಅಸಂಗತವಾಗಿ ವರ್ತಿಸುವ ಯಾವನೇ ಅಧಿಕಾರಿಯು ಅಥವಾ ವ್ಯಕ್ತಿಯು ಮತ್ತು ಯಾವುದೇ ಸ್ಥಳದಲ್ಲಿ ಈ ಅಧಿನಿಯಮದ ವಿರುದ್ಧ ಅಪರಾಧ ಮಾಡಲು ದುಷ್ಪ್ರೇರಣೆ ಮಾಡುವ 50ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಇತರ ಇಲಾಖೆಯ ಯಾವನೇ ಅಧಿಕಾರಿಯು, ಅಪರಾಧ ಸಿದ್ಧಪಟ್ಟ ಮೇಲೆ, ಅಂಥ ಪ್ರತಿಯೊಂದು ಅಪರಾಧಕ್ಕಾಗಿ, ಆರು ತಿಂಗಳ ಅವಧಿಯವರೆಗಿನ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡಿತವಾಗತಕ್ಕದ್ದು.

## ಅಧ್ಯಾಯ–8

## ಅಪರಾಧಗಳ ಪತ್ತೆ, ಅನ್ವೇಷಣೆ ಮತ್ತು ಆರೋಪ ವಿಚಾರಣೆ

**50. ಭೂ ಹಿಡುವಳಿದಾರರು, ಅಧಿಕಾರಿಗಳು ಮತ್ತು ಇತರರು ಮಾಹಿತಿ ಕೊಡುವುದು:–** (1) ಈ ಅಧಿನಿಯಮದ ಉಲ್ಲಂಘನೆಯಲ್ಲಿ, ಯಾವುದೇ ಮಾದಕವು ತಯಾರಿಸಿದಾಗ ಅಥವಾ ಸಂಗ್ರಹಿಸಲ್ಪಟ್ಟಾಗ, ಅಥವಾ ಮಾದಕ ನಾರು ಗಿಡವನ್ನು ಯಾವುದೇ ಭೂಮಿಯಲ್ಲಿ ಅಥವಾ ಕಟ್ಟಡದಲ್ಲಿ ಬೆಳೆಸಿದಾಗ,–

(ಕ) ಅಂಥ ಭೂಮಿಯ ಅಥವಾ ಕಟ್ಟಡದ ಎಲ್ಲ ಒಡೆಯರು ಅಥವಾ ಅಧಿಭೋಗದಾರರು ಅಥವಾ ಅಭಿಕರ್ತರು ಮತ್ತು

(ಖ) (i) ಗ್ರಾಮ ಪೊಲೀಸಿನವರು ಸೇರಿ, ಗ್ರಾಮಾಧಿಕಾರಿಗಳು ಅಥವಾ ಸೇವಕರು

(ii) ಗ್ರಾಮ ಪಂಚಾಯಿತಿಯ ಅಧ್ಯಕ್ಷ, ಸದಸ್ಯರು ಮತ್ತು ಅಧಿಕಾರಿಗಳು; ಮತ್ತು

(iii) (ಅಬ್ಕಾರಿ ಅಧಿಕಾರಿಗಳನ್ನುಳಿದು) ರಾಜ್ಯ ಸರಕಾರದ ಪರವಾಗಿ ಅಥವಾ ಅಂಥ ಭೂಮಿಯ ಅಥವಾ ಕಟ್ಟಡವು ಯಾವ ಪ್ರದೇಶದಲ್ಲಿದೆಯೋ ಅಲ್ಲಿಯ ಸ್ಥಳೀಯ ಪ್ರಾಧಿಕಾರದ ಪರವಾಗಿ ಭೂಕಂದಾಯವನ್ನು ಅಥವಾ ಭೂಮಿಯ ಗೇಣಿಯನ್ನು ವಸೂಲು ಮಾಡಲು ನಿಯೋಜಿಸಲ್ಪಟ್ಟ ಎಲ್ಲ ಅಧಿಕಾರಿಗಳು,–

ಯುಕ್ತ ಕಾರಣವಿಲ್ಲದಿರುವಾಗ, ತಮಗೆ ಆ ಸಂಗತಿಯ ಬಗ್ಗೆ ತಿಳಿದೊಡನೆಯೇ ಅದನ್ನು ಮ್ಯಾಜಿಸ್ಟ್ರೇಟರಿಗೆ ಅಥವಾ ಅಬ್ಕಾರಿ ಅಥವಾ ಪೊಲೀಸ್ ಅಥವಾ ರಾಜಸ್ವ ಇಲಾಖೆಯ ಅಧಿಕಾರಿಗೆ ತಿಳಿಸಲು ಬದ್ಧವಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಅಥವಾ ಅನ್ಯಥಾ ತನ್ನ ಗಮನಕ್ಕೆ ಬರಬಹುದಾದ ಈ ಅಧಿನಿಯಮದ ಯಾವುದೇ ಉಪಬಂಧಗಳ ಎಲ್ಲ ಉಲ್ಲಂಘನೆಗಳ ಬಗ್ಗೆ ತನ್ನ ನಿಕಟ ಮೇಲಧಿಕಾರಿಗೆ ಅಥವಾ ಅಬ್ಕಾರಿ ಇನ್ಸ್‌ಪೆಕ್ಟರನಿಗೆ ಕೂಡಲೇ ಮಾಹಿತಿ ಕೊಡಲು ಪ್ರತಿಯೊಬ್ಬ ಅಬ್ಕಾರಿ ಅಧಿಕಾರಿಯು ಬದ್ಧನಾಗಿರತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಎಲ್ಲ ಅಧಿಕಾರಿಗಳು, ಅಧ್ಯಕ್ಷರು, ಸದಸ್ಯರು, ಅಥವಾ ನೌಕರರು,–

(ಕ) ತಮಗೆ ತಿಳಿದುಬಂದ ಅಥವಾ ನಡೆಯಲಿರುವುದೆಂದು ಅಥವಾ ನಡೆಯುವ ಸಂಭವವಿರುವುದೆಂದು ನಂಬಲು ಕಾರಣವಿರುವ ಉಲ್ಲಂಘನೆಗಳನ್ನು ನಿರೋಧಿಸಲು ತಮ್ಮ ಶಕ್ತಿಯಲ್ಲಿರುವ ಎಲ್ಲ ಯುಕ್ತ ಕ್ರಮಗಳನ್ನು ಕೈಕೊಳ್ಳಲು; ಮತ್ತು

(ಖ) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವಲ್ಲಿ, ಅಬ್ಕಾರಿ ಕಮಿಶನರನಿಗೆ ಸಹಾಯ ನೀಡಲು ಬದ್ಧನಾಗಿರತಕ್ಕದ್ದು.

**51. ತಯಾರಿಕೆ ಮತ್ತು ಮಾರಾಟದ ಸ್ಥಳಗಳನ್ನು ಪ್ರವೇಶಿಸಲು ಮತ್ತು ಪರಿಶೀಲಿಸಲು ಶಕ್ತಿ:–** ಅಬ್ಕಾರಿ ಕಮೀಶನರು ಅಥವಾ ಡೆಪ್ಯುಟಿ ಕಮಿಶನರು ಅಥವಾ ನಿಯಮಿಸಬಹುದಾದಂಥ ದರ್ಜೆಗೆ ಕಡಿಮೆಯಿರದ

ಯಾವನೇ ಅಬ್ಕಾರಿ ಅಧಿಕಾರಿಯು, ಅಥವಾ ಆ ಬಗ್ಗೆ ಯಥಾವಿಧಿ ಶಕ್ತಗೊಳಿಸಲಾದ ಯಾವೊಬ್ಬ ಪೊಲೀಸ್ ಅಧಿಕಾರಿಯು,–

(ಕ) ಲೈಸೆನ್ಸು ಹೊಂದಿದ ತಯಾರಿಕೆದಾರನು ಯಾವುದೇ ಮಾದಕವನ್ನು ತಯಾರಿಸುವ ಅಥವಾ ಸಂಗ್ರಹಿಸಿಡುವ ಯಾವುದೇ ಸ್ಥಳವನ್ನು, ಹಗಲಾಗಲೀ ಅಥವಾ ರಾತ್ರಿಯಾಗಲೀ ಯಾವುದೆ ಕಾಲದಲ್ಲಿ, ಪ್ರವೇಶಿಸಬಹುದು ಮತ್ತು ಪರಿಶೀಲಿಸಬಹುದು; ಮತ್ತು

(ಖ) ಯಾವುದೇ ಮಾದಕವನ್ನು, ಈ ಅಧಿನಿಯಮದ ಮೇರೆಗೆ ಲೈಸೆನ್ಸು ಹೊಂದಿರುವ ಯಾವನೇ ವ್ಯಕ್ತಿಯು ಮಾರಾಟಕ್ಕಾಗಿ ಇಟ್ಟಿರುವ ಯಾವುದೇ ಸ್ಥಳವನ್ನು, ಮಾರಾಟಕ್ಕೆ ಅನುಮತಿಸಲಾದ ಸಮಯದ ಯಾವುದೇ ಕಾಲದಲ್ಲಿ, ಮತ್ತು ಅದು ತೆರೆದಿರುವ ಇತರ ಯಾವುದೆ ಕಾಲದಲ್ಲಿ, ಪ್ರವೇಶಿಸಬಹುದು ಮತ್ತು ಪರಿಶೀಲಿಸಬಹುದು; ಮತ್ತು

(ಗ) ಲೆಕ್ಕ ಪತ್ರಗಳನ್ನು ಮತ್ತು ರಿಜಿಸ್ಟರುಗಳನ್ನು ಪರೀಕ್ಷಿಸಬಹುದು, ಮತ್ತು ಅಂಥ ಸ್ಥಳದಲ್ಲಿರುವ ಯಾವುದೆ ಸಾಮಗ್ರಿಗಳನ್ನು, ಬಟ್ಟಿ ಯಂತ್ರಗಳನ್ನು, ಪಾತ್ರೆಗಳನ್ನು, ಉಪಕರಣಗಳನ್ನು, ಸಲಕರಣೆಗಳನ್ನು, ಅಥವಾ ಮಾದಕವನ್ನು ಪರೀಕ್ಷಿಸಬಹುದು, ಪರಕಿಸಬಹುದು, ಅಳತೆ ಮಾಡಬಹುದು ಅಥವಾ ತೂಕ ಮಾಡಬಹುದು.

**52. ವಾರಂಟಿಲ್ಲದೆ ದಸ್ತಗಿರಿ ಮಾಡುವುದು, ಮುಟ್ಟುಗೋಲಿಗೆ ಗುರಿಯಾಗಬಹುದಾದ ವಸ್ತುಗಳನ್ನು ಅಧಿಗ್ರಹಣ ಮಾಡುವುದು ಮತ್ತು ಶೋಧ ಮಾಡುವುದು:–** (1) ಅಬ್ಕಾರಿ ಇಲಾಖೆಯಲ್ಲಿ ನಿಯೋಜಿತವಾದ ರಾಜ್ಯ ಸರಕಾರದ ಯಾವನೇ ಅಧಿಕಾರಿಯು ಅಥವಾ ರಾಜ್ಯ ಸರಕಾರದಿಂದ ಶಕ್ತಗೊಳಿಸಲಾದ ಪೊಲೀಸ್ ಅಥವಾ ರಾಜಸ್ವ ಇಲಾಖೆಯ ಯಾವನೇ ಅಧಿಕಾರಿಯು ನಿಯಮಿಸಬಹುದಾದಂಥ ನಿಬಂಧಗಳಿಗೊಳಪಟ್ಟು, ಮತ್ತು, –

(ಕ) 32, 33, 34, 36 ಅಥವಾ 37ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧದ ಬಗ್ಗೆ ಯಾವನೇ ವ್ಯಕ್ತಿಯನ್ನು ವಾರಂಟಿಲ್ಲದೆ ದಸ್ತಗಿರಿ ಮಾಡಬಹುದು; ಮತ್ತು

(ಖ) ಈ ಅಧಿನಿಯಮದ ಮೇರೆಗೆ, ಅಥವಾ ಅಬ್ಕಾರಿ ರಾಜಸ್ವಕ್ಕೆ ಸಂಬಂಧಿಸಿದ ಆಯಾ ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ವಿಧಿಯ ಮೇರೆಗೆ ಮುಟ್ಟುಗೋಲಿಗೆ ಗುರಿಯಾಗಬಹುದೆಂದು ತಾನು ನಂಬಲು ಕಾರಣವಿರುವ ಅಬ್ಕಾರಿ ಶುಲ್ಕ ವಿಧಿಸಬಹುದಾದ ಅಥವಾ ಇತರ ವಸ್ತುವನ್ನು ಅಧಿಗ್ರಹಣ ಮಾಡಬಹುದು ಮತ್ತು ಇರಿಸಿಕೊಳ್ಳಬಹುದು; ಮತ್ತು

(ಗ) ಅಂಥ ಯಾವುದೇ ವಸ್ತುವು ಯಾರಲ್ಲಿ ಇದೆಯೆಂದು ತನಗೆ ಸಂಶಯ ಬರಲು ಯುಕ್ತ ಕಾರಣವಿರುವುದೋ ಆ ವ್ಯಕ್ತಿಯನ್ನು, ಮತ್ತು ಅಂಥ ಯಾವುದೇ ನೌಕೆ, ದೋಣಿ, ವಾಹನ, ಪ್ರಾಣಿ, ಪಶು, ಪಿಂಡಿ, ಪಾತ್ರೆ ಅಥವಾ ಮುಚ್ಚಳವನ್ನು ನಿರೋಧಿಸಬಹುದು ಮತ್ತು ಶೋಧಿಸಬಹುದು.

(2) ಯಾವೊಬ್ಬ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ಪ್ರಕರಣ 32, ಪ್ರಕರಣ 33, ಪ್ರಕರಣ 34, ಪ್ರಕರಣ 36 ಅಥವಾ ಪ್ರಕರಣ 37ರ ಮೇರೆಗೆ ಹೊರತು ಇತರ ಯಾವುದೇ ಅಪರಾಧದ ಆಪಾದಿತನಾಗಿರುವಾಗ ಅಥವಾ ಅಪರಾಧ ಮಾಡಿರುವನೆಂದು ಸಕಾರಣವಾಗಿ ಶಂಕಿಸಲಾದ, ಮತ್ತು ಮೇಲೆ ಹೇಳಿದಂಥ ಅಧಿಕಾರಿಯು ಕೇಳಿದಾಗ ತನ್ನ ಹೆಸರು ಮತ್ತು ನಿವಾಸದ ವಿಳಾಸವನ್ನು ಹೇಳಲು ನಿರಾಕರಿಸಿದರೆ, ಅಥವಾ ಅಂಥ ಅಧಿಕಾರಿಯು ಸುಳ್ಳೆಂದು ನಂಬಲು ಕಾರಣವಿರುವ ಯಾವುದೇ ಹೆಸರನ್ನು ಮತ್ತು ನಿವಾಸದ ವಿಳಾಸವನ್ನು ಕೊಟ್ಟರೆ, ಅವನ ಹೆಸರು ಮತ್ತು ನಿವಾಸದ ವಿಳಾಸವನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಅಂಥ ಅಧಿಕಾರಿಯು ಅವನನ್ನು ದಸ್ತಗಿರಿ ಮಾಡಬಹುದು.

**53. ವಾರಂಟು ಹೊರಡಿಸಲು ಮ್ಯಾಜಿಸ್ಟ್ರೇಟನ ಶಕ್ತಿ:–** ಮಾಹಿತಿ ದೊರೆತ ಮೇಲೆ ಮತ್ತು ತಾನು ಅವಶ್ಯವೆಂದು ಆಲೋಚಿಸುವ ವಿಚಾರಣೆಯನ್ನು (ಯಾವುದೇ ಇದ್ದರೆ) ಮಾಡಿದ ತರುವಾಯ, 32, 33, 34, 36 ಅಥವಾ

37ನೇ ಪ್ರಕರಣದ ಮೇರೆಗಿನ ಅಪರಾಧವು ನಡೆದಿದೆ, ನಡೆಯುತ್ತಿದೆ ಅಥವಾ ನಡೆಯುವ ಸಂಭವವಿದೆಯೆಂದು ತಾನು ನಂಬಲು ಕಾರಣವಿರುವ ಯಾವೊಬ್ಬ ಮ್ಯಾಜಿಸ್ಟ್ರೇಟನು.–

(ಕ) ಅಂಥ ಅಪರಾಧವನ್ನು ಮಾಡಲು ಉಪಯೋಗಿಸಿದ ಅಥವಾ ತತ್ಸಂಬಂಧ ಯಾವುದರ ಸಂಬಂಧದಲ್ಲಿ ಅಪರಾಧ ನಡೆದಿದೆಯೋ, ನಡೆಯುತ್ತಿದೆಯೋ ಅಥವಾ ನಡೆಯುವ ಸಂಭವವಿದೆಯೋ ಆ ಯಾವುದೇ ಮಾದಕ ಬಟ್ಟಿಯಂತ್ರ, ಪಾತ್ರೆ, ಉಪಕರಣ, ಸಲಕರಣೆ ಅಥವಾ ಪದಾರ್ಥಗಳನ್ನು ಇಡಲಾಗಿದೆ ಅಥವಾ ಬಚ್ಚಿಡಲಾಗಿದೆಯೆಂದು ತಾನು ನಂಬಲು ಕಾರಣವಿರುವ ಯಾವುದೇ ಸ್ಥಳವನ್ನು ಶೋಧಿಸಲು; ಮತ್ತು

(ಖ) ಅಂಥ ಯಾವುದೇ ಅಪರಾಧವನ್ನು ಮಾಡಿದ್ದಾನೆ, ಮಾಡುತ್ತಿದ್ದಾನೆ ಅಥವಾ ಮಾಡುವ ಸಂಭವವಿದೆ ಎಂದು ತಾನು ನಂಬಲು ಕಾರಣವಿರುವ ಯಾವನೇ ವ್ಯಕ್ತಿಯನ್ನು ದಸ್ತಗಿರಿ ಮಾಡಲು ವಾರಂಟು ಹೊರಡಿಸಬಹುದು.

**54. ವಾರಂಟಿಲ್ಲದೆ ಶೋಧ ಮಾಡುವ ಶಕ್ತಿ:–** 32, 33, 34, 36 ಅಥವಾ 37ನೇ ಪ್ರಕರಣದ ಮೇರೆಗಿನ ಅಪರಾಧವು ನಡೆದಿದೆ, ನಡೆಯುತ್ತಿದೆ ಅಥವಾ ನಡೆಯುವ ಸಂಭವವಿದೆಯೆಂದು ಮತ್ತು ಅಪರಾಧಿಗೆ ತಪ್ಪಿಸಿಕೊಳ್ಳಲು ಅಥವಾ ಅಪರಾಧದ ಸಾಕ್ಷ್ಯವನ್ನು ಮರೆಮಾಡಲು ಅವಕಾಶ ಕೊಡದಂತೆ ಶೋಧನೆಗಾಗಿ ವಾರಂಟು ಪಡೆಯುವುದು ಸಾಧ್ಯವಿಲ್ಲವೆಂದು ನಂಬಲು ತನಗೆ ಕಾರಣವಿರುವಾಗ, ಅಬ್ಕಾರಿ ಕಮಿಷನರು ಅಥವಾ ಡೆಪ್ಯುಟಿ ಕಮಿಶನರರ ಅಥವಾ ಪೊಲೀಸ್ ಠಾಣೆಯ ಆಡಳಿತವನ್ನು ಹೊಂದಿರುವ ಅಧಿಕಾರಿಯ ದರ್ಜೆಗೆ ಕಡಿಮೆಯಿರದ ಯಾವನೇ ಪೊಲೀಸ್ ಅಧಿಕಾರಿಯು ಅಥವಾ ನಿಯಮಿಸಬಹುದಾದಂಥ ದರ್ಜೆಗೆ ಕಡಿಮೆಯಿರದ ಯಾವನೇ ಅಬ್ಕಾರಿ ಅಧಿಕಾರಿಯು, ತನ್ನ ನಂಬುಗೆಯ ಕಾರಣವನ್ನು ಅಭಿಲೇಖಿಸಿ–

(ಕ) ಹಗಲಿನಲ್ಲಾಗಲೀ ಅಥವಾ ರಾತ್ರಿಯಲ್ಲಾಗಲೀ ಯಾವುದೇ ಕಾಲದಲ್ಲಿ ಯಾವುದೇ ಸ್ಥಳವನ್ನು ಪ್ರವೇಶಿಸಬಹುದು ಮತ್ತು ಶೋಧಿಸಬಹುದು ಮತ್ತು ಅಲ್ಲಿರುವ ಈ ಅಧಿನಿಯಮದ ಮುಟ್ಟುಗೋಲಿಗೆ ಗುರಿಯಾಗಬಹುದೆಂದು ತನಗೆ ನಂಬಲು ಕಾರಣವಿರುವ ಯಾವುದೇ ಪದಾರ್ಥವನ್ನು ಅಧಿಗ್ರಹಣ ಮಾಡಬಹುದು.

(ಖ) ಮೇಲೆ ಹೇಳಿದಂತಹ ಅಪರಾಧದ ದೋಷಿಯಾಗಿರುವನೆಂದು ತನಗೆ ನಂಬಲು ಕಾರಣವಿರುವ ವ್ಯಕ್ತಿಯು ಅಂಥ ಸ್ಥಳದಲ್ಲಿದ್ದರೆ, ಅವನನ್ನು ತಡೆಹಿಡಿದಿರಿಸಬಹುದು ಮತ್ತು ಶೋಧಿಸಬಹುದು ಮತ್ತು ತಾನು ಸೂಕ್ತವೆಂದು ಆಲೋಚಿಸಿದರೆ, ದಸ್ತಗಿರಿ ಮಾಡಬಹುದು.

**55. ಅನ್ವೇಷಣೆಯ ವಿಷಯದಲ್ಲಿ ಅಬ್ಕಾರಿ ಅಧಿಕಾರಿಗಳ ಶಕ್ತಿ:–** (1) ಯಾವೊಬ್ಬ ಅಬ್ಕಾರಿ ಇನ್‌ಸ್ಪೆಕ್ಟರು, ಅಬ್ಕಾರಿ ಸಬ್‌ಇನ್‌ಸ್ಪೆಕ್ಟರು ಅಥವಾ ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ನಿಯಮಿಸಬಹುದಾದಂಥ ದರ್ಜೆಗೆ ಕಡಿಮೆಯಿರದ ಮತ್ತು ಅಂಥ ಉಲ್ಲೇಖಿಸಿದ ಪ್ರದೇಶದಲ್ಲಿರುವ ಯಾವನೇ ಅಬ್ಕಾರಿ ಅಧಿಕಾರಿಯು, 32, 33, 34, 36 ಅಥವಾ 37ನೇ ಪ್ರಕರಣದ ಮೇರೆಗಿನ ಅಪರಾಧಗಳ ಸಂಬಂಧದಲ್ಲಿ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1898ರ ಉಪಬಂಧಗಳಿಂದ ಪೊಲೀಸ್ ಠಾಣೆಯ ಆಡಳಿತವನ್ನು ಹೊಂದಿರುವ ಅಧಿಕಾರಿಗಳಿಗೆ ಪ್ರದತ್ತವಾದ ಶಕ್ತಿಗಳನ್ನೇ ಚಲಾಯಿಸಬಹುದು.

ಪರಂತು, ಅಂಥ ಶಕ್ತಿಯು, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ನಿರ್ಬಂಧಗಳಿಗೆ ಮತ್ತು ಮಾರ್ಪಾಟುಗಳಿಗೆ ಒಳಪಟ್ಟಿರತಕ್ಕದ್ದು.

(2) ಸದರಿ ಸಂಹಿತೆಯ 156ನೇ ಪ್ರಕರಣದ ಉದ್ದೇಶಕ್ಕಾಗಿ, ಯಾವ ಪ್ರದೇಶದ ಬಗ್ಗೆ (1)ನೆಯ ಒಳಪ್ರಕರಣದ ಮೇರೆಗೆ ಅಬ್ಕಾರಿ ಇನ್‌ಸ್ಪೆಕ್ಟರನನ್ನು ಶಕ್ತಗೊಳಿಸಲಾಗಿದೆಯೋ ಆ ಪ್ರದೇಶವು, ಪೊಲೀಸ್ ಠಾಣೆಯೆಂದು ಭಾವಿಸತಕ್ಕದ್ದು ಮತ್ತು ಅಂಥ ಅಧಿಕಾರಿಯು ಅಂಥ ಠಾಣೆಯ ಆಡಳಿತವನ್ನು ಹೊಂದಿರುವ ಅಧಿಕಾರಿಯೆಂದು ಭಾವಿಸತಕ್ಕದ್ದು.

**56. ಅನ್ವೇಷಣಾಧಿಕಾರಿಯ ವರದಿ:–** ಅಬ್ಕಾರಿ ಇನ್‌ಸ್ಪೆಕ್ಟರನಿಂದ ಅಥವಾ ಸಬ್ ಇನ್‌ಸ್ಪೆಕ್ಟರನಿಂದ ಅಥವಾ 55ನೇ ಪ್ರಕರಣದ (1)ನೆಯ ಉಪಪ್ರಕರಣದ ಮೇರೆಗೆ ಶಕ್ತಗೊಳಿಸಲಾದ ಅಬ್ಕಾರಿ ಅಧಿಕಾರಿ ಅನ್ವೇಷಣೆ ನಡೆಸಿದ ಮೇಲೆ ಆಪಾದಿತನ ಬಗ್ಗೆ ಪ್ರಾಸಿಕ್ಯೂಷನ್ ನಡೆಸುವುದನ್ನು ಸಮರ್ಥಿಸಲು ಸಾಕಷ್ಟು ಸಾಕ್ಷ್ಯವಿದೆಯೆಂದು ಕಂಡುಬಂದರೆ, ಅನ್ವೇಷಣಾಧಿಕಾರಿಯು, ಆ ಮೊಕದ್ದಮೆಯನ್ನು ಕುರಿತು ವಿಚಾರಿಸಲು ಅಥವಾ ಅದರ ಆರೋಪ ವಿಚಾರಣೆ ನಡೆಸಲು ಅಧಿಕಾರವ್ಯಾಪ್ತಿಯುಳ್ಳ ಮತ್ತು ಪೊಲೀಸ್ ವರದಿಗಳ ಮೇಲೆ ಅಪರಾಧಗಳನ್ನು ಗಮನಿಸಿ ಕ್ರಮ ತೆಗೆದುಕೊಳ್ಳಲು ಶಕ್ತಗೊಳಿಸಲಾದ ಮ್ಯಾಜಿಸ್ಟ್ರೇಟನಿಗೆ ವರದಿ ಒಪ್ಪಿಸಬಹುದು. (ಅಂಥ ವರದಿಯು, 1898 ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 190ನೆಯ ಪ್ರಕರಣದ ಉದ್ದೇಶಗಳಿಗಾಗಿ, ಪೊಲೀಸ್ ವರದಿಯೆಂದು ಭಾವಿಸಲ್ಪಡತಕ್ಕದ್ದು.)

**57. ಅಬ್ಕಾರಿ ಅಧಿಕಾರಿಯ ವರದಿ:–** ಅಬ್ಕಾರಿ ಸಬ್‌ಇನ್ಸ್‌ಪೆಕ್ಟರನ ದರ್ಜೆಗಿಂತ ಕಡಿಮೆಯಿರುವ ಅಬ್ಕಾರಿ ಅಧಿಕಾರಿಯು ಈ ಅಧಿನಿಯಮದ ಮೇರೆಗೆ ಯಾವುದೇ ದಸ್ತಗಿರಿಯನ್ನು, ಅಧಿಗ್ರಹಣವನ್ನು ಅಥವಾ ಶೋಧನೆಯನ್ನು ಮಾಡಿದಾಗ, ಅವನು, ಆ ತರುವಾಯ ಇಪ್ಪತ್ತನಾಲ್ಕು ಗಂಟೆಗಳೊಳಗಾಗಿ,–

(ಕ) ಅಂಥ ದಸ್ತಗಿರಿ ಅಧಿಗ್ರಹಣ ಅಥವಾ ಶೋಧನೆಯ ಎಲ್ಲ ವಿವರಗಳ ಒಂದು ಪೂರ್ಣ ವರದಿಯನ್ನು ತನ್ನ ನಿಕಟ ಮೇಲಾಧಿಕಾರಿಗೆ ಒಪ್ಪಿಸತಕ್ಕದ್ದು.

(ಖ) 59ನೆಯ ಪ್ರಕರಣದ ಮೇರೆಗೆ ಜಾಮೀನನ್ನು ಒಪ್ಪಿಕೊಂಡ ಹೊರತು ದಸ್ತಗಿರಿ ಮಾಡಿದ ವ್ಯಕ್ತಿಯನ್ನು ಅಥವಾ ಅಧಿಗ್ರಹಣ ಮಾಡಿದ ವಸ್ತುವನ್ನು, ಅನುಕೂಲವಾದಷ್ಟು ಬೇಗನೆ, ಆರೋಪ ವಿಚಾರಣೆಗಾಗಿ ಅಥವಾ ನ್ಯಾಯ ನಿರ್ಣಯಕ್ಕಾಗಿ, ಮ್ಯಾಜಿಸ್ಟ್ರೇಟನ ಕಡೆಗೆ ಕರೆದೊಯ್ಯತಕ್ಕದ್ದು ಅಥವಾ ಕಳಿಸತಕ್ಕದ್ದು.

**58. ದಸ್ತಗಿರಿ, ಶೋಧನೆ ಇತ್ಯಾದಿಗಳನ್ನು ಮಾಡುವ ಬಗೆ:–** ಈ ಅಧಿನಿಯಮದ ಮೇರೆಗೆ ದಸ್ತಗಿರಿ ಮಾಡಲ್ಪಟ್ಟ ಯಾವನೇ ವ್ಯಕ್ತಿಗೆ, ಸಾಧ್ಯವಾದಷ್ಟು ಬೇಗನೆ, ಅಂಥ ದಸ್ತಗಿರಿಯ ಕಾರಣಗಳನ್ನು ತಿಳಿಸತಕ್ಕದ್ದು ಮತ್ತು ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ದಸ್ತಗಿರಿಗಳು, ಅಭಿರಕ್ಷೆಯಲ್ಲಿ ಇಟ್ಟಿರುವುದು, ಶೋಧನೆಗಳು, ಸಮನುಗಳು, ದಸ್ತಗಿರಿ ವಾರಂಟುಗಳು, ಶೋಧನೆ ವಾರಂಟುಗಳು ದಸ್ತಗಿರಿ ಮಾಡಿದ ವ್ಯಕ್ತಿಗಳನ್ನು ಹಾಜರುಪಡಿಸುವುದು ಮತ್ತು ಅಧಿಗ್ರಹಣ ಮಾಡಿದ ವಸ್ತುಗಳ ವಿಲೇವಾರಿ ಇವುಗಳಿಗೆ ಸಂಬಂಧಿಸಿದ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ 1898ರ ಉಪಬಂಧಗಳು ಸಾಧ್ಯವಿರುವ ಮಟ್ಟಿಗೆ, ಈ ವಿಷಯಗಳಲ್ಲಿ ಈ ಅಧಿನಿಯಮದ ಮೇರೆಗೆ ತೆಗೆದುಕೊಂಡ ಎಲ್ಲ ಕ್ರಮಗಳಿಗೆ ಅನ್ವಯಿಸತಕ್ಕದ್ದು:

ಪರಂತು, ಶೋಧನೆಗೆ ಇದ್ದ ಸಾಕ್ಷಿಗಳು ಶೋಧನೆ ನಡೆಸಿದ ಸ್ಥಳದ ನಿವಾಸಿಗಳಲ್ಲವೆಂಬ ಸಂಗತಿಯ ಕಾರಣ ಮಾತ್ರದಿಂದ ಯಾವ ಶೋಧನೆಯನ್ನೂ ಅಕ್ರಮವೆಂದು ಭಾವಿಸತಕ್ಕದ್ದಲ್ಲ.

**59. ವಾರಂಟಿಲ್ಲದೆ ದಸ್ತಗಿರಿ ಮಾಡಿದ ಸಂದರ್ಭದಲ್ಲಿ ಹಾಜರಾಗುವ ಬಗ್ಗೆ ಜಾಮೀನು:–** (1) ಈ ಅಧಿನಿಯಮದ ಮೇರೆಗೆ ವಾರಂಟಿಲ್ಲದೆ ದಸ್ತಗಿರಿ ಮಾಡಿದ ವ್ಯಕ್ತಿಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಯಾವನೇ ಅಬ್ಕಾರಿ ಅಧಿಕಾರಿಯನ್ನು ಶಕ್ತಗೊಳಿಸಬಹುದು.

(2) ದಸ್ತಗಿರಿ ಮಾಡಿದ ವ್ಯಕ್ತಿಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು ಅಧಿಕೃತವಾಗಿರದ ವ್ಯಕ್ತಿಯು ಅಥವಾ ಅಧಿಕಾರಿಯು ಯಾವನೇ ವ್ಯಕ್ತಿಯನ್ನು ವಾರಂಟಿಲ್ಲದೆ ಈ ಅಧಿನಿಯಮದ ಮೇರೆಗೆ ದಸ್ತಗಿರಿ ಮಾಡಿರುವಾಗ, ಅವನನ್ನು,–

(ಕ) ದಸ್ತಗಿರಿ ಮಾಡಿದ ವ್ಯಕ್ತಿಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು ಅಧಿಕೃತವಿರುವ ಅತಿ ಸಮೀಪದ ಅಬ್ಕಾರಿ ಅಧಿಕಾರಿಯು; ಅಥವಾ

(ಖ) ಅತಿ ಸಮೀಪದ ಪೊಲೀಸ್ ಠಾಣೆಯ ಆಡಳಿತವನ್ನು ಹೊಂದಿರುವ ಅಧಿಕಾರಿಯು ಇವರಲ್ಲಿ ಯಾರು ಅತಿ ಸಮೀಪದಲ್ಲಿರುವರೋ ಅವರ ಮುಂದೆ ಅಥವಾ ಕಡೆಗೆ ಹಾಜರುಪಡಿಸತಕ್ಕದ್ದು ಅಥವಾ ಕಳಿಸತಕ್ಕದ್ದು.

(3) ವಾರಂಟಿಲ್ಲದೆ ಈ ಅಧಿನಿಯಮದ ಮೇರೆಗೆ ದಸ್ತಗಿರಿ ಮಾಡಲ್ಪಟ್ಟಿರುವ ಯಾವನೇ ವ್ಯಕ್ತಿಯು, ಜಾಮೀನು ಕೊಡಲು ಸಿದ್ಧನಿದ್ದರೆ, ಅಥವಾ ದಸ್ತಗಿರಿ ಮಾಡಿದ ವ್ಯಕ್ತಿಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು ಅಧಿಕಾರವಿರುವ ಅಧಿಕಾರಿಯು ಮುಂದೆ (2)ನೇ ಉಪಪ್ರಕರಣದ ಮೇರೆಗೆ ಹಾಜರುಪಡಿಸಿದಾಗ, ಅವನನ್ನು, ಜಾಮೀನಿನ ಮೇಲೆ ಅಥವಾ ಅವನ ಸ್ವಂತದ ಮುಚ್ಚಳಿಕೆಯ ಮೇಲೆ ಅವನನ್ನು ಬಿಡುಗಡೆ ಮಾಡುವ ಅಧಿಕಾರಿಯ ವಿವೇಚನಾನುಸಾರ, ಬಿಡುಗಡೆ ಮಾಡತಕ್ಕದ್ದು.

(4) ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1898ರ 499 ರಿಂದ 502ರ ವರೆಗಿನ ಪ್ರಕರಣಗಳು, 513, 514 ಮತ್ತು 515ನೇ ಪ್ರಕರಣಗಳು, ಸಾಧ್ಯವಿರಬಹುದಾದ ಮಟ್ಟಿಗೆ, ಈ ಪ್ರಕರಣದ ಮೇರೆಗೆ ಜಾಮೀನು ಸ್ವೀಕರಿಸುವ ಅಥವಾ ಮುಚ್ಚಳಿಕೆಯನ್ನು ತೆಗೆದುಕೊಳ್ಳುವ ಪ್ರತಿಯೊಂದು ಸಂದರ್ಭಕ್ಕೂ ಅನ್ವಯಿಸತಕ್ಕದ್ದು.

**59ಕ. ಅಬ್ಕಾರಿ ಇನ್‌ಸ್ಪೆಕ್ಟರರ ಪ್ರಮಾಣ ಪತ್ರವು ಸಾಕ್ಷ್ಯವಾಗಿರುವುದು:–** ಮಾದಕಗಳ ಮತ್ತು ಪದಾರ್ಥಗಳ ಪರೀಕ್ಷೆ ಮತ್ತು ಸವಿವರ ಪರಿಶೀಲನೆಯಲ್ಲಿ ನಿಯಮಿಸಿದ ತರಬೇತಿಯನ್ನು ಪಡೆದ ಮತ್ತು ಈ ಸಂಬಂಧದಲ್ಲಿ ರಾಜ್ಯ ಸರ್ಕಾರದಿಂದ ಅಧಿಕೃತನಾದ ಅಬ್ಕಾರಿ ಇನ್‌ಸ್ಪೆಕ್ಟರನ ಮುಂದೆ ಅವನ ಪರೀಕ್ಷೆಗೆ ಅಥವಾ ಪರಿಶೀಲನೆಗೆ ಅಥವಾ ವರದಿಗಾಗಿ ಹಾಜರುಪಡಿಸಿದ ಯಾವುದೇ ವಿಷಯದ ಅಥವಾ ಪದಾರ್ಥದ ಬಗ್ಗೆ ಅವನ ಸಹಿಯಿರುವ ಪ್ರಮಾಣ ಪತ್ರವೆಂದು ಭಾವಿಸಲಾಗುವ ದಸ್ತಾವೇಜನ್ನು, ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಗಳಲ್ಲಿ ಆ ಪ್ರಮಾಣನ ಪತ್ರದಲ್ಲಿರುವ ಸಂಗತಿಗಳ ಬಗ್ಗೆ ಸಾಕ್ಷ್ಯವೆಂದು ಉಪಯೋಗಿಸಿಕೊಳ್ಳಬಹುದು; ಆದರೆ, ನ್ಯಾಯಾಲಯವು, ತಾನು ಸೂಕ್ತವೆಂದು ಆಲೋಚಿಸಿದರೆ ಮತ್ತು ಪ್ರಾಸಿಕ್ಯೂಷನ್ನಿನ ಅಥವಾ ಆಪಾದಿತ ವ್ಯಕ್ತಿಯು ಆವೇದನದ ಮೇಲೆ, ಯಾವನೇ ಅಬ್ಕಾರಿ ಇನ್‌ಸ್ಪೆಕ್ಟರನನ್ನು ಅವನ ಪ್ರಮಾಣನ ಪತ್ರದ ವಿಷಯದ ಸಂಬಂಧದಲ್ಲಿ ಸಮನು ಮಾಡಬಹುದು ಮತ್ತು ಪರೀಕ್ಷಿಸಬಹುದು.

**60. ಪ್ರಾಸಿಕ್ಯೂಷನ್ನಿನ ಪ್ರಕ್ರಿಯೆ:–** ಯಾವ ಮ್ಯಾಜಿಸ್ಟ್ರೇಟನೂ–

(ಕ) 35 ಅಥವಾ 38ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧದ ಬಗ್ಗೆ, ಡೆಪ್ಯುಟಿ ಕಮೀಶನರರ ಅಥವಾ ಈ ಸಂದರ್ಭದಲ್ಲಿ ಡೆಪ್ಯುಟಿ ಕಮಿಶನರನಿಂದ ಅಧಿಕೃತನಾದ ಅಬ್ಕಾರಿ ಅಧಿಕಾರಿಯ, ಫಿರ್ಯಾದಿನ ಅಥವಾ ವರದಿಯ ಮೇಲಲ್ಲದೆ, ಅಥವಾ

(ಖ) ಈ ಅಧಿನಿಯಮದ 46 ಅಥವಾ 48ನೇ ಪ್ರಕರಣವನ್ನುಳಿದು ಬೇರಾವುದೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧದ ಬಗ್ಗೆ, ತನ್ನ ತಿಳುವಳಿಕೆ ಅಥವಾ ಸಂಶಯದ ಅಥವಾ ಅಬ್ಕಾರಿ ಅಥವಾ ಪೊಲೀಸ್ ಅಧಿಕಾರಿಯ ಫಿರ್ಯಾದು ಅಥವಾ ವರದಿಯ ಮೇಲಲ್ಲದೆ, ಅಪರಾಧವನ್ನು ಗಮನಿಸಿ ಕ್ರಮ ತೆಗೆದುಕೊಳ್ಳತಕ್ಕದ್ದಲ್ಲ.

**60. (ಕ) ಮ್ಯಾಜಿಸ್ಟ್ರೇಟನು ಅನುಸರಿಸಬೇಕಾದ ಪ್ರಕ್ರಿಯೆ:–** (1) ಈ ಅಧಿನಿಯಮದ ಮೇರೆಗಿನ ಅಪರಾಧಗಳ ಎಲ್ಲ ಆರೋಪ ವಿಚಾರಣೆಗಳಲ್ಲಿ, ಮ್ಯಾಜಿಸ್ಟ್ರೇಟನು, ಅಪೀಲಿನಲ್ಲಿರುವ ಸಂಕ್ಷಿಪ್ತ ವಿಚಾರಣೆಯ ಮೊಕದ್ದಮೆಗಳ ಬಗ್ಗೆ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1898ರಲ್ಲಿ ನಿಯಮಿಸಿದ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

ಪರಂತು, ಯಾವುದೇ ಮೊಕದ್ದಮೆಯಲ್ಲಿ, ಮ್ಯಾಜಿಸ್ಟ್ರೇಟನು ಬರಹದಲ್ಲಿ ಅಭಿಲೇಖಿಸುವ ಕಾರಣಗಳ ಮೇಲೆ ಅಂಥ ಪ್ರಕ್ರಿಯೆಯನ್ನು ಅನುಸರಿಸುವುದು ವಿಹಿತವಲ್ಲವೆಂದು ತೀರ್ಮಾನಿಸಿದರೆ, ಅವನು ಆ ಮೊಕದ್ದಮೆಯು ಸಮನ್ಸು ಮೊಕದ್ದಮೆಯೋ ಅಥವಾ ವಾರಂಟು ಮೊಕದ್ದಮೆಯೋ ಎಂಬುದಕ್ಕನುಸಾರವಾಗಿ, ಸದರಿ ಸಂಹಿತೆಯ XX ಅಥವಾ XXIನೇ ಅಧ್ಯಾಯದಲ್ಲಿ ನಿಯಮಿಸಿದ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

## ಅಧ್ಯಾಯ–9

## ಅಪೀಲುಗಳು ಮತ್ತು ಪುನರೀಕ್ಷಣೆ

**61. ಅಪೀಲುಗಳು:–** (1) ಅಬ್ಕಾರಿ ಕಮಿಶನರು ಅಥವಾ ಡೆಪ್ಯುಟಿ ಕಮಿಶರನನ್ನುಳಿದು ಈ ಅಧಿನಿಯಮದ ಮೇರೆಗೆ ಬೇರೆ ಯಾವನೇ ಅಧಿಕಾರಿಯು ಹೊರಡಿಸಿದ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು ಅಂಥ ಆದೇಶವು ತಲುಪಿದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ, ಡೆಪ್ಯುಟಿ ಕಮಿಶನರನಿಗೆ ಅಪೀಲು ಮಾಡಬಹುದು.

(2) ಈ ಅಧಿನಿಯಮದ ಮೇರೆಗೆ ಡೆಪ್ಯುಟಿ ಕಮಿಶನರನು ಹೊರಡಿಸಿದ ಯಾವುದೇ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಅಂಥ ಆದೇಶವು ತಲುಪಿದ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ, ಅಬ್ಕಾರಿ ಕಮಿಶನರಿಗೆ ಅಪೀಲು ಮಾಡಬಹುದು.

(3) (2)ನೇ ಉಪಪ್ರಕರಣದ ಮೇರೆಗೆ ಅಬ್ಕಾರಿ ಕಮಿಶನರನು ಹೊರಡಿಸಿದ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಅಂಥ ಆದೇಶವು ತಲುಪಿದ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ, ಕರ್ನಾಟಕ ರಾಜಸ್ವ ಅಪೀಲು ಅಧಿಕರಣಕ್ಕೆ ಅಪೀಲು ಮಾಡಬಹುದು.

(4) ಮೇಲೆ ಹೇಳಿದ ಉಪಬಂಧಗಳಿಗೊಳಪಟ್ಟು ಈ ಪ್ರಕರಣದ ಮೇರೆಗಿನ ಅಪೀಲುಗಳು ಈ ಸಂಬಂಧದಲ್ಲಿ ರಾಜ್ಯ ಸರಕಾರವು ರಚಿಸಬಹುದಾದ ನಿಯಮಗಳಿಗೆ ಒಳಪಟ್ಟಿರತಕ್ಕದ್ದು.

**62. ಪುನರೀಕ್ಷಣೆ:–** ಲೈಸೆನ್ಸು ಅಥವಾ ಅನುಮತಿ ಪತ್ರದ ಕೊಡುವಿಕೆ ಅಥವಾ ನಿರಾಕರಿಸುವಿಕೆಯೂ ಸೇರಿ, ಯಾವೊಬ್ಬ ಅಧಿಕಾರಿಯ ಮುಂದೆ ನಡೆದ ಯಾವುದೇ ವ್ಯವಹರಣೆಗಳ ಅಭಿಲೇಖನಗಳನ್ನು, ಆ ವ್ಯವಹರಣೆಗಳಲ್ಲಿ ಹೊರಡಿಸಿದ ಆದೇಶಗಳ ಸರಿಯಾಗಿರುವಿಕೆ, ವಿಧಿಬದ್ಧತೆ ಅಥವಾ ಔಚಿತ್ಯದ ಬಗ್ಗೆ ಮತ್ತು ಅಂಥ ವ್ಯವಹರಣೆಗಳು ಕ್ರಮಬದ್ಧವಾಗಿವೆಯೆಂಬ ಬಗ್ಗೆ ತಾನು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ, ರಾಜ್ಯ ಸರಕಾರವು ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಅಂಥ ಆದೇಶವನ್ನು ಶೂನ್ಯಗೊಳಿಸಬಹುದು. ವಿಪರ್ಯಯಗೊಳಿಸಬಹುದು, ಮಾರ್ಪಡಿಸಬಹುದು ಅಥವಾ ಸ್ಥಿರೀಕರಿಸಬಹುದು ಅಥವಾ ತಾನು ಸೂಕ್ತವೆಂದು ಭಾವಿಸುವ ಬೇರಾವುದೇ ಆದೇಶವನ್ನು ಮಾಡಬಹುದು;

ಪರಂತು, ಅಂಥ ಆದೇಶದಿಂದ ಬಾಧಿತನಾದ ವ್ಯಕ್ತಿಗೆ ಹೇಳಿಕೊಳ್ಳಲು ಯುಕ್ತ ಅವಕಾಶ ಕೊಟ್ಟಿಲ್ಲದ ಯಾವ ಆದೇಶವನ್ನೂ, ಶೂನ್ಯಗೊಳಿಸತಕ್ಕದ್ದಲ್ಲ, ವಿಪರ್ಯಯಗೊಳಿಸತಕ್ಕದ್ದಲ್ಲ ಅಥವಾ ಮಾರ್ಪಡಿಸತಕ್ಕದ್ದಲ್ಲ.

## ಅಧ್ಯಾಯ–10

## ಸಂಕೀರ್ಣ

**63. ಸರಕಾರಕ್ಕೆ ಬರಬೇಕಾದ ಬಾಕಿಗಳ ವಸೂಲಿ:–** (1) ಕೆಳಕಂಡ ಮೊಬಲಗುಗಳನ್ನು ಎಂದರೆ:–

(ಕ) ಎಲ್ಲ ಅಬ್ಕಾರಿ ರಾಜಸ್ವವನ್ನು,

(ಖ) ತಪ್ಪಿದ್ದಕ್ಕಾಗಿ 17ನೇ ಪ್ರಕರಣದ ಮೇರೆಗಿನ ಗುತ್ತಿಗೆಯನ್ನು ಡೆಪ್ಯುಟಿ ಕಮಿಶನರನನ್ನು ತನ್ನ ಆಡಳಿತಕ್ಕೆ ತೆಗೆದುಕೊಂಡಾಗ, ಅಥವಾ ಅವನಿಂದ ಮರು ಮಾರಾಟವಾದಾಗ, ಉಂಟಾದ ಯಾವುದೇ ನಷ್ಟವನ್ನು, ಮತ್ತು

(ಗ) ಅಬ್ಕಾರಿ ರಾಜಸ್ವಕ್ಕೆ ಸಂಬಂಧಿಸಿದ ಯಾವುದೇ ಕರಾರಿನ ಕಾರಣದಿಂದ ಯಾವನೇ ವ್ಯಕ್ತಿಯಿಂದ ಸರಕಾರಕ್ಕೆ ಬರಬೇಕಾದ ಮೊಬಲಗುಗಳನ್ನು ಮುಖ್ಯವಾಗಿ ಅವುಗಳನ್ನು ಕೊಡಬೇಕಾದ ಆ ವ್ಯಕ್ತಿಯಿಂದ, ಅಥವಾ

ಅವನ ಜಾಮೀನುದಾರನಿಂದ, ಯಾರಾದರೂ ಇದ್ದರೆ ಅವು ಭೂ ಕಂದಾಯದ ಬಾಕಿಯೆಂಬಂತೆ ವಸೂಲು ಮಾಡಿಕೊಳ್ಳಬಹುದು.

(2) ಗುತ್ತಿಗೆಯನ್ನು ಡೆಪ್ಯುಟಿ ಕಮಿಷನರನು (1)ನೇ ಉಪಪ್ರಕರಣದ ಮೂಲಕ ಅಧಿಕೃತಪಡಿಸಿದ ರೀತಿಯಲ್ಲಿ, ಗುತ್ತಿಗೆದಾರನ ಅಥವಾ ಹಸ್ತಾಂತರಿತನ ತಪ್ಪಿನಿಂದಾಗಿ ಬರಬೇಕಾದ ಯಾವುದೇ ಮೊಬಲಗನ್ನು, ವಸೂಲು ಮಾಡಿಕೊಳ್ಳಬಹುದು.

**64. ತಪ್ಪಿದವರ ಸ್ವತ್ತಿನ ಮೇಲೆ ಸರಕಾರಕ್ಕೆ ಧಾರಣಾಧಿಕಾರ:–** ಈ ಅಧಿನಿಯಮದ ಮೇರೆಗೆ ಲೈಸನ್ಸು ಪಡೆದ ಅಥವಾ ಗುತ್ತಿಗೆ ಹಿಡಿದ ಯಾವನೇ ವ್ಯಕ್ತಿಯು ತಪ್ಪಿದಲ್ಲಿ, ಅವನ ಎಲ್ಲ ಬಟ್ಟಿ ಕಾರ್ಖಾನೆ, ಸಾರಾಯಿ ಕಾರ್ಖಾನೆ, ಉಗ್ರಾಣ ಅಥವಾ ಅಂಗಡಿ ಅಥವಾ ಆವರಣ, ಜೋಡಣೆಗಳು ಅಥವಾ ಸಲಕರಣೆಗಳು ಮತ್ತು ಅದನ್ನು ತಯಾರಿಸಲು ಅಂಥ ಬಟ್ಟಿ ಕಾರ್ಖಾನೆಯಲ್ಲಿ ಸಾರಾಯಿ ಕಾರ್ಖಾನೆಯಲ್ಲಿ ಉಗ್ರಾಣದಲ್ಲಿ ಅಥವಾ ಅಂಗಡಿಯಲ್ಲಿ ಅಥವಾ ಆವರಣದಲ್ಲಿ ಅಥವಾ ಅವುಗಳ ಮೇಲೆ ಇಟ್ಟಿರುವ ಮಾದಕಗಳ ಅಥವಾ ಪದಾರ್ಥಗಳ ಎಲ್ಲ ದಾಸ್ತಾನುಗಳು ಅಬ್ಕಾರಿ ರಾಜಸ್ವದ ಕ್ಲೇಮಿನ ತೀರ್ವಳಿಗಾಗಿ, ಅಥವಾ ಅಂಥ ತಪ್ಪಿನಿಂದಾಗಿ ರಾಜ್ಯ ಸರಕಾರಕ್ಕೆ ತಗಲಿದ ಯಾವುದೇ ನಷ್ಟಗಳ ಸಂಬಂಧದಲ್ಲಿ ಜಪ್ತಿಗೆ ಒಳಪಡಲು ಮತ್ತು ಮಾರಾಟದ ಉತ್ಪತ್ತಿಗಳ ಮೇಲೆ ಪ್ರಥಮ ಭಾರವಾಗಿರುವ ಅಂಥ ಕ್ಲೇಮಿನ ತೀರ್ವಳಿಗಾಗಿ ಮಾರಾಟ ಮಾಡಲ್ಪಡಲು ಹೊಣೆಯಾಗಿರತಕ್ಕದ್ದು.

**65. 17ನೇ ಪ್ರಕರಣದ ಮೇರೆಗೆ ಗುತ್ತಿಗೆದಾರನು ಬಾಕಿಗಳನ್ನು ವಸೂಲು ಮಾಡಿಕೊಳ್ಳುವುದು:–** 17ನೆಯ ಪ್ರಕರಣದ ಉಪಬಂಧಗಳ ಮೇರೆಗೆ ಗುತ್ತಿಗೆಗೆ ಕೊಡಲಾದ ಯಾವನೇ ವ್ಯಕ್ತಿಯು, ಗುತ್ತಿಗೆಯ ನಿಬಂಧನೆಗಳ ಪ್ರಕಾರ ಒಳಗುತ್ತಿಗೆಗೆ ಕೊಡುವುದು ನಿಷೇಧಿಸಲ್ಪಟ್ಟಿರದಿದ್ದಲ್ಲಿ, ಒಳಗುತ್ತಿಗೆಯ ಬಗ್ಗೆ ಬರಬೇಕಾದ ಯಾವುದೇ ಹಣವನ್ನು, ಮಾಲೀಕ ಮತ್ತು ಗೇಣಿದಾರರಿಗೆ ಸಂಬಂಧಿಸಿದ ಆಯಾ ಕಾಲದಲ್ಲಿ ಜಾರಿಯಲ್ಲಿರುವ ವಿಧಿಯ ಮೇರೆಗೆ ವಸೂಲೀಯವಾದ ಗೇಣಿಯ ಬಾಕಿಯೆಂಬಂತೆ, ತನ್ನ ಅಧೀನ ದಾರಕನಿಂದ ವಸೂಲು ಮಾಡಿಕೊಳ್ಳಲು ಅವನ ವಿರುದ್ಧ ಕ್ರಮ ಜರುಗಿಸಬಹುದು:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ ಅಂಥ ಗುತ್ತಿಗೆದಾರನು ಅಂಥ ಯಾವುದೇ ಹಣವನ್ನು ಸಿವಿಲ್ ದಾವೆಯ ಮೂಲಕ ವಸೂಲು ಮಾಡಿಕೊಳ್ಳುವ ಅಧಿಕಾರವನ್ನು ಬಾಧಿಸತಕ್ಕದ್ದಲ್ಲ.

**66. ರಫ್ತು ಮಾಡಿದ ಮದ್ಯದ ಸಂದರ್ಭಗಳಲ್ಲಿ ಮರುಪಾವತಿ:–** ರಾಜ್ಯದಲ್ಲಿ ಯಾವುದೇ ಮದ್ಯವನ್ನು ತಯಾರಿಸುವ ಅಥವಾ ಉತ್ಪಾದಿಸುವ ಸಂಬಂಧದಲ್ಲಿ ಅಬ್ಕಾರಿ ಶುಲ್ಕವು ವಿಧಿಸಲಾಗಿದ್ದು, ಅಂಥ ಮದ್ಯವನ್ನು ಅನಂತರ ಭಾರತದಲ್ಲಿ ಬೇರೆ ಯಾವುದೇ ರಾಜ್ಯಕ್ಕೆ ರಫ್ತು ಮಾಡಿದರೆ ಮತ್ತು ಆ ರಾಜ್ಯದಲ್ಲಿ ಅಬ್ಕಾರಿ ಶುಲ್ಕಕ್ಕೆ ಅಥವಾ ಪ್ರತಿ ಶುಲ್ಕಕ್ಕೆ ಗುರಿಪಡಿಸಲ್ಪಟ್ಟರೆ, ಅಂಥ ಶುಲ್ಕದ ಸಂದಾಯದ ಬಗ್ಗೆ ರುಜುವಾತು ಹಾಜರುಪಡಿಸಿದಲ್ಲಿ, ಅಬ್ಕಾರಿ ಕಮೀಶನರನು, ರಾಜ್ಯ ಸರಕಾರವು ನಿಯಮಿಸಬಹುದಾದ ಮಟ್ಟಿಗೆ ಆ ಮೊದಲೇ ಸಂದಾಯ ಮಾಡಿದ ಶುಲ್ಕವನ್ನು ಮರುಪಾವತಿ ಮಾಡಬಹುದು:

ಪರಂತು, ರಾಜ್ಯ ಸರಕಾರವು ಹಾಗೆ ನಿರ್ದೇಶಿಸುವಲ್ಲಿ, ಅಬ್ಕಾರಿ ಕಮಿಶನರನು, ಆ ನಿರ್ದೇಶನದಲ್ಲಿ ಉಲ್ಲೇಖಿಸಬಹುದಾದಂಥ ಅವಧಿ ಅಥವಾ ಅವಧಿಗಳಲ್ಲಿ, ಅಬ್ಕಾರಿ ಶುಲ್ಕವು ಸಂದೇಯವಿರುವ ಯಾವುದೇ ಮದ್ಯವನ್ನು, ಅದರ ಮೇಲೆ ಬರಬೇಕಾದ ಅಬ್ಕಾರಿ ಶುಲ್ಕ ಸಂದಾಯದ ಬಗ್ಗೆ ತಕ್ಕ ಭದ್ರತೆಯನ್ನು ಒದಗಿಸಿದಲ್ಲಿ ರಫ್ತು ಮಾಡಲು ಅನುಮತಿ ಕೊಡಬಹುದು, ಮತ್ತು ಬೇರೆ ಯಾವುದೇ ರಾಜ್ಯದಲ್ಲಿ ಅಂಥ ಮದ್ಯದ ಮೇಲೆ ಪ್ರತಿ ಶುಲ್ಕವನ್ನು ಸಂದಾಯ ಮಾಡಿದ ಬಗ್ಗೆ ರುಜುವಾತನ್ನು ಹಾಜರುಪಡಿಸಿದಲ್ಲಿ, ಈ ಪ್ರಕರಣದಲ್ಲಿ ನಿಯಮಿಸಿದ ಮಟ್ಟಿಗೆ ಸೋಡಿ ಕೊಡಬಹುದು ಮತ್ತು ಅಬ್ಕಾರಿ ಶುಲ್ಕದ ಉಳಿದ ಬಾಕಿಯನ್ನು ವಸೂಲು ಮಾಡಿಕೊಳ್ಳಬಹುದು.

**67. ವಿನಾಯಿತಿ ಇತ್ಯಾದಿ ಕೊಡಲು ರಾಜ್ಯ ಸರಕಾರದ ಶಕ್ತಿ:–** ರಾಜ್ಯ ಸರಕಾರವು ಅಧಿಸೂಚನೆಯ ಮೂಲಕ ಮತ್ತು ಅಂಥ ಅಧಿಸೂಚನೆಯಲ್ಲಿ ಉಲ್ಲೇಖಿಸಬಹುದಾದಂಥ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು–

(ಕ) (i) ಸಂಘದ ಸಶಸ್ತ್ರ ಬಲಗಳ ಸದಸ್ಯರ ಬಳಕೆಗಾಗಿ ಉಪಯೋಗಿಸಲು ಅಥವಾ (ii) ವಿಶ್ವಾಸನೀಯವಾಗಿ ವೈದ್ಯಕೀಯ, ವೈಜ್ಞಾನಿಕ, ಕೈಗಾರಿಕೆ ಅಥವಾ ಅದೇ ಬಗೆಯ ಉದ್ದೇಶಕ್ಕಾಗಿ ಉಪಯೋಗಿಸಲು, ಅಥವಾ

(iii) ಯಾವುದೇ ಕೈಗಾರಿಕೆ ಸಂಸ್ಥೆಗೆ ಅಥವಾ ಕೈಗಾರಿಕೆ ಸಂಸ್ಥೆಗಳ ವರ್ಗಕ್ಕೆ ಅಥವಾ ವರ್ಗಗಳಿಗೆ–

ಮಾರಾಟ ಮಾಡಿದ ಯಾವುದೇ ಮದ್ಯದ ಮೇಲೆ ಪ್ರಕರಣ 22ರ ಮೇರೆಗೆ ವಿಧಿಸಿದ ಅಬ್ಕಾರಿ ಶುಲ್ಕವನ್ನು ಮುಂದೆ ಅಥವಾ ಪೂರ್ವಭಾವಿಯಾಗಿ ವಿನಾಯಿತಿ ಮಾಡಬಹುದು.

(ಖ) 5ನೇ ಅಧ್ಯಾಯವನ್ನುಳಿದು, ಈ ಅಧಿನಿಯಮದ ಇತರ ಉಪಬಂಧಗಳಿಂದ, ಯಾವುದೇ ನಿರ್ದಿಷ್ಟ ಪ್ರದೇಶದಲ್ಲಿ ಅಥವಾ ಯಾವುದೇ ನಿರ್ದಿಷ್ಟ ಅವಧಿ ಅಥವಾ ಸಂದರ್ಭಕ್ಕಾಗಿ ಯಾವುದೇ ಮಾದಕಕ್ಕೆ ವಿನಾಯಿತಿ ಕೊಡಬಹುದು.

**68. ಈ ಅಧಿನಿಯಮದ ಮೇರೆಗೆ ಕೈಗೊಂಡ ಕ್ರಮದ ಬಗ್ಗೆ ರಕ್ಷಣೆ:–** ರಾಜ್ಯ ಸರಕಾರದ ವಿರುದ್ಧ ಅಥವಾ ಯಾವನೇ ಅಬ್ಕಾರಿ ಅಧಿಕಾರಿಯ ವಿರುದ್ಧ ಅಥವಾ ಈ ಅಧಿನಿಯಮದ ಮೇರೆಗೆ ಶಕ್ತಿಗಳನ್ನು ಚಲಾಯಿಸಲು ಅಥವಾ ಪ್ರಕಾರ್ಯಗಳನ್ನು ನಿರ್ವಹಿಸಲು ಶಕ್ತಗೊಳಿಸಲಾದ ಇತರ ಯಾವನೇ ಅಧಿಕಾರಿಯ ವಿರುದ್ಧ ಈ ಅಧಿನಿಯಮದ ಮೇರೆಗೆ ಸದ್ಭಾವಪೂರ್ವಕವಾಗಿ ಮಾಡಿದ ಅಥವಾ ಮಾಡಲುದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಯಾವ ದಾವೆಯನ್ನು ಅಥವಾ ಇತರ ವಿಧಿ ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**69.ಕ ಕರ್ತವ್ಯದ ಹೆಸರಿನಲ್ಲಿ ಮಾಡಿದ ಕೃತ್ಯಗಳ ಬಗ್ಗೆ ರಾಜ್ಯ ಸರಕಾರದ ಮಂಜೂರಾತಿಯಿಲ್ಲದೆ ದಾವೆಗಳನ್ನು ಅಥವಾ ಪ್ರಾಸಿಕ್ಯೂಷನುಗಳನ್ನು ಸ್ವೀಕರಿಸಕೂಡದು:–** (1) ಈ ಅಧಿನಿಯಮದ ಮೇರೆಗಿನ ಯಾವುದೇ ಕರ್ತವ್ಯದ ಹೆಸರಿನಲ್ಲಿ ಅಥವಾ ಅದಕ್ಕೆ ಮೀರಿ ಮಾಡಿದ ಯಾವುದೇ ಕೃತ್ಯದಿಂದ ಯಾವನೇ ಅಬ್ಕಾರಿ ಅಧಿಕಾರಿಯು ಅಪರಾಧ ಮಾಡಿರುವನೆಂದು ಆಪಾದಿಸಿರುವ ಅಥವಾ ದೋಷವೆಸಗಿದ್ದಾನೆಂದು ಆಪಾದಿಸಿರುವ ಅಥವಾ ಆ ಅಪರಾಧ ಅಥವಾ ದೋಷವನ್ನು ಮಾಡಿದ್ದರೆ ಅಥವಾ ಎಸಗಿದ್ದರೆ ಅದು ಮೇಲೆ ಹೇಳಿದ ಸ್ವಭಾವದ್ದಾಗಿದೆಯೆಂದು ನ್ಯಾಯಾಲಯಕ್ಕೆ ಕಂಡು ಬರುವ ಯಾವುದೇ ಸಂದರ್ಭದಲ್ಲಿ, ಪ್ರಾಸಿಕ್ಯೂಷನನ್ನಾಗಲಿ ಅಥವಾ ದಾವೆಯನ್ನಾಗಲಿ ರಾಜ್ಯ ಸರಕಾರದ ಪೂರ್ವ ಮಂಜೂರಾತಿಯಿಲ್ಲದೆ ಸ್ವೀಕರಿಸತಕ್ಕದ್ದಲ್ಲ.

(2) ಮೇಲೆ ಹೇಳಿದಂಥ ದೋಷದ ಕಾರಣದಿಂದ ಹೂಡಲುದ್ದೇಶಿಸಿದ ದಾವೆಯ ಸಂದರ್ಭದಲ್ಲಿ ದಾವೆ ಹೂಡಲು ಉದ್ದೇಶಿಸಿದ ವ್ಯಕ್ತಿಯು, ಫಿರ್ಯಾದು ಮಾಡಿದಾಗ ದೋಷದ ಸಾಕಷ್ಟು ವರ್ಣನೆಯೊಂದಿಗೆ ಉದ್ದೇಶಿಸಿದ ದಾವೆಯ ಕನಿಷ್ಠ ಒಂದು ತಿಂಗಳ ನೋಟೀಸನ್ನೂ ಆಪಾದಿತ ದೋಷಕರ್ತನಿಗೆ ಕೊಡಲು ಬದ್ಧನಾಗಿರತಕ್ಕದ್ದು, ಹಾಗೆ ಮಾಡದಿದ್ದಲ್ಲಿ ಅಂಥ ದಾವೆಯು ವಜಾ ಆಗತಕ್ಕದ್ದು.

(3) ಮೇಲೆ ಹೇಳಿದಂತೆ ಪ್ರತಿವಾದಿಗೆ ನೋಟೀಸು ಕೊಡಲಾಗಿದೆಯೆಂಬುದನ್ನು ಮತ್ತು ಅದನ್ನು ಕೊಟ್ಟ ದಿನಾಂಕವನ್ನು ವಾದ ಪತ್ರದಲ್ಲಿ ಕಾಣಿಸತಕ್ಕದ್ದು ಮತ್ತು ಪ್ರತಿವಾದಿಯು ಏನಾದರೂ ನೀಡಿಕೆ ಅಥವಾ ಪರಿಹಾರವನ್ನು ಒದಗಿಸಿದ್ದರೆ ಅದು ಏನು ಎಂಬುದನ್ನೂ ಅದರಲ್ಲಿ ಹೇಳತಕ್ಕದ್ದು. ಅಂಥ ನೋಟೀಸಿನ ಒಂದು ಪ್ರತಿಯನ್ನು ಅದನ್ನು ಯಾವಾಗ ಮತ್ತು ಯಾವ ರೀತಿಯಲ್ಲಿ ಕೊಡಲಾಯಿತೆಂಬ ಬಗ್ಗೆ ವಾದಿಯ ಹಿಂಬರಹದೊಂದಿಗೆ ಅಥವಾ ಘೋಷಣೆಯೊಂದಿಗೆ ವಾದಪತ್ರಕ್ಕೆ ಲಗತ್ತಿಸಿರತಕ್ಕದ್ದು).

**69. ದಾವೆಗಳ ಅವಧಿ ಪರಿಮಿತಿ.–** ಈ ಅಧಿನಿಯಮಕ್ಕನುಸಾರವಾಗಿ ಮಾಡಿದ ಅಥವಾ ಮಾಡಲಾಗಿದೆಯೆಂದು ಆಪಾದಿಸಲಾದ ಯಾವುದೇ ಕೃತ್ಯದ ಬಗ್ಗೆ ರಾಜ್ಯ ಸರಕಾರದ ವಿರುದ್ಧ ಅಥವಾ ರಾಜ್ಯ ಸರಕಾರವು ಮಾಡುವ ದಾವೆಯನ್ನುಳಿದು ಅಬ್ಕಾರಿ ಅಧಿಕಾರಿಯ ವಿರುದ್ಧ ಫಿರ್ಯಾದು ಮಾಡಿದ ಕೃತ್ಯದ ದಿನಾಂಕದಿಂದ ಆರು ತಿಂಗಳೊಳಗಾಗಿ ದಾವೆಯನ್ನು ಹೂಡಿದ್ದ ಹೊರತು, ಯಾವ ದಾವೆಯನ್ನು ಹೂಡತಕ್ಕದ್ದಲ್ಲ.

**70. ಕಂಪೆನಿ ಇತ್ಯಾದಿಗಳಿಂದ ಅಪರಾಧ:–** (1) ಈ ಅಧಿನಿಯಮದ ಮೇರೆಗೆ ಅಪರಾಧ ಮಾಡುವ ವ್ಯಕ್ತಿಯು ಒಂದು ಕಂಪನಿಯಾಗಿದ್ದರೆ, ಕಂಪನಿಯು ಮತ್ತು ಅಪರಾಧ ನಡೆಯುವ ಕಾಲದಲ್ಲಿ ಅದರ ವ್ಯವಹಾರದ ಪ್ರಭಾರದಲ್ಲಿರುವ ಮತ್ತು ವ್ಯವಹಾರ ನಡೆಸಲು ಕಂಪೆನಿಗೆ ಜವಾಬ್ದಾರನಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ಆ ಅಪರಾಧದ ದೋಷಿಯೆಂದು ಭಾವಿಸಲ್ಪಡತಕ್ಕದ್ದು ಮತ್ತು ಆ ಪ್ರಕಾರ ಅವನ ವಿರುದ್ಧ ಕ್ರಮ ಜರುಗಿಸಲ್ಪಡಲು ಮತ್ತು ದಂಡಿಸಲ್ಪಡಲು ಹೊಣೆಯಾಗಿರತಕ್ಕದ್ದು.

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ ಆ ಅಪರಾಧವನ್ನು ತನಗೆ ತಿಳಿಯದೆಯೆ ಮಾಡಲಾಗಿದೆಯೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಯಲು ತಾನು ಎಲ್ಲ ಯೋಗ್ಯ ಜಾಗರೂಕತೆಯನ್ನು ವಹಿಸಿದನೆಂದೂ ಅಂಥ ವ್ಯಕ್ತಿಯು ರುಜುವಾತು ಪಡಿಸಿದರೆ, ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಈ ಪ್ರಕರಣದ ಮೇರೆಗಿನ ಅಪರಾಧವನ್ನು ಕಂಪೆನಿಯು ಮಾಡಿದ್ದಲ್ಲಿ, ಮತ್ತು ಕಂಪನಿಯ ಡೈರೆಕ್ಟರು, ವ್ಯವಸ್ಥಾಪಕನು, ಕಾರ್ಯದರ್ಶಿ ಅಥವಾ ಕಂಪನಿಯ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಸಂಚಿನೊಂದಿಗೆ ಅಂಥ ಅಪರಾಧವನ್ನು ಮಾಡಲಾಗಿದೆಯೆಂದು ಅಥವಾ ಅವರ ನಿರ್ಲಕ್ಷತೆಯ ಕಾರಣದಿಂದ ಆಗಿದೆಯೆಂದು ರುಜುವಾತಾದಲ್ಲಿ, ಅಂಥ ಡೈರೆಕ್ಟರು, ವ್ಯವಸ್ಥಾಪಕ ಕಾರ್ಯದರ್ಶಿಯು ಅಥವಾ ಇತರ ಅಧಿಕಾರಿಯು ಕೂಡ ಅಂಥ ಅಪರಾಧದ ದೋಷಿಯೆಂದು ಭಾವಿಸಲ್ಪಡತಕ್ಕುದು ಮತ್ತು ಅವರ ವಿರುದ್ಧ ಕ್ರಮ ಜರುಗಿಸಲ್ಪಡಲು ಮತ್ತು ಆ ಪ್ರಕಾರ ದಂಡಿಸಲ್ಪಡಲು ಹೊಣೆಯಾಗಿರತಕ್ಕುದು.

**ವಿವರಣೆ.**– ಈ ಪ್ರಕರಣದ ಉದ್ದೇಶಗಳಿಗಾಗಿ–

(ಕ) **"ಕಂಪೆನಿ"** ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಅದು ಫರ್ಮನ್ನೂ ಅಥವಾ ವ್ಯಕ್ತಿಗಳ ಇತರ ಸಂಸ್ಥೆಯನ್ನೂ ಒಳಗೊಳ್ಳುತ್ತದೆ, ಮತ್ತು

(ಖ) ಫರ್ಮಿನ ಸಂಬಂಧದಲ್ಲಿ **"ಡೈರೆಕ್ಟರು"** ಎಂದರೆ, ಫರ್ಮಿನಲ್ಲಿಯ ಪಾಲುಗಾರನು.

**71. ನಿಯಮ ರಚನಾ ಶಕ್ತಿ:–** (1) ರಾಜ್ಯ ಸರಕಾರವು, ಅಧಿಸೂಚನೆಯ ಮೂಲಕ, ಮತ್ತು ಪೂರ್ವ ಪ್ರಕಟಣೆಯ ತರುವಾಯ, ಈ ಅಧಿನಿಯದ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಉಪಬಂಧದ ಸಾಮಾನ್ಯತೆಗೆ ಬಾಧೆ ಬಾರದಂತೆ, ರಾಜ್ಯ ಸರಕಾರವು

(ಕ) ಅಬ್ಕಾರಿ ಅಧಿಕಾರಿಗಳ ಶಕ್ತಿಗಳನ್ನು ಮತ್ತು ಕರ್ತವ್ಯಗಳನ್ನು ನಿಯಮಿಸುವ;

(ಖ) ...... .... ....

(ಗ) ಅಪೀಲುಗಳನ್ನು ಸಲ್ಲಿಸುವ ಕಾಲ ಮತ್ತು ರೀತಿಯನ್ನು ಮತ್ತು ಅಪೀಲುಗಳ ಬಗ್ಗೆ ವ್ಯವಹರಿಸುವ ಪ್ರಕ್ರಿಯೆಯನ್ನು ನಿಯಮಿಸುವ;

(ಘ) ಯಾವುದೇ ಮಾದಕದ ಆಮದು, ರಫ್ತು, ಸಾಗಾಣಿಕೆ, ತಯಾರಿಕೆ, ಬೆಳೆಸುವಿಕೆ, ಸಂಗ್ರಹಣೆ, ಸ್ವಾಧೀನ, ಸರಬರಾಜು ಅಥವಾ ದಾಸ್ತಾನು ಮಾಡುವುದನ್ನು ವಿನಿಯಮಿಸುವ, ಮತ್ತು ಅಂಥ ನಿಯಮಗಳ ಮೂಲಕ, ಇತರ ವಿಷಯಗಳೊಂದಿಗೆ–

(i) ಹೆಂಡ ಉತ್ಪತ್ತಿಯಾಗುವ ಮರದಿಂದ ಹೆಂಡ ಇಳಿಸುವುದನ್ನು, ಅಂಥ ಮರಗಳಿಂದ ಹೆಂಡ ತೆಗೆಯುವುದನ್ನು, ಅವುಗಳಿಗೆ ಗುರುತು ಹಾಕುವುದನ್ನು ಮತ್ತು ಅಂಥ ಗುರುತುಗಳನ್ನು ರಕ್ಷಿಸುವುದನ್ನು ವಿನಿಯಮಿಸಬಹುದು;

(ii) ಮದ್ಯಸಾರದ ಗುಣಹರಣ ಮಾಡುವ ವಿಧಾನವನ್ನು ಮತ್ತು ಖಚಿತಪಡಿಸಿದ ಮದ್ಯಸಾರದ ಗುಣಹರಣವನ್ನು ಘೋಷಿಸಬಹುದು; ಮತ್ತು

(iii) ಸ್ವತಃ ತನ್ನ ಅಧಿಕಾರಿಗಳ ಮೂಲಕ ಅಥವಾ ಅವರ ನೇತೃತ್ವದಲ್ಲಿಯೇ ಮದ್ಯಸಾರದ ಗುಣ ಹರಣ ಮಾಡಿಸುವುದು;

(ಙ) ಯಾವ ಅವಧಿಗಾಗಿ, ಯಾವ ಪ್ರದೇಶಗಳಲ್ಲಿ ಮತ್ತು ಯಾವ ವ್ಯಕ್ತಿಗಳಿಗೆ ಅಥವಾ ವ್ಯಕ್ತಿಗಳ ವರ್ಗಗಳಿಗೆ ಯಾವುದೇ ಮಾದಕದ ಸಗಟು ಅಥವಾ ಚಿಲ್ಲರೆ ಮಾರಾಟದ ಲೈಸೆನ್ಸು ಕೊಡಬಹುದೆಂಬುದನ್ನು ವಿನಿಯಮಿಸುವ ಮತ್ತು ಯಾವುದೇ ಸ್ಥಳೀಯ ಪ್ರದೇಶದಲ್ಲಿ ಅಂಥ ಎಷ್ಟು ಲೈಸೆನ್ಸುಗಳನ್ನು ಕೊಡಬಹುದೆಂಬುದನ್ನು ವಿನಿಯಮಿಸುವ;

(ಚ) ಯಾವುದೇ ಪ್ರದೇಶದಲ್ಲಿ ಅಂಥ ಮಾರಾಟದ ಸಲುವಾಗಿ ಲೈಸೆನ್ಸು ಕೊಡುವುದಕ್ಕೆ ಮುಂಚೆ ಅನುಸರಿಸಬೇಕಾದ ಪ್ರಕ್ರಿಯೆಯನ್ನು ಮತ್ತು ಖಚಿತಪಡಿಸಿಕೊಳ್ಳಬೇಕಾದ ವಿಷಯಗಳನ್ನು ವಿನಿಯಮಿಸುವ;

(ಛ) ಯಾವುದೇ ಶುಲ್ಕ ಅಥವಾ ಫೀಜು ಸಂದಾಯ ಮಾಡುವ ಕಾಲ, ಸ್ಥಳ ಮತ್ತು ರೀತಿಯನ್ನು ಮತ್ತು ಯಾವುದೇ ಶುಲ್ಕದ ಅಥವಾ ಫೀಜಿನ ಯೋಗ್ಯ ಸಂದಾಯದ ಬಗ್ಗೆ ಜಾಮೀನು ಪಡೆದುಕೊಳ್ಳುವುದನ್ನು ವಿನಿಯಮಿಸುವ;

(ಜ) ಯಾ ಪ್ರಾಧಿಕಾರಿಯಿಂದ, ಯಾವ ನಮೂನೆಯಲ್ಲಿ, ಮತ್ತು ಯಾವ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಮತ್ತು ಅವುಗಳಿಗೆ ಒಳಪಟ್ಟು ಯಾವುದೇ ಲೈಸೆನ್ಸು ಅಥವಾ ಅನುಮತಿ ಪತ್ರವನ್ನು ಕೊಡಬಹುದೆಂಬುದನ್ನು, ವಿನಿಯಮಿಸುವ, ಮತ್ತು ಅಂಥ ನಿಯಮಗಳ ಮೂಲಕ, ಇತರ ವಿಷಯಗಳೊಂದಿಗೆ–

(i) ಯಾವುದೇ ಲೈಸೆನ್ಸು ಅಥವಾ ಅನುಮತಿ ಪತ್ರವು ಜಾರಿಯಲ್ಲಿರುವ ಅವಧಿಯನ್ನು ನಿಗದಿ ಮಾಡಬಹುದು;

(ii) ಯಾವುದೇ ಗುತ್ತಿಗೆ, ಲೈಸೆನ್ಸು ಅಥವಾ ಅನುಮತಿ ಪತ್ರದ ಅಥವಾ ಅಬ್ಕಾರಿ ಶುಲ್ಕ ವಿಧಿಸಬಹುದಾದ ಯವುದೇ ವಸ್ತುವಿನ ದಾಸ್ತಾನಿನ ಬಗ್ಗೆ ಸಂದೇಯವಿರುವ ಫೀಜಿನ ದರವನ್ನು ಅಥವಾ ಅವುಗಳನ್ನು ನಿಗದಿ ಮಾಡುವ ರೀತಿಯನ್ನು, ನಿಯಮಿಸಬಹುದು;

(iii) ಯಾವುದೇ ಲೈಸೆನ್ಸಿನ ಅಥವಾ ಅನುಮತಿ ಪತ್ರದ ಷರತ್ತುಗಳನ್ನು ಪಾಲಿಸುವ ಬಗ್ಗೆ ಅವುಗಳನ್ನು ಪಡೆದವರು ಠೇವಣಿ ಮಾಡಬೇಕಾಗುವ ಭದ್ರತೆ ಮೊಬಲಗುಗಳನ್ನು ನಿಯಮಿಸಬಹುದು;

(iv) ಲೈಸೆನ್ಸು ಪಡೆದವರು ಇಟ್ಟುಕೊಂಡಿರಬೇಕಾದ ಲೆಕ್ಕಗಳನ್ನು ಮತ್ತು ಕಳಿಸಬೇಕಾದ ವಿವರಣ ಪಟ್ಟಿಗಳನ್ನು ನಿಯಮಿಸಬಹುದು;

(v) ಲೈಸೆನ್ಸುಗಳ ವರ್ಗಾವಣೆಯನ್ನು ನಿಷೇಧಿಸಬಹುದು ಅಥವಾ ವಿನಿಯಮಿಸಬಹುದು; ಮತ್ತು

(vi) ಯಾವ ವಯಸ್ಸಿಗಿಂತ ಕಡಿಮೆಯಿರುವ ಮಕ್ಕಳನ್ನು ನಿಯೋಜಿಸಿಕೊಳ್ಳುವುದು ಮತ್ತು ಮಕ್ಕಳಿಗೆ ಅಬ್ಕಾರಿ ಶುಲ್ಕ ವಿಧಿಸಬಹುದಾದ ವಸ್ತುಗಳನ್ನು ಮಾರಾಟ ಮಾಡುವುದು ಅಥವಾ ಕೊಡುವುದು ವಿಧಿವಿರುದ್ಧವೆಂಬುದನ್ನು ನಿಯಮಿಸಬಹುದು;

(ಝ) ಉಪಯೋಗಕ್ಕೆ ಅನರ್ಹವೆಂದು ಭಾವಿಸಲಾದ ಯಾವುದೇ ಮಾದಕವನ್ನು ನಾಶ ಮಾಡುವ ಅಥವಾ ಇತರ ರೀತಿಯಲ್ಲಿ ವಿಲೆ ಮಾಡುವ ಬಗ್ಗೆ ಉಪಬಂಧಿಸುವ;

(ಞ) ಮುಟ್ಟುಗೋಲು ಹಾಕಿಕೊಂಡ ವಸ್ತುಗಳ ವಿಲೆಯನ್ನು ವಿನಿಯಮಿಸುವ;

(ತ) ಸಾಕ್ಷಿದಾರರಿಗೆ ಮತ್ತು ಈ ಅಧಿನಿಯಮದ ಮೇರೆಗೆ ಅಪರಾಧಗಳ ಆರೋಪಿತರಿಗೆ ಮತ್ತು ಆ ತರುವಾಯ ಬಿಡುಗಡೆಯಾದವರಿಗೆ ಅಥವಾ ದೋಷ ಮುಕ್ತರಾದವರಿಗೆ ವೆಚ್ಚವನ್ನು ಕೊಡುವುದನ್ನು ವಿನಿಯಮಿಸುವ;

(ಥ) ಸಾಕ್ಷಿದಾರರನ್ನು ಸಮನು ಮಾಡಲು ಅಬ್ಕಾರಿ ಅಧಿಕಾರಿಗಳಿಗೆ ಇರುವ ಶಕ್ತಿಯನ್ನು ವಿನಿಯಮಿಸುವ;

(ದ) ಹೆಂಡವನ್ನು ಇಳಿಸುವ ಹೆಂಡದ ಮರಗಳ ಬಗ್ಗೆ ಸರ್ಕಾರಕ್ಕೆ ಸಂದೇಯವಿರುವ ಗೇಣಿಯನ್ನು ನಿಯಮಿಸುವ;

(ಧ) ಈ ಅಧಿನಿಯಮದ ಮೇರೆಗೆ ನಿಯಮಿಸಬಹುದಾದ ಇತರ ಯಾವುದೇ ವಿಷಯದ ಬಗ್ಗೆ ನಿಯಮಗಳನ್ನು ರಚಿಸಬಹುದು.

(3) ಈ ಅಧಿನಿಯಮದ ಮೇರೆಗಿನ ನಿಯಮವನ್ನು ಪೂರ್ವಭಾವಿಯಾಗಿ ರಚಿಸಬಹುದು ಮತ್ತು ಅಂಥ ನಿಯಮವನ್ನು ರಚಿಸಿದಾಗ, ನಿಯಮವನ್ನು ರಚಿಸಲು ಇರುವ ಕಾರಣಗಳನ್ನು ಒಂದು ಹೇಳಿಕೆಯಲ್ಲಿ ಉಲ್ಲೇಖಿಸಿ ಅದನ್ನು ರಾಜ್ಯ ವಿಧಾನ ಮಂಡಲದ ಎರಡೂ ಸದನಗಳ ಮುಂದೆ ಮಂಡಿಸತಕ್ಕದು. (4)ನೆಯ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೇ ಮಾರ್ಪಾಡಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವು ಈ ಅಧಿನಿಯಮದಲ್ಲಿಯೇ ಅಧಿನಿಯಮಿಸಲಾದಂತೆ ಪ್ರಭಾವಕಾರಿಯಾಗಿರತಕ್ಕದು.

(4) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನಗಳ ಮುಂದೆ, ಅದು ಅಧಿವೇಶನದಲ್ಲಿರುವಾಗ ಅದು ಒಂದು ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾಗಿದ್ದ, ಒಟ್ಟು ಮೂವತ್ತು ದಿನಗಳವರೆಗೆ ಇಡತಕ್ಕದು ಮತ್ತು, ಅದನ್ನು ಹಾಗೆ ಇರಿಸಿದ ಅಧಿವೇಶನವು ಅಥವಾ ಅದರ ನಿಕಟ ತರುವಾಯದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದರೆ, ಅಂಥ ಯಾವುದೇ ಮಾರ್ಪಾಟು ಅಥವಾ ಶೂನ್ಯತೆಯು ಆ ನಿಯಮದ ಮೇರೆಗೆ ತತ್ಪೂರ್ವದಲ್ಲಿ ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

**72. ನಿರಸನ ಮತ್ತು ಉಳಿಸುವಿಕೆ:–** ಈ ಮುಂದಿನ ಅಧಿನಿಯಮಗಳು ಎಂದರೆ,

(ಕ) ಮೈಸೂರು ಅಬ್ಕಾರಿ ಅಧಿನಿಯಮ, 1901 (ಮೈಸೂರು ಅಧಿನಿಯಮ, 1901ರ 5);

(ಖ) ಅಬ್ಕಾರಿ ಅಧಿನಿಯಮ, 1316 ಫ (ಹೈದರಾಬಾದು ಅಧಿನಿಯಮ, 1, 1316 ಫ. ಯ 1) ಮತ್ತು ಮಾದಕ ದ್ರವ್ಯಗಳ ಅಧಿನಿಯಮ, 1333 ಫ (ಹೈದರಾಬಾದು, ಅಧಿನಿಯಮ, 1333 ಫ. ಯ 4);

(ಗ) ಮದ್ರಾಸು ಅಬ್ಕಾರಿ ಅಧಿನಿಯಮ, 1886 (ಮದ್ರಾಸು ಅಧಿನಿಯಮ, 1, 1886); ಇವು ನಿರಸಿತವಾಗತಕ್ಕದು;

ಪರಂತು, ಮೈಸೂರು ಸಾಮಾನ್ಯ ಖಂಡಗಳ ಅಧಿನಿಯಮ, 1899ರ (ಮೈಸೂರು ಅಧಿನಿಯಮ, 3, 1899) 6ನೆಯ ಪ್ರಕರಣವು ಅಂಥ ನಿರಸನದ ಬಗ್ಗೆ ಅನ್ವಯವಾಗತಕ್ಕುದು, ಮತ್ತು ಸದರಿ ಅಧಿನಿಯಮದ 8 ಮತ್ತು 24ನೆಯ ಪ್ರಕರಣಗಳ ಸದರಿ ಅಧಿನಿಯಮಗಳು ಉಕ್ತ ಅಧಿನಿಯಮದ ಅರ್ಥದಲ್ಲಿ ಅಧಿನಿಯಮಗಳಾಗಿದ್ದಂತೆ ಮತ್ತು ನಿರಸಿತವಾಗಿದ್ದು ಈ ಅಧಿನಿಯಮದ ಮೂಲಕ ಮತ್ತೆ ಅಧಿನಿಯಮಿತವಾದಂತೆ, ಅನ್ವಯವಾಗತಕ್ಕದ್ದು.

(ಕರ್ನಾಟಕ ಸರ್ಕಾರದಿಂದ ಪ್ರಕಟಿತ)

ಭಾನಿ 20/ ರಾಶಾಶಾ/ 2009

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು – ಪಿ5